ಮಾತ್ರ ಪ್ರಾತಿನಿಧ್ಯ ಕೊಟ್ಟಿರುತ್ತಾರೆ, ಬೇರೆ Factory; Mill, Company Labour ಗೂ ಪ್ರಾತಿನಿಧ್ಯ ಕೊಡಬೇಕಾಗಿತ್ತು ಲೇಬರ್ಸ್ ಮತ್ತು ವಿಮೆನ್ಸ್‌ಗೆ ಮಾತ್ರ ಕೊಟ್ಟಿದ್ದಾರೆ. ಆದರೆ ಈ ವಿಚಾರದಲ್ಲಿ ನನ್ನ ಸಲಹೆ ಏನೆಂದರೆ, ರಾಜ್ಯಾಂಗದಲ್ಲಿ ಹೇಳಿರುವಂತೆ ಯಾರು ಸೋಷಿಯಲಿ ಮತ್ತು ಎಜುಕೇಷನಲಿ ಬ್ಯಾಕ್‌ವರ್ಡ್ ಆಗಿದ್ದಾರೆ, ಅಂತಹವರಿಗೂ ಸಹ ಇದರಲ್ಲಿ ಸೂಕ್ತ ಪ್ರಾತಿನಿಧ್ಯ ಕೊಡಬೇಕು ಹಾಗೆಯೇ ಫ್ರೀಡಮ್ ಫೈಟರ್ಸ್‌ಗೂ ಇದರಲ್ಲಿ ಪ್ರಾತಿನಿಧ್ಯ ಕೊಟ್ಟಿದ್ದರೆ ಚೆನ್ನಾಗಿರುತ್ತಿತ್ತು.

ಇನ್ನು ಕಾರ್ಪೊರೇಷನ್ ಮೀಟಿಂಗ್‌ಗಳಲ್ಲಿ ಎಂ.ಎಲ್.ಎ. ಆದವರು ಎಕ್ಸ್-ಅಫಿಷಿಯೋ ಮೆಂಬರ್ ಆಗಿ ಭಾಗವಹಿಸಬೇಕೆಂದು ಕೆಲವರು ಹೇಳಿದರೆ, ಮತ್ತೆ ಕೆಲವರು ಆ ರೀತಿ ಭಾಗವಹಿಸುವುದು ಬೇಡ ಎಂದು ಹೇಳಿದರು. ಈ ಬಗ್ಗೆ ನಾನು ಸಲಹೆ ಮಾಡುವುದೇನೆಂದರೆ, ಇವರು ಎಕ್ಸ್-ಅಫಿಷಿಯೋ ಮೆಂಬರ್ ಆಗಿ ಭಾಗವಹಿಸುವುದು ಒಳ್ಳೆಯದು ಎಂದು ಹೇಳುತ್ತೇನೆ. ಏಕೆಂದರೆ ಇವರೂ ಸಹ ಜನತಾ ಪ್ರತಿನಿಧಿಗಳಾಗಿರುತ್ತಾರೆ. ಒಂದು ವಿಧಾನಸಭಾ ಕ್ಷೇತ್ರದಿಂದ ೬-೭ ಜನ ಕಾರ್ಪೊರೇಟರ್‌ಗಳು ಆರಿಸಿ ಬಂದಿರುತ್ತಾರೆ ಅವರ ಜೊತೆಯಲ್ಲಿ ಎಂ.ಎಲ್.ಎ.ಎಂ.ಪಿ, ಆದವರೂ ಸಹ ಕಾರ್ಪೊರೇಷನ್ ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸುವುದಕ್ಕೆ ಅವಕಾಶ ಮಾಡಿಕೊಟ್ಟರೆ ಅವರೂ ಸಹ ರಚನಾತ್ಮಕವಾದಂಥ ಟೀಕೆಟಿಪ್ಪಣಿಗಳನ್ನು ಮಾಡುವುದಕ್ಕೆ ಸಹಾಯವಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ ಸಭೆ ಸ್ವಲ್ಪ ದೊಡ್ಡದಾಗಿ ಕಾಣಿಸಬಹುದು ಆದರೆ ಈ ತರಹ ರಚನೆಯಾಗುವುದರಿಂದ ಅನುಕೂಲಗಳು ಹೆಚ್ಚು ಎಂದು ಹೇಳಿದರೆ ತಪ್ಪಾಗಲಾರದು, It will be more reprentatives in character ಆಗುತ್ತದೆ. Term of officers of the Corporation ಈ ಬಿಲ್ಲಿನಲ್ಲಿ ೪ ವರ್ಷ ಎಂದು ಇದೆ. ಒಂದು ಪಕ್ಷ ಸರ್ಕಾರ Notification ಮೂಲಕ ಒಂದು ವರ್ಷ ಹೆಚ್ಚು ಜೀವದಾನ ಕೊಡಲು ಅವಕಾಶ ಕೊಟ್ಟಿದ್ದಾರೆ ಇದು ಒಂದು ಹೊಸ ಹೆಜ್ಜೆ ಇಟ್ಟ ಹಾಗೆ ಆಯಿತು.

ಹೀಗೆ ಕಾರ್ಪೊರೇಷನ್ ಮೆಂಬರ್‌ಷಿಪ್ ಟರ್ಮ್ ಆಫ್ ಆಫೀಸ್ ೪ ವರ್ಷಗಳು ಎಂಬುದಾಗಿ ಹೇಳಿದಿರಿ. ಯಾವ ಕಾರಣದಿಂದಲೂ ೫ ವರ್ಷಗಳಿಗೆ ಮೇಲ್ಪಟ್ಟು ಹೋಗಬಾರದೆಂದು ಹೇಳುವುದನ್ನು ನಾನೂ ಸಹ ಒಪ್ಪಿಕೊಂಡಿದ್ದೇನೆ.

ಇನ್ನು ಸ್ಟ್ಯಾಂಡಿಂಗ್ ಕಮಿಟೀಸ್ ಬಗ್ಗೆ ಒಂದು ಮಾತು. ಈ standing committeeಗೆ ಒಂದು ವರ್ಷ ಆಯುಸ್ಸು ೩ ಮೀಟಿಂಗಿಗೆ consecutive ಆಗಿ absent ಆಗುತ್ತಾನೆ. ಅವನು ಸದಸ್ಯತ್ವ ಕಳೆದುಕೊಳ್ಳುತ್ತಾನೆ. ಒಬ್ಬನೇ ಎರಡು standing committeeಯಲ್ಲಿ ಇರಲು ಸಾಧ್ಯವಿಲ್ಲ. ಇವೆಲ್ಲ ಬಹಳ ಒಳ್ಳೆಯದು. ಸ್ಟ್ಯಾಂಡಿಂಗ್ ಕಮಿಟಿ, (ಎಜುಕೇಷನ್) ಎಂಬುದು ಬಹಳ ಜವಾಬ್ದಾರಿಯುತವಾದುದು. ಇದರ ಬಗ್ಗೆ ನನಗೆ ಸ್ವಲ್ಪ ಸಂದೇಹ ಮೂಡಿದೆ. "ಸ್ಕೂಲು" ಕಾರ್ಪೊರೇಷನ್ ಏರಿಯಾದಲ್ಲಿದ್ದರೆ ಅದರ ಜವಾಬ್ದಾರಿ ಈಗ ಎರಡು ಕಡೆಗಳಿಂದ ನಡೆಯುತ್ತಿದೆ. ಕಾರ್ಪೊರೇಷನ್ ಏರಿಯಾವನ್ನೆಲ್ಲಾ ಡಿಕ್ಲೇರ್ಡ್ ಏರಿಯಾವೆಂದು ಮೊದಲಿನಿಂದಲೂ ಕರೆಯುತ್ತಿದ್ದೇವೆ, ನನಗೆ ತಿಳಿದುಬಂದ ಹಾಗೆ ಪ್ರೈಮರಿ ಎಜುಕೇಷನ್ ಈಗ ಎರಡು ಕಡೆಗಳಿಂದಲೂ ನಡೆಯುತ್ತಿದೆ ಒಂದು ಕಡೆ ಸರ್ಕಾರದವರು ನಡೆಸುತ್ತಿದ್ದಾರೆ. ಇನ್ನೊಂದು ಕಡೆ ಕಾರ್ಪೊರೇಷನ್ನಿನವರು ನಡೆಸುತ್ತಿದ್ದಾರೆ. ಇದು ಸರಿಯಲ್ಲ. ಇದಕ್ಕೆ ಒಂದೇ ಏಜನ್ಸಿ ಇದ್ದರೆ ಬಹಳ ಒಳ್ಳೆಯದು ಕಾರಣ ಕೆಲವು ಸಂದರ್ಭಗಳಲ್ಲಿ ಸರ್ಕಾರದಿಂದ ಗ್ರ್ಯಾಂಟ್ಸ್ ಕೊಟ್ಟರೂ ಅನೇಕ ಸ್ಕೂಲ್‌ಗಳಲ್ಲಿ ಸಾಕಷ್ಟು ಫರ್ನೀಚರ್ ಇರುವುದಿಲ್ಲ ಸ್ಟ್ಯಾಫ್ ಸಹ ಇರುವುದಿಲ್ಲ. ನನಗೆ ತಿಳಿದಿರುವ ಹಾಗೆ ಅನೇಕ ಸಂದರ್ಭಗಳಲ್ಲಿ ಸರ್ಕಾರದ ಸ್ಕೂಲುಗಳಲ್ಲಿ ಸರಿಯಾದ ಸ್ಟ್ಯಾಫೇ ಇರುವುದಿಲ್ಲ. ಕಾರ್ಪೊರೇಷನ್ ಸ್ಕೂಲುಗಳಲ್ಲಿಯೂ ಕೆಲವು ಸಂದರ್ಭಗಳಲ್ಲಿ ಇಂತಹ ತೊಂದರೆಗಳು ಉಂಟಾಗುತ್ತಿವೆ. ಆದ್ದರಿಂದ ಕಂಪಲ್ಸರಿಯಾಗಿ ಪ್ರೈಮರಿ ಎಜುಕೇಷನ್ನನ್ನು ಸರ್ಕಾರದವರೇ ವಹಿಸಿಕೊಳ್ಳಬೇಕು. ಕಾನ್‌ಸ್ಟಿಟ್ಯೂಷನ್ ಪ್ರಕಾರ ಪ್ರೈಮರಿ ಎಜುಕೇಷನ್ ಸರ್ಕಾರ ಕೊಡಬೇಕು. ಗ್ರ್ಯಾಂಟ್ ಕಾರ್ಪೊರೇಷನ್ ಕೊಡಲಿ ಅಥವಾ ಸರ್ಕಾರ ಕೊಡಲಿ ಮಕ್ಕಳಿಗೆ ಸರಿಯಾದ ಸ್ಟ್ಯಾಂಡರ್ಡ್ ಆಫ್ ಎಜುಕೇಷನ್ ಇಲ್ಲದೇ ಹೋದರೆ ನಮ್ಮ ದೇಶದಲ್ಲಿ ವಿದ್ಯಾಪ್ರಗತಿ ಸರಿಯಾಗಿ ಆಗುವುದಿಲ್ಲ. ಪರ್ಸಂಟೇಜ್ ಆಫ್ ಲಿಟರಸಿ ಕೇಳಿದಾಗ ಬಹಳ ಸಂದೇಹ ಉಂಟಾಗುತ್ತದೆ ಕಾರ್ಪೊರೇಷನ್ ಸ್ಕೂಲುಗಳಲ್ಲಿಯೂ ಸರಿಯಾಗಿ ರಿಜಲ್ಟ್ಸ್ ಬರುತ್ತಾ ಇಲ್ಲ ಆದ್ದರಿಂದಲೇ ಅನುಕೂಲಸ್ಥರು ತಮ್ಮ ಮಕ್ಕಳನ್ನು ಬಿಷಪ್ cotton ಸ್ಕೂಲ್‌ಗಳಿಗೂ ಮತ್ತು ಕಾನ್ವೆಂಟ್ ಸ್ಕೂಲುಗಳಿಗೂ ಕಳುಹಿಸುತ್ತಾರೆ. ಆದರೆ ಬಡವರು ತಮ್ಮ ಮಕ್ಕಳನ್ನು ದುಡ್ಡಿನ ಅನುಕೂಲತೆಗಳು ಇಲ್ಲದೇ ಕೇವಲ ಕಾರ್ಪೊರೇಷನ್ನಿಗೆ ಕಳುಹಿಸುತ್ತಾರೆ. ಆದುದರಿಂದಲೇ ಕೇವಲ ಸೇಂಡ ೧೦ ಅಥವಾ ೧೫ರಷ್ಟು ಮಾತ್ರ ಪರ್ಸಂಟೇಜ್ ಆಫ್ ಪಾಸಸ್ ಬರುತ್ತಿದೆ. ಇದರಿಂದ ಎಫಿಷಿಯನ್ಸಿ ಎಲ್ಲಿದೆಯೆಂದು

ನಾನು ಪ್ರಶ್ನೆ ಮಾಡಬೇಕಾಗಿದೆ. ಸರ್ಕಾರದವರು ಒಂದು ಕಡೆ ಕಾರ್ಪೊರೇಷನ್ನಿನವರು ಒಂದು ಕಡೆ ಈ ಎಜುಕೇಷನ್ನಿನಲ್ಲಿ ತಮ್ಮ ಅಧಿಕಾರವನ್ನು ಮಾಡುತ್ತಾ ಹೋದರೆ ಅದರಿಂದೇನೂ ಅಷ್ಟು ಪ್ರಯೋಜನವಾಗುವುದಿಲ್ಲ. ಇದನ್ನು ಸರ್ಕಾರ ಗಮನದಲ್ಲಿ ಇಟ್ಟುಕೊಳ್ಳಬೇಕು ಜೊತೆಗೆ ಕಾರ್ಪೊರೇಷನ್ನಿನವರು ಲೈಬ್ರರಿ ಸಹ ಮೇಂಟೇನ್ ಮಾಡುತ್ತಾ ಇದ್ದಾರೆ. ಆದರೂ ಎಜುಕೇಷನ್' ಸೆಸ್ ಸರಿಯಾಗಿ ಬರುತ್ತಾ ಇಲ್ಲ. ಇದರಿಂದ ಅಲ್ಲಿನ ಮಕ್ಕಳು ಎಷ್ಟರ ಮಟ್ಟಿಗೆ ಮುಂದುವರಿದಿದ್ದಾರೆಂಬುದನ್ನು ನೋಡಿದರೆ ಅವರು ಬಹಳವಾಗಿ ಹಿಂದುಳಿದಿದ್ದಾರೆ. ಆದ್ದರಿಂದಲೇ ಈ ಆಕ್ಟ್‌ನಲ್ಲಿ ಸ್ಟಾಂಡಿಂಗ್ ಕಮಿಟಿ (ಎಜುಕೇಷನ್ನಿಗೆ) ಈ ಒಂದು ವಿಚಾರದಲ್ಲಿ ಹೆಚ್ಚಿಗೆ ಪವರ್ ಕೊಡಬೇಕು. ಸರ್ಕಾರ ಅದಕ್ಕಾಗಿ ಹೆಚ್ಚು ಹಣವನ್ನು ಅವರಿಗೆ ಒದಗಿಸಬೇಕು ಎಂದು ಮತ್ತೆ ಒತ್ತಿ ಹೇಳುತ್ತೇನೆ.

ಇನ್ನು ಕಾರ್ಪೊರೇಷನ್ ಹೆಲ್ತ್ standing committee ಬಗ್ಗೆ ಒಂದು ಮಾತು ನಗರದ ಆರೋಗ್ಯ ಕಾಪಾಡುವ ಜವಾಬ್ದಾರಿ ಈ committeeಯದು ಅವರಿಗೆ ಸಂಬಂಧಪಟ್ಟ ಡಿಸ್ಪೆನ್ಸರೀಸ್ ಮತ್ತು ಹಾಸ್ಪಿಟಲ್ಸ್ ಇವೆ. ಸಾಧ್ಯವಾದಷ್ಟು ಮಟ್ಟಿಗೂ ಅವುಗಳು ಒಂದು ವಾರ್ಡ್ ಅಥವಾ ಡಿವಿಜನ್‌ನ್ನು ಇರುತ್ತವೆ. ಈಗ ಇದರ ಪ್ರಕಾರ ೬೩ ಡಿವಿಷನ್‌ಗಳು ಆಗುತ್ತವೆ. ಪ್ರತಿಯೊಂದು ವಾರ್ಡಿಗೂ, ಒಂದು Dispensary ಅಥವಾ Maternity ward ಇರಬೇಕು. ಸ್ಟ್ಯಾಂಡಿಂಗ್ ಕಮಿಟಿಗೂ ಅಲ್ಲಿ ಯಾರೇ ಬರಲಿ ಅವರಿಗೆ ಹೆಚ್ಚು ಪವರ್ ಇರಬೇಕು. ಮಾನ್ಯ ಶ್ರೀ ಪುಟ್ಟಸ್ವಾಮಿಯವರು ಹೇಳಿದಂತೆ ಸರ್ಕಾರದವರು ಇದಕ್ಕಾಗಿ ಸಬ್ಸಿಡಿ ರೂಪದಲ್ಲಿ ಹೆಚ್ಚಿಗೆ ಹಣ ಕೊಡಬೇಕು. ಬೆಂಗಳೂರು ಕಾರ್ಪೊರೇಶನ್ನಿಗೆ ೧೬ ಕೋಟಿ ರೂಪಾಯಿಗಳು ಬೇರೆ ಬೇರೆ ರೀತಿಯಲ್ಲಿ ವರಮಾನ ಬರುತ್ತಿದೆ. ಟ್ಯಾಕ್ಸ್ ರೂಪದಲ್ಲಿ, ಲೈಸೆನ್ಸ್ ರೂಪದಲ್ಲಿ ಮತ್ತು ಆಕ್ಟ್ರಾಯಿ ರೂಪದಲ್ಲಿ ಈ ವರಮಾನ ಬರುತ್ತಿದೆ ನನ್ನ ಅನುಭವದಲ್ಲಿ ಆಕ್ಟ್ರಾಯಿ ತೆಗೆಯಬೇಕೆಂದು ನನ್ನ ವಾದ. ಆದರೆ ಅದಕ್ಕೆ ಆಲ್ಟರ್‌ನೇಟಿವ್ ಏನು ? ಕಂಡು ಹಿಡಿದಿದ್ದೇವೆ ? ಸೇಲ್ಸ್ ಟ್ಯಾಕ್ಸ್ ಮತ್ತು ಬೇರೆ ಬೇರೆ ಟ್ಯಾಕ್ಸ್‌ಗಳು ಸಿಂಹಪಾಲು ಕೇಂದ್ರ ಸರ್ಕಾರಕ್ಕೆ ಹೋಗುತ್ತದೆ. ಇದರಿಂದ ನಮಗೆ ಇಲ್ಲಿ ಏನು ಸಿಗುತ್ತದೆ ? Without Octroi, municipality cannot live ಇದರಿಂದ ನಮ್ಮ ಕೆಲಸಕಾರ್ಯಗಳಿಗೆ ದುಡ್ಡು ಎಲ್ಲಿ ಸಾಕಾಗುತ್ತದೆ ? ಅನೇಕ ಸಂದರ್ಭಗಳಲ್ಲಿ ಸರ್ಕಾರ ಕಾರ್ಪೊರೇಷನ್ನಿಗೆ ಕೊಡತಕ್ಕ ಹಣ ಸಾಲದೆ ಬರುತ್ತದೆ, ಇದರಿಂದ ಹೆಚ್ಚಿಗೆ ರಿಸೋರ್ಸಸ್ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ. There should be a healthy co-ordination ಇರಬೇಕೆಂದು ಇದರ ಬಗ್ಗೆ ನಾನು ಮೊದಲೇ ಸಲಹೆ ಮಾಡಿದ್ದೆ. ಮ್ಯಾಟರ್‌ನಿಟಿ ಮತ್ತು ಲೋಕಲ್ ಡಿಸ್ಪೆನ್ಸರಿ ಬಗ್ಗೆ, ಅದರಲ್ಲಿಯೂ ಹೆಲ್ತ್ ಕಮಿಟಿಗೆ, ಹಣವನ್ನು ಹೆಚ್ಚಿಗೆ ಕೊಡಬೇಕು. ಈಗಿನ ಒಂದು ಪರಿಸ್ಥಿತಿಯಲ್ಲಿ ಬೆಂಗಳೂರು ಕಾರ್ಪೊರೇಷನ್ನಿನ ಇತರ ಇಲಾಖೆಗಳಲ್ಲಿಯೂ ಒಂದು ರೀತಿಯ ಕೋಆರ್ಡಿನೇಷನ್ ಇಲ್ಲ. ಕೇವಲ ಹೆಲ್ತ್ ಡಿಪಾರ್ಟ್‌ಮೆಂಟ್, ಎಜುಕೇಷನ್ ಡಿಪಾರ್ಟ್‌ಮೆಂಟ್ ಮತ್ತು ಇಂಜನಿಯರಿಂಗ್ ಡಿಪಾರ್ಟ್‌ಮೆಂಟ್ ಎಂಬುದಾಗಿ ಹೆಸರಿಗೆ ಬೇರೆ ಬೇರೆ ಇವೆಯಷ್ಟೇ. ಆದರೆ ಒಂದು ರೀತಿಯಲ್ಲಿ ಇವುಗಳಿಗೆ ಹೆಲ್ತ್ ಕೋ ಆರ್ಡಿನೇಷನ್ ಇರಬೇಕು. ನಾನೇ ಅನೇಕ ಸಾರಿ ನೋಡಿದ್ದೇನೆ. ಬೆಂಗಳೂರು ಪಟ್ಟಣದಲ್ಲಿ ಒಂದು ಕಡೆ ರೋಡ್ ರಿಪೇರಿ ಮಾಡುತ್ತಿದ್ದರೆ ಅವರು ಮಾಡಿದ್ದ ಕಡೆಗಳಲ್ಲಿ ಮತ್ತೊಂದು ಸಾರಿ ವಾಟರ್ ಬೋರ್ಡಿನವರು, ಎಲೆಕ್ಟ್ರಿಸಿಟಿ ಬೋರ್ಡಿನವರು, ಪೋಸ್ಟ್ ಅಂಡ್ ಟೆಲಿಗ್ರಾಫ಼ಿಸ್‌ನವರು ಅವರು ಅಗೆಯುತ್ತಾ ಇರುತ್ತಾರೆ. ಇದರಲ್ಲಿ ಒಬ್ಬರಿಗೊಬ್ಬರಿಗೆ ಕೋಆರ್ಡಿನೇಷನ್ ಇರುವುದಿಲ್ಲ. ಪ್ಲಾನಿಂಗ್ ಅಥಾರಿಟಿ ಎಂಬುದಾಗಿ ಏನಿದೆಯೋ ಅದರಲ್ಲಿ ಒಂದು ಕೋಆರ್ಡಿನೇಷನ್ ಇರಬೇಕು. ಬೆಂಗಳೂರು ಪಟ್ಟಣದಲ್ಲಿ ಎಲ್ಲೆಲ್ಲಿ ಫುಟ್‌ಪಾತ್ಸ್ ಇವೆಯೋ ಅಂತಹ ಕಡೆಗಳಲ್ಲಿ ರಸ್ತೆಗಳನ್ನು ಮಾಡುವ ಸಂದರ್ಭದಲ್ಲಿ ಹೆಚ್ಚಿಗೆ ಗಮನ ಕೊಡಬೇಕು. ಅನೇಕ ಸಂದರ್ಭಗಳಲ್ಲಿ ಇಲ್ಲಿ ಎಷ್ಟು ನಷ್ಟವಾಗುತ್ತಿದೆ, ಎಷ್ಟು ಅನಾಹುತವಾಗುತ್ತಿದೆಯೆಂಬುದನ್ನು ಸರ್ಕಾರ ಗಮನಿಸಬೇಕು. ಎಷ್ಟೋ ಸಾರಿ ಕೇಂದ್ರ ಸರ್ಕಾರವಾಗಲೀ ಅಥವಾ ಸ್ಟೇಟ್ ಗೌರ್ನಮೆಂಟ್ ಆಗಲೀ ಅನೇಕ ಯೋಜನೆಗಳನ್ನು ಕೈಗೊಳ್ಳುವುದಕ್ಕಾಗಿ ವರ್ಲ್ಡ್ ಬ್ಯಾಂಕಿನಿಂದ ಹಣವನ್ನು ತೆಗೆದುಕೊಂಡು ಬಂದಿದ್ದಾರೆ. ಅದಕ್ಕಾಗಿ You have to tap money from all sources, ಹಣವಿಲ್ಲದೇ ಯಾವ ಕೆಲಸಕಾರ್ಯಗಳನ್ನೂ ಸಹ ಮಾಡುವುದಕ್ಕಾಗುವುದಿಲ್ಲ. ನಮ್ಮ ಸಿಟಿಯೊಳಗೆ ಅನೇಕ ರಸ್ತೆ ರಿಪೇರಿಗಳನ್ನು ಸರಿಯಾಗಿ ಮಾಡಬೇಕಾಗುತ್ತದೆ. ನಮ್ಮ ಪಟ್ಟಣದ ಮಧ್ಯೆ ಸುಮಾರು ೧೪ ನ್ಯಾಷನಲ್ ಹೈವೇಸ್ ಪಟ್ಟಣದ ಮಧ್ಯೆ ಹಾದು ಹೋಗುತ್ತಿವೆ. ಇದಕ್ಕೆ ಮೇಂಟೆನೆನ್ಸ್ ಮಾಡುವವರು ಯಾರು ? ಮಿಲಿಟರಿ ವೆಹಿಕಲ್ಸ್ ಬೇಕಾದಷ್ಟು ನಮ್ಮ ಬೆಂಗಳೂರು ಪಟ್ಟಣದಲ್ಲಿ ಅನೇಕ ರಸ್ತೆಗಳಲ್ಲಿ ಓಡಾಡುತ್ತಿವೆ. ಅವುಗಳನ್ನು ಸರಿಯಾಗಿ ಮೇಂಟೇನ್ ಮಾಡುವುದಕ್ಕೆ ಕಾರ್ಪೊರೇಷನ್ನಿಗೆ ದುಡ್ಡು ಇಲ್ಲವೆಂದು ಹೇಳುತ್ತಾರೆ. ಕೆಲವು ಕಡೆಗಳಲ್ಲಿ ಲಿಂಕ್ ರೋಡ್ಸ್

ಹಾಗೂ ನ್ಯಾಷನಲ್ ಹೈವೇಸ್ ಎಂಬುದಾಗಿ ಏನು ಕರೆಯುತ್ತಾರೋ ಅವುಗಳ ಮೇಂಟೆನೆನ್ಸ್‌ಗಾಗಿ A certain percentage of the amount you should get from the Central Government because, they are using our materials and roads.

ನಾನು ನಮ್ಮ ಕಾರ್ಪೊರೇಷನ್ ಇನ್‌ಕಂ ನೋಡಿ ನಾನು ಈ ಮಾತನ್ನು ಹೇಳುತ್ತಾ ಇದ್ದೇನೆ. ಕಾರ್ಪೊರೇಷನ್ನಿಗೆ ಸಂಬಂಧಪಟ್ಟ ಹಾಗೆ ಈಗ ಅನೇಕ ಕಟ್ಟಡಗಳಿವೆ. ನನಗೆ ತಿಳಿದಿರುವ ಹಾಗೆ ಅನೇಕ ಕಟ್ಟಡಗಳಲ್ಲಿ ಲೈಟ್ ಇಲ್ಲ, ನೀರು ಇಲ್ಲ, ಈಗ ಆ ಕಟ್ಟಡಗಳಲ್ಲಿ ಬಾಡಿಗೆ ಕೊಡುತ್ತಿರುವವರಲ್ಲಿ ಈಗಾಗಲೇ ೩-೪ ಕೈ ಬದಲಾವಣೆಯಾಗಿದೆ. ಜಯನಗರ, ರಾಜಾಜಿನಗರ ಮತ್ತು ಆಸ್ಟಿನ್‌ಟೌನ್ ಮುಂತಾದ ಏರಿಯಾಗಳಲ್ಲಿ ಕಾರ್ಪೊರೇಷನ್ ಬಿಲ್ಡಿಂಗ್‌ಗಳಿವೆ. ೫೦-೬೦ ವರ್ಷಗಳಿಂದಲೂ ಆ ಕಟ್ಟಡಗಳಿಗೆ ಏನು ಬಾಡಿಗೆ ಇತ್ತೋ ಅದೇ ಬಾಡಿಗೆಯನ್ನು ಈಗಲೂ ಕೊಡುತ್ತಿದ್ದಾರೆ. ಇದರಿಂದ ಕಾರ್ಪೊರೇಷನ್ನಿಗೆ ಹೆಚ್ಚಿಗೆ ಲಾಭ ವಿಲ್ಲ. ಅವುಗಳನ್ನು ಬೇಕಾದರೆ ಕಾರ್ಪೊರೇಷನ್ ತೆಗೆದುಕೊಳ್ಳಲಿ; ಇಲ್ಲವೇ ಅಲ್ಲಿರತಕ್ಕವರಿಗೆ ಅವುಗಳನ್ನು ಮಾರಲಿ. ಆ ರೀತಿಯಾಗಿ ಬಂದಂಥ ಹಣದಿಂದ ಹೊಸದಾಗಿ ಕಾರ್ಪೊರೇಷನ್ ಬಿಲ್ಡಿಂಗ್‌ಗಳನ್ನು ಕಟ್ಟಿ ಕಾರ್ಪೊರೇಷನ್ ರಿಸೋರ್ಸಸ್ಸನ್ನು ಮೊಬಿಲೈಜ್ ಮಾಡಬೇಕೆಂದು ನಾನು ಹೇಳುತ್ತೇನೆ. ಇದರಲ್ಲಿಯೂ ಗುಡ್‌ವಿಲ್ ಒಬ್ಬರ ಕೈಯಿಂದ ಒಬ್ಬರ ಕೈಗೆ ಹೋಗುತ್ತಿದೆ. ಆದರೂ ಕೇವಲ ಲಕ್ಷಾಂತರ ರೂಪಾಯಿಗಳು ಮಾತ್ರ ಬಾಡಿಗೆ ರೂಪದಲ್ಲಿ ಬರುತ್ತಿದೆ. ಐದಾರು ವರ್ಷಗಳಿಗೊಮ್ಮೆಯಾದರೂ ಬಾಡಿಗೆ ದರಗಳನ್ನು ರಿವೈಜ್ ಮಾಡಬೇಕು. ಆ ರೇಟ್ಸ್ ಇನ್‌ಕ್ರೀಜ್ ಮಾಡಿಕೊಂಡು ಕಾರ್ಪೊರೇಷನ್ ತನ್ನ ವರಮಾನವನ್ನು ಜಾಸ್ತಿಯಾಗಿ ಮಾಡಿಕೊಳ್ಳಬೇಕು. ಹಾಗೆಯೇ ಅಡ್ವರ್ಟೈಜ್‌ಮೆಂಟ್ ಬೋರ್ಡ್ಸ್ ಹಾಕುವುದರಿಂದ ಸಿಟಿಯೊಳಗೆ ಅದರ ವರಮಾನ ಯಾರ್ಯಾರಿಗೋ ಸೇರುತ್ತದೆ. ಕಾರ್ಪೊರೇಷನ್ನಿಗೂ ಮತ್ತು ಸರ್ಕಾರಕ್ಕೆ ಸಂಬಂಧಪಟ್ಟ ಕೆಲವು ಇಲಾಖೆಗಳಿಗೆ ಅದು ಹೋಗುತ್ತಿದೆ. ಅದರ ಹಾಗೆ ಎಂಟರ್‌ಟೇನ್‌ಮೆಂಟ್ ಚಾರ್ಜಸ್ ಕೆಲವು ಏಜನ್ಸಿಗಳಿಗೆ ಹೋಗುತ್ತದೆ. ನಾನು ಅದನ್ನು ಪ್ರತ್ಯಕ್ಷವಾಗಿ ನೋಡಿದ್ದೇನೆ ನಾನು ಇಂತಹ ಒಂದು ಸಂದರ್ಭದಲ್ಲಿ ಒಂದು ಸಲಹೆ ಕೊಡುತ್ತೇನೆ. ಈ ಆದಾಯವೂ ಸಹ ಮುಂದೆ ಕಾರ್ಪೊರೇಷನ್ನಿಗೆ ಬರಬೇಕು ಯಾವುದೇ ಹೋಟೆಲ್ ಲೈಸೆನ್ಸ್ ಮತ್ತು ಅಂಗಡಿಗಳ ಅಡ್ವರ್ಟೈಜ್‌ಮೆಂಟ್ ಫೀ ಯಾಗಲೀ ಅವೆಲ್ಲವೂ ಕಾರ್ಪೊರೇಷನ್ನಿಗೆ ಸೇರಬೇಕು. There are so many other ways of tapping the resources of the Corporation. ಇತ್ತೀಚೆಗೆ ಕಾರ್ಪೊರೇಷನ್ ಸಂದಣಿ ಜಾಸ್ತಿಯಾಗುತ್ತಿದೆ. ಅವರಿಗೆ ಹೆಚ್ಚಿನ ಸೌಲಭ್ಯಗಳನ್ನು ಕೊಡಬೇಕಾದರೆ ಸರ್ಕಾರಕ್ಕೆ ಹಾಗೂ ಕಾರ್ಪೊರೇಷನ್ನಿಗೆ ಹೆಚ್ಚು ಹಣ ಬೇಕಾಗುತ್ತದೆ. ಆದರೆ ನಮ್ಮಲ್ಲಿ ಹಣವಿಲ್ಲವೆಂದು ಕಾಮನ್ ಮ್ಯಾನ್ ಉಪಯೋಗಿಸತಕ್ಕ ವೆಹಿಕಲ್ಸ್‌ಗೆ ತೆರಿಗೆ ಏನಿದೆಯೋ ಅದನ್ನು ಕಡಿಮೆ ಮಾಡಬೇಕು ಇಲ್ಲವೆ ತೆಗೆದುಹಾಕಬೇಕು. ಸೈಕಲ್ ಟ್ಯಾಕ್ಸ್ ತೆಗೆದೆ ಹಾಕಿದ್ದಾರೆ. ಏಕೆಂದರೆ Density of population is growing ಇದನ್ನು ಕಡಿಮೆ ಮಾಡಲು ಪ್ರಯತ್ನಿಸಬೇಕು. ಅನುಕೂಲಗಳನ್ನು ಕಲ್ಪಿಸಬೇಕು. ಬೆಂಗಳೂರು ವಾಟರ್ ಸಪ್ಲೈ ಬಗ್ಗೆ ಹೇಳಬೇಕೆಂದರೆ ನಮ್ಮ ಬೆಂಗಳೂರು ನಗರಕ್ಕೆ ಕಾವೇರಿ ನದಿಯಿಂದ ನೀರನ್ನು ತಂದಿದ್ದೇವೆ. ಅದನ್ನು ನಾವು ಮುಕ್ತ ಕಂಠದಿಂದ ಹೊಗಳಬೇಕಾಗಿದೆ, ಅದಕ್ಕೋಸ್ಕರ ೩೫ ಕೋಟಿ ರೂಪಾಯಿಯನ್ನು ಖರ್ಚು ಮಾಡಲಾಗಿದೆ. ಭಗೀರಥನು ಧರಣಿಗೆ ಗಂಗೆಯನ್ನು ತಂದ ಹಾಗೆ ಇಳಿಸಿದ ರೀತಿ ಕಾವೇರಿಯನ್ನು ಬೆಂಗಳೂರು ನಗರಕ್ಕೆ ತರಲಾಗಿದೆ. ಅದರಲ್ಲಿ ಪಬ್ಲಿಕ್ ಟ್ಯಾಪ್ಸ್ ಹಾಕಬೇಕಾದರೆ ಮೊದಲು ೬-೭ ನೂರು ರೂಪಾಯಿಗಳನ್ನು ಕೊಡಬೇಕಾಗಿತ್ತು ಈಗ ಅದಕ್ಕೆ ೨ ಸಾವಿರ ರೂಪಾಯಿ ಚಿಲ್ಲರೆ ಕೊಡಬೇಕಾಗುತ್ತೆ. ಆದು ಕೂಡ ಸ್ಲಮ್ಸ್ ಎಲ್ಲಿ ಇದೆಯೋ ಅಲ್ಲಿ ಮಾತ್ರ public taps ಕೊಟ್ಟಿದ್ದಾರೆ. ಕಾರ್ಪೊರೇಷನ್‌ಗೆ ಯಾವ ರೀತಿಯಿಂದಲೂ ಸರಿಯಾದ ಆದಾಯ ಬರುತ್ತಿಲ್ಲ ಈಗ ಸದ್ಯಕ್ಕೆ ಏನಾಗಿದೆ ಎಂದರೆ ನಮ್ಮ ಪಟ್ಟಣ ಈಗ ನಾಲ್ಕು ಭಾಗಗಳಿಂದ ಕೂಡಿದ ಪ್ರದೇಶದಲ್ಲಿ ಕಟ್ಟಿದ್ದಾರೆ. ನಮ್ಮ ನಗರ ಕಾರ್ಪೊರೇಷನ್ ಲಿಮಿಟ್ಸ್‌ನಲ್ಲಿ ನಾಲ್ಕು ರೀತಿಯ ಲ್ಯಾಂಡ್ ಇರುತ್ತದೆ. ಒಂದು ರೆವಿನ್ಯೂ ಲ್ಯಾಂಡ್, ಸಿಐಟಿಬಿ ಲ್ಯಾಂಡ್, ಕಾರ್ಪೊರೇಷನ್ ಲ್ಯಾಂಡ್, ಹಾಗೂ ಪ್ರೈವೇಟ್ ಲ್ಯಾಂಡ್ ಇದೆ. ಇದರಲ್ಲಿ ೧ ಲಕ್ಷ ೫೫ ಸಾವಿರ ಮನೆಗಳಿವೆ. ಆದರೆ ಅದರಲ್ಲಿ ನೀರಿನ ಸರಬರಾಜಿಗೆ ಹಣ ಕೊಟ್ಟು ಪಡೆಯುವರು ಕೇವಲ ೮೬ ಸಾವಿರ ಮಾತ್ರ. ಇದಕ್ಕೆ ಮೇಯಿಂಟೆನೆನ್ಸ್ ಸುಮಾರು ೪ ಕೋಟಿ ರೂಪಾಯಿಗಳು ಆಗುತ್ತದೆ. ಹೀಗಿರುವಾಗ ಟ್ಯಾಕ್ಸ್ ಅಸೆಸ್‌ಮೆಂಟ್ ಅಥಾರಿಟಿ ಮತ್ತು ಕಲೆಕ್ಟ್ ಮಾಡತಕ್ಕಂಥಾದ್ದು ಏಜೆನ್ಸಿ ಜಾಸ್ತಿ ಬೇಕು ಎಂದು ಹೇಳುತ್ತೇನೆ. ಆದರಲ್ಲೂ ಅಸೆಸ್‌ಮೆಂಟ್ ಅಥಾರಿಟಿ ಏನು ಕಾರ್ಪೊರೇಷನ್ ಎಂಪ್ಲಾಯೀಸ್ ಇದ್ದಾರೆ ಅವರನ್ನು ಈ ಕೆಲಸಕ್ಕೆ ಡೆಪ್ಯೂಟ್ ಮಾಡುವುದು ಸರಿಯಲ್ಲ. ಈಗ ಏನು ಬೆಂಗಳೂರು ಸಿಟಿ ಸರ್ವೆ ಮಾಡುವ ರೀತಿ ಕಾರ್ಪೊರೇಷನ್ ಅಧಿಕಾರಿಗಳಲ್ಲದವರನ್ನು ಇದಕ್ಕೆ ನೇಮಿಸಬೇಕು. ಅವರು pull and

pressureಗೆ yield ಆಗುವುದಿಲ್ಲ ನಿಷ್ಪಕ್ಷಪಾತವಾಗಿರುತ್ತಾರೆ. ಇದರಿಂದ ಕಾರ್ಪೊರೇಷನ್ ಆದಾಯ ಹೆಚ್ಚಲಿಕ್ಕೆ ಸಹಾಯವಾಗುತ್ತದೆ. ಹಾಗೆಯೇ ಕಾರ್ಪೊರೇಷನ್ composition ಬಗ್ಗೆ ಲೇಬರರ್ಸ್ ಏನು ಪ್ರಾತಿನಿಧ್ಯ ಕೇಳಿದ್ದೀರೆ ಎಂದು ಇದಕ್ಕೆ ಮಾನ್ಯ ಮಂತ್ರಿಗಳು ವಿವರಣೆ ಕೊಡಬೇಕು. ಲೇಬರರ್ ಎಂದರೆ ಲೇಬರರ್ಸ್ ಇದ್ದಾರೆ ಬಿಇಎಲ್, ಎಚ್‌ಎಂಟಿ ಸೆಂಟ್ರಲ್ಸ್ ಗೌರ್ನಮೆಂಟ್ ಲೇಬರರ್ಸ್ ಇದ್ದಾರೆ ಸಿನಿಮಾ, ಹೋಟೆಲ್ ಹೀಗೆ ನಾನಾರೀತಿಯಲ್ಲಿ ಕೆಲಸಮಾಡುವ ನೌಕರರು ಇರುತ್ತಾರೆ ಆದ್ದರಿಂದ ಇದರ ಬಗ್ಗೆ ನಮ್ಮ ಮಾನ್ಯ ಮಂತ್ರಿಗಳು ತಕ್ಕ ವಿವರಣೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ ನಮ್ಮ ಮಾನ್ಯ ಸ್ನೇಹಿತರಾದ ಶ್ರೀಮಾನ್ ಎಂ.ಎಸ್. ಕೃಷ್ಣನ್‌ರವರು ನಿನ್ನೆ ಮಾತನಾಡುತ್ತಾ ಹೇಳಿದರು, ನಮ್ಮ ಕಾರ್ಪೊರೇಷನ್ ಕಾರ್ಪೊರೇಟರ್ಸ್ ಕೇರ್ ಆಫ್ ಪುಟ್‌ಪಾತ್ ಇದ್ದವರು ಕಾರ್ಪೊರೇಟರ್ ಆದ ಎರಡು ಮೂರು ವರ್ಷಗಳಲ್ಲಿ ಲಕ್ಷಾಧೀಶ್ವರರಾಗುತ್ತಾರೆ ಎಂದು. ಅವರ ಮೇಲೆ ಹತೋಟಿ ಇಡುವ ಉದ್ದೇಶದಿಂದ ಅವರ Assets and Liabilities declare ಮಾಡಬೇಕಾಗಿದೆ ಬಿಲ್ಲಿನ ಪ್ರಕಾರ ನಮ್ಮ ಬೆಂಗಳೂರು ಪಟ್ಟಣ ಬೆಳೆದ ಹಾಗೆಲ್ಲಾ ಕಾರ್ಪೊರೇಷನ್‌ನಲ್ಲಿ ಅನೇಕ ಅವಕಾಶಗಳು ದೊರೆಯುತ್ತವೆ. ಕಾರಣ ವಾದರೂ ಇಷ್ಟೆ. ಇಲ್ಲಿ ಒಂದು ಅಂಗುಲವನ್ನು ಲೆಕ್ಕ ಹಾಕುವಂತಹ ಕಾಲ ಬರುತ್ತದೆ. ಆದ್ದರಿಂದ ಉದಾಹರಣೆಗೆ ಹೇಳುವುದಾದರೆ ನಮ್ಮ ಕೃಷ್ಣರಾಜೇಂದ್ರ ಮಾರ್ಕೆಟ್, ರಸಲ್ ಮಾರ್ಕೆಟ್‌ನ್ನು ಇಂಪ್ರೂವ್ ಮಾಡಬೇಕಾದರೆ ಹೆಚ್ಚಿನ ಹಣ ಖರ್ಚು ಮಾಡಬೇಕಾಗುತ್ತದೆ. ಮಾನ್ಯಮಂತ್ರಿಗಳನ್ನು ಈ ಸಂದರ್ಭದಲ್ಲಿ ಕೇಳುತ್ತೇನೆ. ಈಗ ಏನು ಇದೆ ರಸಲ್ ಮಾರ್ಕೆಟ್ ಮತ್ತು ಕೃಷ್ಣರಾಜೇಂದ್ರ ಮಾರ್ಕೆಟ್ ಅಷ್ಟೇ ಸಾಕು. ಮುಂದೆ ಮಾಡಬೇಕಾದುದು ಎಲ್ಲಾ ಎಕ್ಸ್‌ಟೆನ್‌ಗಳಲ್ಲಿ ಮಾಡರನ್ 'ಷಾಪಿಂಗ್ ಸೆಂಟರ್ಸ್' Modren Convenient Shopping Centre ಪ್ರತಿ Extension ನಲ್ಲಿ ಮಾಡಬೇಕು ಡೆನ್‌ಸಿಟಿ ಏನು ಇದೆ Density Population ಅದನ್ನು ಕಡಿಮೆ ಮಾಡಬೇಕೆಂದು ಹೇಳುತ್ತೇನೆ. ಈಗ ಹಾಲಿ Jaya Nagar ದಲ್ಲಿ ಮಾಡಿದ ಹಾಗೆ ಉದಾಹರಣೆಗೆ ಹೇಳಬೇಕಾದರೆ ನಾವು ಕೃಷ್ಣರಾಜೇಂದ್ರ ಮಾರ್ಕೆಟ್‌ಗೆ ಹೋಗಬೇಕಾದರೆ ಅವೆನ್ಯೂರೋಡ್, ಬಳೆಪೇಟೆ ಬಿ. ವಿ. ಕೃಷ್ಣಯ್ಯಂಗಾರ್ ರೋಡುಗಳಲ್ಲಿ ಏನು ಜನ ಸಾಮಾನ್ಯವಾಗಿ ಓಡಾಲಿಕ್ಕೆ ಸಾಧ್ಯವಿಲ್ಲ, ಆದ್ದರಿಂದ ಅದಕ್ಕೆ ಡಿ ಸೆಂಟ್ರಲೈಸ್ ಆಫ್ ಮಾರ್ಕೆಟ್ಸ್ ಮಾಡಿ ಎಲ್ಲಾ ಎಕ್ಸಟೆನ್ಸನ್‌ಗಳಿಗೂ ಈ ಮಾರ್ಕೆಟ್ ಫೆಸಿಲಿಟೀಸ್ ಸಿಗುವಂತೆ ಮಾಡ ಬೇಕೆಂದು ಕೇಳಿಕೊಳ್ಳುತ್ತೇನೆ ಮೈಸೂರು ಬ್ಯಾಂಕ್ ಮತ್ತು ಕೆಂಪೇಗೌಡ ಸರ್ಕಲ್ ಮತ್ತು ಮುಂದಕ್ಕೆ ಬೇಕಾದಷ್ಟು ಸಿನಿಮಾ ಥಿಯೇಟರ್ಸ್ ಬಂದಿವೆ. ಅಲ್ಲಿ ಜನರು ಓಡಾಡಲಿಕ್ಕೂ ಸಾಧ್ಯವಿಲ್ಲ. ಆದ್ದರಿಂದ ದಯಮಾಡಿ ಇನ್ನು ಹೆಚ್ಚಿಗೆ ಈ ರೀತಿ ಒಂದೇ ಕಡೆ ಸಿನಿಮಾಗಳು ತೆಗೆದರೆ ಜನರಿಗೆ ತೊಂದರೆಯೇ ಹೊರತು ಅನುಕೂಲವಾಗುವುದಿಲ್ಲ, ಇದೇ ರೀತಿ ಕಾರ್ಪೊರೇಷನ್ ಏರಿಯಾದಲ್ಲಿ ಮಾಡಬೇಕು. ಇನ್ನು ಅಸೆಟ್ಸ್ ಅಂಡ್ ಲಾಯಾಬಿಲಿಟೀಸ್ ಆಫ್ ಎಂ.ಎಲ್.ಎಸ್, ಎಂಪಿ ಸ್ ಹೇಗೆ Declare ಮಾಡುತ್ತಾರೆ? ಹಾಗೆಯೇ ಕಾರ್ಪೊರೇಟರ್, ಇದನ್ನು ಕಡ್ಡಾಯವಾಗಿ ಡಿಕ್ಲೇರ್ ಮಾಡಬೇಕೆಂದು ಆಕ್ಟಿನಲಿ ಮಾಡಿರುವುದು ಸೂಕ್ತವಾಗಿದೆ. ನಾವು ಯಾವಾಗಲೂ ಗಾಜಿನ ಮನೆಯಲ್ಲಿದ್ದೇವೆಂದು We are in glass House ಯಾರೂ ಮರೆಯಬಾರದು. ಯಾರು ನಿಸ್ಪೃಹರು ಇರುತ್ತಾರೆ ಅಂತಹ ಅವರು ರಾಜಕೀಯಕ್ಕೆ ಬರಬೇಕು. ನಮ್ಮ ನೆಚ್ಚಿನ ನಾಯಕಿ ಇಂದಿರಾ ಗಾಂಧಿಯವರು ಕೂಡ ಇದನ್ನೇ ಒತ್ತಿ ಹೇಳುತ್ತಾರೆ ಆದ್ದರಿಂದ ಎಲ್ಲರೂ ಅವರವರ ಆದಾಯ ಮತ್ತು ಆಸ್ತಿಯನ್ನು ಡಿಕ್ಲೇರ್ ಮಾಡಬೇಕು. ಅದು ಎಲ್ಲರಿಗೂ ಒಳ್ಳೆಯದು. ಆದರಿಂದ ಎಲ್ಲರಿಗೂ ಸಹಾಯವಾಗುತ್ತದೆಂದು ಈ ಸಂದರ್ಭದಲ್ಲಿ ಮತ್ತೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ನಮ್ಮ ಕಾರ್ಪೊರೇಷನ್‌ನಲ್ಲಿ ಕೌನ್ಸಿಲ್ ಕಾರ್ಯದರ್ಶಿಯ ಒಂದು ಹುದ್ದೆ ಏನು ಇದೆ ಅದು ತಮಗೂ ಗೊತ್ತಿದೆ. ಅದು ಬಹಳ ಜವಾಬ್ದಾರಿಯುತವಾದ ಕೆಲಸ ಅದು ಕಾರ್ಪೊರೇಷನ್ನಿಗೂ ಮತ್ತು ಎಲೆಕ್ಟೆಡ್ ಬಾಡಿ ಏನು ಇರುತ್ತದೆ. ಅಂದರೆ, ರೆಪ್ರೆಸೆಂಟಿಟೀವ್ ಆಫ್ ಪೀಪಲ್ಸ್ ಏನು ಇದ್ದಾರೆ ಅವರ ಮುದ್ದೆ ಇದು ಮೀಟಿಂಗ್‌ಗಳಲ್ಲಿ ಏನು ಕಾರ್ಯಕಲಾಪಗಳು ನಡೆಯುತ್ತದೆ ಅವುಗಳ ಪ್ರೊಸೀಡಿಂಗ್ಸನ್ನು ತೆಗೆದುಕೊಂಡು ಮೇಯರ್ ಗಮನಕ್ಕೆ ತಂದು ಅವನ್ನು ಕಾರ್ಯರೂಪಕ್ಕೆ ತರುವ ಜವಾಬ್ದಾರಿ ಈ ಅಧಿಕಾರಿಗೆ ಇರುತ್ತದೆ. ಈಗ ಏನು ಆ ಹುದ್ದೆ ಇದೆ ಅದು ಕೇವಲ ಸಬ್ ಡಿವಿಜನಲ್ ಆಫೀಸರ್ ಅಥವಾ ತಹಸಿಲ್ದಾರ್ ಗ್ರೇಡ್ ಇರಬಹುದು. ಆದರೆ ಇಷ್ಟೊಂದು ಜವಾಬ್ದಾರಿಯುತವಾದ ಕೆಲಸಕಾರ್ಯಗಳನ್ನು ನಿರ್ವಹಿಸಬೇಕಾದರೆ ಆ ಹುದ್ದೆಯನ್ನು ಅಪ್‌ಗ್ರೇಡ್ ಮಾಡಬೇಕು ಎಂದು ಹೇಳುವುದಾದರೆ ಇನ್ನು ಟ್ರಾನ್ಸ್‌ಪೋರ್ಟ್ ಬಗ್ಗೆ ಮತ್ತು ಕಮ್ಯೂನಿಕೇಷನ್ ಬಗ್ಗೆ ಹೇಳುವುದಾದರೆ ನಮ್ಮ ಒಂದು ಕಾರ್ಪೊರೇಷನ್ ಏರಿಯಾದಲ್ಲಿ ಬಹಳ ಮುಖ್ಯ. ಬೆಂಗಳೂರು ಸಿಟಿಯಲ್ಲಿ ಬಸ್ಸುಗಳನ್ನು ಓಡಿಸುವ ಜವಾಬ್ದಾರಿಯನ್ನು ನಮ್ಮ ಕಾರ್ಪೊರೇಷನ್ ವತಿಯಿಂದ ನಡೆಸಿದರೆ ಬಹಳ ಒಳ್ಳೆಯದು. ಈಗ ಸಾರಿಗೆ ಇಲಾಖೆಯಲ್ಲಿ

ಎಫಿಷಿಯಂಟ್ ಆಗಿ ಕೆಲಸ ಕಾರ್ಯಗಳು ನಡೆಯುತ್ತಿಲ್ಲ. ಅದರಲ್ಲೂ ವಿಶೇಷವಾಗಿ ಪೀಕ್ ಅವರ್ಸ್‌ನಲ್ಲಿ ಅನೇಕ ಎಕ್ಸ್‌ಟೆನ್ಷನ್‌ಗಳಿಗೆ ಬಸ್ಸಿನ ಸೌಕರ್ಯ ಸಾಲದು. ಮುಖ್ಯವಾಗಿ ಈ ಎಕ್ಸ್‌ಟೆನ್ಷನ್‌ಗಳಲ್ಲಿ ಅಧಿಕಾರಿಗಳೇ ಅಲ್ಲ ವ್ಯಾಪಾರಸ್ಥರೇ ಅಲ್ಲ ಇನ್ನೂ ನಾನಾರೀತಿಯ ಜನಗಳು ವಾಸಿಸುತ್ತಾರೆ. ಉದಾಹರಣೆಗೆ ಅವುಗಳನ್ನು ನಾಲ್ಕು ಭಾಗಗಳಾಗಿ ವಿಂಗಡಿಸಬಹುದು. ರೆಸಿಡೆನ್ಸಿಯಲ್, ಇಂಡಸ್ಟ್ರಿಯಲ್, ಕಮರ್ಷಿಯಲ್ ಅಡ್ಮಿನಿಸ್ಟ್ರೇಷನ್ ಏರಿಯಾಗಳೆಂದು ವಿಂಗಡಿಸಬಹುದು. ಈ ನಾಲ್ಕು ಏರಿಯಾಗಳಲ್ಲಿ ಯಾವ ಜನರು ಇರುತ್ತಾರೆ ಇವರಿಗೆಲ್ಲಾ ಬೇಕಾದ ಪ್ರಯಾಣದ ಅನುಕೂಲತೆಯನ್ನು ಕಾರ್ಪೋರೇಷನ್‌ನಿಂದಲೇ ಒದಗಿಸ ಬೇಕಾಗುತ್ತದೆ ಉದಾಹರಣೆಗೆ ಹೇಳುವುದಾದರೆ ಲೋಕಲ್‌ಸೆಲ್ಫ್ ಗೌರ್ನಮೆಂಟ್ ಇದ್ದಹಾಗೆ ನಮ್ಮ ಕಾರ್ಪೊರೇಷನ್. ಲೈಬ್ರರಿಯಿಂದ ಹಿಡಿದು ವಾಟರ್ ಸಪ್ಲೈವರೆಗೂ ಇದರ ಜವಾಬ್ದಾರಿ ಇರುತ್ತದೆ. ಆದ್ದರಿಂದ ಇದನ್ನು ಹೆಚ್ಚಿನ ರೀತಿಯಲ್ಲಿ ಪ್ರೋತ್ಸಾಹ ಕೊಟ್ಟು ಸರ್ಕಾರದಿಂದ, ಕೇಂದ್ರ ಸರ್ಕಾರದಿಂದ ಇನ್ನು ಇತರೆ ಬಾಬಿನಿಂದ ಹಣತಂದು ಇದರ ಆದಾಯ ಹೆಚ್ಚುವಂತೆ ಮಾಡಬೇಕೆಂದು ಒತ್ತಿ ಹೇಳುತ್ತೇನೆ. ಮೊನ್ನೆ ನಮ್ಮ ಸಾರಿಗೆ ಮಂತ್ರಿಗಳು ಒಂದು ಕೋಟಿರೂಪಾಯಿ ಕೇಂದ್ರ ಸರ್ಕಾರದಿಂದ ಬಂದಿದೆಯೆಂದು ಹೇಳಿದರು, ಕೆಲವು ದಿನಗಳಲ್ಲಿ ಇನ್ನು ೬೦ ಬಸ್ಸು ರೋಡಿನಲ್ಲಿ ಓಡಾಡುತ್ತವೆ ಎಂದು ಅದು ಯಾವ Stage ನಲ್ಲಿದೆ ಸರಿಯಾಗಿ ಗೊತ್ತಿಲ್ಲ ಆದ್ದರಿಂದ ಈ ಟ್ರಾನ್ಸ್‌ಪೋರ್ಟನ್ನು ಕಾರ್ಪೊರೇಷನ್ ತೆಗೆದು ಕೊಳ್ಳುವುದು ಒಳ್ಳೆಯದು. ಈಗ ಕಾರ್ಪೊರೇಷನ್‌ನಲ್ಲಿ ಅನೇಕ ಇಲಾಖೆಗಳು ಇವೆ. ಉದಾಹರಣೆಗೆ ರೆವಿನ್ಯೂ, ಇಂಜನಿಯರಿಂಗ್, ಎಜುಕೇಷನ್, ಹೆಲ್ತ್ ಇರುವುದರಿಂದ ಟ್ರಾನ್ಸ್‌ಪೋರ್ಟನ್ನು ಸಾರ್ವಜನಿಕ ದೃಷ್ಟಿಯಿಂದ ಅವರಿಗೆ ಸರಿಯಾದ ವಸತಿ ಸೌಕರ್ಯ ಮುಂತಾದ ಅನುಕೂಲಗಳನ್ನು ಕೊಡುವುದಕ್ಕೆ ಅನುಕೂಲವಾಗುತ್ತದೆ. ನನಗೆ ಗೊತ್ತಿರುವಹಾಗೆ ೨ ಲಕ್ಷ ಜನ ಏನು ಇತ್ತು ಈಗ ೨೦ ಲಕ್ಷ ಜನ ಇದ್ದಾರೆ ಬೆಂಗಳೂರಿನಲ್ಲಿ. ಇಲ್ಲಿ ಫ್ಯಾಕ್ಟರಿ ಕೆಲಸಗಾರರು, ಕೇಂದ್ರಸರ್ಕಾರದ ನೌಕರರು, ರಾಜ್ಯಸರ್ಕಾರಿ ನೌಕರರು, ವ್ಯಾಪಾರಸ್ಥರು ಅದರಲ್ಲಿ ಅನೇಕ ತರಹ ವ್ಯಾಪಾರ ಇರುತ್ತದೆ ಅದರಲ್ಲಿ ಹೋಟೆಲ್ ನೌಕರರು, ಇರುತ್ತಾರೆ. ಆದ್ದರಿಂದ ಇದನ್ನೆಲ್ಲಾ ಸರ್ಕಾರ ಗಮನದಲ್ಲಿಟ್ಟುಕೊಂಡು ಕಾರ್ಪೊರೇಷನ್‌ಗೆ ಸ್ವಲ್ಪ ಆದಾಯ ಬರುವಂತೆ ಅನುಕೂಲ ಒದಗಿಸಬೇಕು. ಜೊತೆಗೆ ಕಾರ್ಪೊರೇಷನ್‌ಗೆ ಹಣ ಇಲ್ಲದೆ ಇದ್ದರೂ ಸಹ ಮಾನ್ಯ ಶಾಮಣ್ಣನವರು ಮತ್ತು ಇತರ ಸದಸ್ಯರು ಹೇಳಿದ್ದಾರೆ ಕೇಂದ್ರಸರ್ಕಾರದಿಂದ ಮತ್ತು ಇಂಟರ್‌ನ್ಯಾಷನಲ್ ಏಜೆನ್ಸಿಯಿಂದಲಾದರೂ ಹಣ ಪಡೆಯುವುದಕ್ಕೆ ಸಹಾಯ ಮಾಡಬೇಕು ಎಂದು ಮತ್ತೊಮ್ಮೆ ಪ್ರಾರ್ಥಿಸುತ್ತೇನೆ.

ಈ ಮಾರ್ಕೆಟ್ ಫೆಸಿಲಿಟೀಸ್ ಬಗ್ಗೆ ಮತ್ತೊಂದು ಸಂದರ್ಭದಲ್ಲಿ ಹೇಳುತ್ತೇನೆ. ಈ ಕಮರ್ಷಿಯಲ್ ಸೆಂಟರ್ಸ್ ಏನಿದೆ ಬ್ರಿಗೇಡ್ ರೋಡ್, ಚಿಕ್ಕಪೇಟೆ, ದೊಡ್ಡಪೇಟೆ ಅಲ್ಲಿರತಕ್ಕಂಥ ದೊಡ್ಡ ದೊಡ್ಡ ವರ್ತಕರನ್ನು ಸ್ಥಳಾಂತರಿಸಿ. ಕೆಲವರು ಈ ರೇಸ್ ಕೋರ್ಸನ್ನು ಬದಲಾಯಿಸಿದರೆ ೪ ಕೋಟಿ ಲಾಸ್ ಆಗುತ್ತದೆಂದು ಹೇಳುತ್ತಾರೆ ಆದರೆ ಅದರಿಂದ ೪೦ ಕೋಟಿ ವರಮಾನ ಬರುತ್ತದೆ ಎಂದು ಈ ಸದನದಲ್ಲಿ ಹೇಳಬಯಸುತ್ತೇನೆ. ಅಲ್ಲಿ ಒಂದು ಡೆಲ್ಲಿಯಲ್ಲಿ ಇರುವಹಾಗೆ ಕಾನಾಟ್ ಸರ್ಕಸ್ ತರಹ ಮಾಡಿದರೆ ಅಂಗಡಿಗಳನ್ನು ಕಟ್ಟಿಸಿದಾಗ ಅದರಿಂದ ನಿಮಗೆ ಒಂದಕ್ಕೆರಡರಷ್ಟು ಆದಾಯ ಬರುತ್ತದೆ. ಏತಕ್ಕೆಂದು ಹೇಳಿದರೆ ಕೆಲವರು Long Space 'ಲಾಂಗ್ ಸ್ಪೇಸ್' ಇರಬೇಕೆಂದು ಹೇಳುತ್ತಾರೆ. ಇವತ್ತು ಲಾಂಗ್ ಸ್ಪೇಸ್ ಇದ್ದೇ ಇದೆ. ಅದಕ್ಕಾಗಿ ಗಾಲ್ಫ್‌ಕ್ಲಬ್ ಇದೆ ಮತ್ತು ೧೮ನೇ ಶತಮಾನದಲ್ಲಿ Late Tippu Sultan gave us the Lal Bagh Garden ಮತ್ತು in 19th Cntury Sir Marks Cubban Gave us Cubban Park ೨೦ನೇ ಶತಮಾನಕ್ಕೆ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ದೇವರಾಜ ಅರಸರು ಬೆಂಗಳೂರು Palan ನ ತೋಟ ಜನತೆಗೆ ಕೊಡಲೆಂದು ಪ್ರಾರ್ಥಿಸುತ್ತೇನೆ ಪ್ಯಾಲೆಸ್‌ನ್ನು ಹಾಗೆಯೇ ಇಟ್ಟುಕೊಂಡು ಬಿಟ್ಟರೆ, ಲಾಂಗ್ ಸ್ಪೇಸ್‌ಗೆ ಅನುಕೂಲವಾಗುತ್ತದೆ ಮತ್ತು ಗ್ರೀನ್ ಬೆಲ್ಟ್‌ಗೆ ಅನುಕೂಲವಾಗುವಂತೆ ಉಳಿಸಿಕೊಂಡು ಹೋಗುವುದಕ್ಕೆ ಅನುಕೂಲವಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ನಾನು ಈಗ ಮಾತನಾಡುತ್ತಾ ಇರತಕ್ಕಂಥದ್ದು ಬಿಲ್ಲಿಗೆ ಏನೂ ಸಂಬಂಧವಿಲ್ಲ ಆದರೂ ಕೂಡ ಆರೋಗ್ಯದ ದೃಷ್ಟಿಯಿಂದ, ಜನತೆಯ ದೃಷ್ಟಿಯಿಂದ ಈ ಮಾತನ್ನು ಹೇಳ ಬೇಕಾಗಿದೆ ಈಜಾಗವನ್ನು ಇನ್ನು ಕೆಲವಾರು ಕಾರಣಗಳಿಂದ ನಾವು ಉಳಿಸಿಕೊಂಡು ಹೋಗಬೇಕಾಗಿದೆಯೆಂದು ಕಳಕಳಿಯಿಂದ ಹೇಳುತ್ತಿದ್ದೇನೆ. ಮೊಟ್ಟಮೊದಲನೆಯದಾಗಿ ನಾಲ್ವಡಿ ಕೃಷ್ಣರಾಜೇಂದ್ರ ಒಡೆಯರ್, ಮಾದರಿ ಮೈಸೂರು ಮಾಡಿದರು ಅವರು ಮಡಿದ ಸ್ಥಳ, ಈ Palace ನಲ್ಲಿಯೇ ಮತ್ತು ದಿವಂಗತ ಜಯಚಾಮರಾಜೇಂದ್ರ ಒಡೆಯರ್ ಸಹ ಮಡಿದುದು ಇದೇ ಅರಮನೆಯಲ್ಲಿಯೇ ಮತ್ತು ಅಲ್ಲಿ ೬೦-೭೦ ವರ್ಷದ ಹಳೆಯ ಕಾಲದ ದೊಡ್ಡ ಮರಗಳು ಇವೆ ಅವನ್ನು ಉಳಿಸಿಕೊಂಡು, ಕಡಿಯದ ಹಾಗೆ ಪ್ರಿಜರ್ವ್

ಮಾಡಲು ಪ್ರಯತ್ನಿಸಬೇಕು. ಇದನ್ನೆಲ್ಲಾ ಮಾಡಬೇಕಾದರೆ ಹಣ ಬೇಕಾಗುತ್ತದೆ. ಪ್ರತಿಯೊಂದಕ್ಕೂ ದುಡ್ಡು ಬೇಕಾಗುತ್ತದೆ. ಇವತ್ತು ಕಾರ್ಪೊರೇಷನ್ನಿನಲ್ಲಿ ಹಾರ್ಟಿಕಲ್ಚರಲ್ ಡಿಪಾರ್ಟ್‌ಮೆಂಟ್ ಎಂದು ಒಂದು ಇಲಾಖೆ ಇದೆ, ಅದರ ಮೇನ್‌ಟೆನೆನ್ಸ್ ಗೋಸ್ಕರವಾಗಿ, ಅದರ ಡೆವಲಪ್‌ಮೆಂಟ್ ಗೋಸ್ಕರವಾಗಿ ಹಣವನ್ನು ಖರ್ಚು ಮಾಡುತ್ತಿದ್ದಾರೆ. ಅದೇ ಹಣವನ್ನು ಉಳಿಸುವುದಕ್ಕೆ ಆಗುವುದಿಲ್ಲವೇ, ಈಗ ರಾಜ ಪ್ರಮುಖರಾಗಿರತಕ್ಕಂಥ ರಾಜ್ಯಪಾಲರು ಪ್ಯಾಲೆಸ್‌ಗೆ ಹೋಗಬಹುದು, ಮುಖ್ಯಮಂತ್ರಿಗಳವರು ಈಗ ಹಾಲಿ ಇರುವ ರಾಜ್ಯಪಾಲರ ಮನೆಯನ್ನು ತಾವು ಉಪಯೋಗಿಸಿಕೊಳ್ಳಲು ಆಗುವುದಿಲ್ಲವೇ? ಏತಕ್ಕೆಂದರೆ Maintenance ಖರ್ಚು ಸರ್ಕಾರಿ ಲೆಕ್ಕದಲ್ಲಿ ಹಾಕಬಹುದು, ತೋಟವನ್ನು ಹಾಗೆಯೇ ಉಳಿಸಿಕೊಳ್ಳಬಹುದು ವನಮಹೋತ್ಸವ ಎಂದು ಎಲ್ಲಾ ಪತ್ರಿಕೆಗಳಲ್ಲಿ ಹಾಕುವುದಕ್ಕೆ ಬದಲಾಗಿ, ಇರತಕ್ಕಂಥ ಗಾರ್ಡನ್ನು ಹಾಗೆಯೇ ಉಳಿಸುವುದಕ್ಕೆ ಪ್ರಯತ್ನ ಮಾಡುವುದಕ್ಕೆ ಆಗುವುದಿಲ್ಲವೇ? ಮಾಡರ್ನ್ Business ಕಾಂಪ್ಲೆಕ್ಸ್ ಮಾಡುವುದಕೋಸ್ಕರವಾಗಿ, ಈಗಿರತಕ್ಕಂಥ ರೇಸ್ ಕೋರ್ಸನ್ನು, ಜೈಲನ್ನು ಸ್ಥಳಾಂತರ ಮಾಡಿ ಎಂದು ನಾನು ಹೇಳುತ್ತಲೇ ಬಂದು ಇದ್ದೇನೆ. ಇವತ್ತು ಯಾವುದೇ ಒಂದು ಕಾರ್ಯಕ್ರಮವನ್ನು ಕೈಗೊಂಡರೂ ಹಣ ಬೇಕಾಗಿದೆ ಯಾವ ವಿಧದಲ್ಲಿ ಆದಾಯ ಬರಲಿ We have to tap all the resources but at the same time we should see that the amount is properly spent.

ಅನೇಕ ಸಂದರ್ಭದಲ್ಲಿ ನಮ್ಮ ಮಿತ್ರರು ಬೆಂಗಳೂರು ಸಿಟಿ ಕಾರ್ಪೊರೇಷನ್ನಿಗೆ ೧೬ ಕೋಟಿಗೂ ಮೀರಿ ವರಮಾನ ಇದೆ, ಎಂದು ಹೇಳುತ್ತಿರುತ್ತಾರೆ. ಆದರೆ ನಾವು ಇವತ್ತು ಬೆಂಗಳೂರು ನಗರದಲ್ಲಿರತಕ್ಕಂಥ ಪಾರ್ಕುಗಳನ್ನು ನೋಡಿದರೆ ಒಂದು ಕಡೆ ಚೆನ್ನಾಗಿದ್ದರೆ ಮತ್ತೊಂದು ಕಡೆ ಚೆನ್ನಾಗಿಲ್ಲ. ಅದಕ್ಕೆ ರೊಕ್ಕ ಬೇಕೆಂದು ಕೇಳುತ್ತಾರೆ. ಕಾರ್ಪೊರೇಷನ್ನಿನ ಬಡ್ಜೆಟ್ ನೋಡಿದರೆ ಅರ್ಥವಾಗುತ್ತದೆ, ಇವತ್ತು ಹೆಲ್ತ್ ಟ್ಯಾಕ್ಸ್, ಸ್ಯಾನಿಟೇಷನ್ ಬಗ್ಗೆ ಮತ್ತು ಇನ್ನು ಮುಂತಾದ ಎಲ್ಲಾ ಟ್ಯಾಕ್ಸ್‌ಗಳನ್ನು ಹಾಕಿದರೂ ಕೂಡ ಕಾರ್ಪೊರೇಷನ್ನಿನ ಬಡ್ಜೆಟ್ ಬಹಳ ಕಡಿಮೆ ಇರುತ್ತದೆ ಅದಕ್ಕೆ ಇನ್ನೂ ಹಣ ಸಾಲದಾಗಿರುತ್ತದೆ. ಅದಕ್ಕೆ ನಾವು ಇನ್ನೂ ಹೆಚ್ಚಿನ ಹಣವನ್ನು ಸಂಪಾದನೆ ಆಗುವ ಹಾಗೆ ಪ್ರಾವಿಜನ್ ಮಾಡಿದ್ದರೆ ಚೆನ್ನಾಗಿತ್ತೆಂದು ಹೇಳುತ್ತೇನೆ.

ಮತ್ತೆ ಮೇಯರ್‌ಗೆ ಇರತಕ್ಕಂಥ ಪವರ್ ಎಷ್ಟೆಂದರೆ ೧೦ ಸಾವಿರ ರೂಪಾಯಿಗಳವರೆಗೆ ಇಟ್ಟುಕೊಳ್ಳುವುದಕ್ಕೆ ಅಧಿಕಾರವನ್ನು ಕೊಟ್ಟಿದ್ದೀರಿ ಸಂತೋಷ. ಆದರೆ ಕೆಲವು ಸಮಯದಲ್ಲಿ, ಕೆಲವೊಂದು ಸಂದರ್ಭದಲ್ಲಿ ಏನಾಗುತ್ತದೆಂದರೆ ದೊಡ್ಡದೊಡ್ಡ ಡಿಗ್ನಿಟೇರೀಸ್ ಬಂದರೆ ಪುನಃ ಮರ್ಚೆಂಟ್ಸ್ ಹತ್ತಿರ ಹಣಕ್ಕೆ ಓಡಬೇಕಾಗುತ್ತದೆ. ನೀವು ಪೆಂಡಾಲ್ ಹಾಕಿ, ನೀವು ಅದನ್ನು ಖರ್ಚು ಮಾಡಿ, ಇದು ಖರ್ಚು ಮಾಡಿ ಎಂದು ಅವರನ್ನೇ ಕೇಳಬೇಕಾದ ಪ್ರಸಂಗಗಳು ಅನೇಕ ಸಲ ಬರುತ್ತಿರುತ್ತವೆ. ಕೆಲವೊಂದು ಸಂದರ್ಭದಲ್ಲಿ ಮೇಯರ್‌ರವರು ಹಣ ಸಾಲದೇನೆ ತಮ್ಮ ಹಣವನ್ನು ಒದಗಿಸುವುದಕ್ಕೆ ಬಹು ಕಷ್ಟವಾಗುತ್ತದೆ. ಆಗ ಪುನಃ ನಾವು ಸಾರ್ವಜನಿಕರ ಬೊಕ್ಕಸಕ್ಕೆ ಶರಣು ಹೋಗಬೇಕಾಗುತ್ತದೆ. ಆದುದರಿಂದ ಇವತ್ತು ಅವರ ಹತ್ತಿರ ರೂ ೧೦,೦೦೦ ಹಣವನ್ನು ಇಟ್ಟುಕೊಳ್ಳುವುದಕ್ಕೆ ಅವಕಾಶ ಕೊಟ್ಟಿದ್ದೀರಿ ಅದು ನಿಜವಾಗಿಯೂ ಬಹಳ ಸಂತೋಷದ ವಿಷಯವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಆಡಿಟ್. ಇದರ ಬಗ್ಗೆ ಕೆಲವೊಂದು ವಿಚಾರಗಳನ್ನು ನಾವು ಮಾಡಬೇಕಾಗಿ ಬರುತ್ತದೆ. ಮೊದಲನೆಯದಾಗಿ ಇದರಲ್ಲಿ ಪೋಸ್ಟ್ ಆಡಿಟ್ ಮತ್ತು ಪ್ರಿ ಆಡಿಟ್ ಎಂದು ಎರಡು ಭಾಗ ಇದೆ. ಪ್ರೀ ಆಡಿಟ್‌ನಿಂದ ಎಷ್ಟು ಅನುಕೂಲವಿದೆ, ಎಷ್ಟು ಅನಾನುಕೂಲವಿದೆ ಎನ್ನುವುದನ್ನು ನಾವು ಸ್ವಲ್ಪ ಯೋಚನೆ ಮಾಡಬೇಕಾಗುತ್ತದೆ. ಆದುದರಿಂದ ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳಿಗೆ ಸಲಹೆ ಮಾಡುವುದೇನೆಂದರೆ Audit department and Account department should be separated. It should not be handled by one and the same person. ಇದರಿಂದ ಹಣಕಾಸಿನ ಲೆಕ್ಕಾಚಾರ ಬಹಳ ಅನುಮಾನಕ್ಕೆ ಅವಕಾಶ ಕೊಟ್ಟ ಹಾಗೆ ಆಗುತ್ತೆ ಕೆಲವು ಅನೇಕ ಸಂದರ್ಭಗಳಲ್ಲಿ ಏನಾಗುತ್ತದೆಂದರೆ Auditors ಚೆಕ್ಡ್ ಅಂಡ್ ಫೌಂಡ್ ಕರೆಕ್ಟ್ ಎಂದು ಸುಮ್ಮನೇ ಬರೆದುಕಳುಹಿಸಿ ಬಿಡುತ್ತಾರೆ. ಆದುದರಿಂದ ಲೆಕ್ಕವನ್ನು, suppose if it is handled by a different personality We can at least get the correct financial position of the Corporation ಅಲ್ಲದೆ ಅವರ ರತಕ್ಕಂಥ ಲೋಪದೋಷಗಳನ್ನು ಕಂಡುಹಿಡಿಯುವುದಕ್ಕೂ ಸಹಾಯಕವಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಅಡ್ಮಿನಿಸ್ಟ್ರೇಷನ್ ಬಗ್ಗೆ ಹೇಳುವುದಾದರೆ. ಸಾಧ್ಯವಾದಮಟ್ಟಿಗೂ ಕಮೀಷನರ್‌ರವರಿಗೆ ರುಜುಜರಿಯಲ್ಲಿ ರೆವಿನ್ಯೂ ಡಿಪಾರ್ಟ್‌ಮೆಂಟಿನವರನ್ನು ಹಾಕಿದ್ದರೆ ಒಳ್ಳೆಯದು, ಏತಕ್ಕೆಂದರೆ ಅವರು ಎಲ್ಲಾ Administrative ವಿಷಯವನ್ನೂ ತಿಳಿದುಕೊಂಡಿರುತ್ತಾರೆ. ಬೇರೆಯವರಿಗೆ, ಅಂದರೆ Health officer Engniner ರವರಿಗೆ ಅಡ್ಮಿನಿಸ್ಟ್ರೇಷನ್ ವಿಷಯ ಅಷ್ಟಾಗಿ ತಿಳಿದಿರುವುದಿಲ್ಲ. ಆದುದರಿಂದ, Deputy Commissioner should be given powers. Then should be clear cut policy It. should be dealt with by the Deputy Commissioner alone in matters of Administration etc.

ಇನ್ನು ನನ್ನ ಮತ್ತೊಂದು ಸಲಹೆ ಏನೆಂದರೆ, ಅಡ್ವೈಜರಿ ಕಮಿಟಿ Advisory Committe ಎಂದು ಒಂದನ್ನು ಮಾಡಬೇಕು ನಮ್ಮ ಬೆಂಗಳೂರು ನಗರದಲ್ಲಿ ಎಲೆಕ್ಟೆಡ್ ರೆಪ್ರೆಸೆಂಟೇಟಿವ್ ಇಲ್ಲದಿದ್ದಗ್ಯೂ ಕೂಡ ಬೆಂಗಳೂರು ನಗರ ಕಾರ್ಪೊರೇಷನ್ನಿನಲ್ಲಿ ಒಳ್ಳೆಯ ಯೋಗ್ಯವಂತರಾದ ಅಧಿಕಾರಿಗಳಿದ್ದಾರೆ. ಹಿಂದೆ ಏಷ್ಟೋ ಒಳ್ಳೆಯ ಕೆಲಸಗಳು ಈಗ್ಗಿ ಅವರ ಕಾಲದಲ್ಲಿ ನಡೆಯುತ್ತಿವೆ, ಅದರಲ್ಲಿ ಸಂದೇಹವಿಲ್ಲ, ಆದರೆ ನಡೆಯಂದೇ ಇದ್ದಂಥ ಅಡ್ವೈಜರಿ ಕಮಿಟಿಯನ್ನು ಮಾಡುವ ಬಗ್ಗೆ ಈ ಒಂದು ಆಕ್ಟ್‌ನಲ್ಲಿ ಪ್ರಾವಿಜನ್ ಎಂದು ಹೇಳಬಯಸುತ್ತೇನೆ. ಆ ಅಡ್ವೈಜರಿ ಕಮಿಟಿ ಬೋರ್ಡಿನಲ್ಲಿ ಎಂ.ಎಲ್.ಎ.ಗಳು ಅಥವಾ ಇದ್ದಿದ್ದರೆ ಚೆನ್ನಾಗಿತ್ತು ಎಂ.ಪಿ ಗಳೂ M.L A'S ಇದ್ದರೆ ತುರ್ತು ಪರಿಸ್ಥಿತಿ ಬಂದಾಗ Corporation ನಿನ ಕೆಲಸ ಕಾರ್ಯಗಳು ಮಾಡಲು ಅನುಕೂಲವಾಗುತ್ತದೆ. ಹಾಗೂ ಅದರಲ್ಲಿ ವೀಕರ್ಸ್ ಸೆಕ್ಷನ್ಸಿನವರಿಗೆ ಮತ್ತು ಲೇಬರ್ ಲೀಡರ್ಸ್‌ಗೆ women Socilly Educationally Backward ಜನಾಂಗದವರಿಗೂ ಅವಕಾಶವಿಂಬೇಕು ಆದುದರಿಂದ ಇಂಥವರನ್ನೆಲ್ಲಾ ಒಳಗೊಂಡ ಒಂದು ಅಡ್ವೈಜರಿ ಬೋರ್ಡ್‌ಮಾಡಿದ್ದರೆ ಬಹಳ ಚೆನ್ನಾಗಿತ್ತೆಂದು ಈ ಸಂದರ್ಭದಲ್ಲಿ ಒತ್ತಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನು ರೆವಿನ್ಯೂ ಟ್ಯಾಕ್ಸಸ್ ಬಗ್ಗೆ ಹೇಳುವುದಾದರೆ, ಕೆಲವೊಂದು ಸಂದರ್ಭದಲ್ಲಿ ಟ್ಯಾಕ್ಸೇಷನ್ ಅಪೀಲ್ ಕಮಿಟಿ ಎಂದು ಮಾಡಿರುತ್ತೀರಿ. ಕೆಲವೊಂದು ಸಂದರ್ಭದಲ್ಲಿ ಯೂನಿಫಾರಂ ರೂಲ್ಸ್ ಮಾಡುವುದಕ್ಕಾಗುವುದಿಲ್ಲ. ಕೆಲವೊಂದಕ್ಕೆ ಏನು ಸೆಸ್ ಹಾಕುತ್ತೀರಿ ಅದು ಕ್ಲಿಯರ್ ಕಟ್ ಆಗಿರಬೇಕು. ಇಂಥ ಬೆಂಗಳೂರಿನಂಥ ದೊಡ್ಡ ಪಟ್ಟಣದಲ್ಲೂ ಕೂಡ ಒಂದೊಂದು ಕಡೆ ಒಂದೊಂದು ತರಹ ಸೆಸ್‌ನ್ನು ವಸೂಲಿ ಮಾಡುವುದನ್ನು ನಮ್ಮ ಗಮನಕ್ಕೆ ಬಂದಿದೆ. ಅನೇಕ ಸಂದರ್ಭಗಳಲ್ಲಿ ಇದರ ಬಗ್ಗೆ ನಾವು ಕೇಳಿಕೊಂಡಿದ್ದೇವೆ. what is the yardstick or criteria for taking fresh taxation measures. ಇನ್ನು ಈ ಬಿಲ್ಲಿನಲ್ಲಿ ಕಾರ್ಪೊರೇಷನ್ನಿನ ಕೆಲಸಕಾರ್ಯಗಳ ಬಗ್ಗೆ, ಪ್ರತಿಯೊಂದು ಡಿಪಾರ್ಟ್‌ಮೆಂಟಿನ ಪ್ರಗತಿ, ಸಾಧನೆ ಇತ್ಯಾದಿ ಕೆಲಸಕಾರ್ಯಗಳ ಬಗ್ಗೆ (one Bulliten,) ಒಂದು ಬುಲೆಟಿನ್ ಹೊರಡಿಸುವ ಬಗ್ಗೆ ಅವಕಾಶ ಮಾಡಿಕೊಟ್ಟಿದ್ದರೆ ಚೆನ್ನಾಗಿರುತ್ತಿತ್ತೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಆದುದರಿಂದ ತಾವು ತಂದಿರತಕ್ಕಂಥ ಕಾನೂನಿನಲ್ಲಿ ಕೆಲವು ಒಳ್ಳೆಯವು ಇವೆ. ಮತ್ತೆ ಕೆಲ ಲೋಪದೋಷಗಳೂ ಇವೆ ನಾನು ಈ ಸಂದರ್ಭದಲ್ಲಿ ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ ಒಂದೇ ಸಾರಿ ಪರ್‌ಫೆಕ್ಟ್ Perfect ಆಗಿ ಕಾನೂನನ್ನು ಮಾಡುವುದಕ್ಕಾಗುವುದಿಲ್ಲ ಅದರಲ್ಲಿ ಕೆಲವು ಚಿಕ್ಕ ಪುಟ್ಟ ದೋಷಗಳು ಇದ್ದೇ ಇರುತ್ತವೆ ಆದರೂ ಕೂಡ ತಾವು ಒಂದು ಯೂನಿಫಾರಂ ಬಿಲ್ಲನ್ನು ತಂದಿರತಕ್ಕಂಥದ್ದು ನಿಜವಾಗಿಯೂ ಸ್ವಾಗತಾರ್ಹವಾದದ್ದು. ತಾವು ಇದರಲ್ಲಿ ಇರತಕ್ಕಂಥ ಲೋಪದೋಷಗಳನ್ನು ಅನುಭವದಿಂದ ತಿಳಿದುಕೊಂಡು ಅವುಗಳನ್ನು ತಿದ್ದಿಕೊಳ್ಳಬೇಕೆಂದು ಹೇಳಿ, ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

† ಶ್ರೀ ಟಿ ಆರ್. ಶಾಮಣ್ಣ (ಕೋಟೆ).—ಸನ್ಮಾನ್ಯ ಉಪಾಧ್ಯಕ್ಷರೇ, ಸಭೆಯ ಮುಂದಿಟ್ಟಿರುವ, ಇಡೀ ಕರ್ನಾಟಕಕ್ಕೇ ಅನ್ವಯವಾಗುವಂಥ ಕಾರ್ಪೊರೇಷನ್‌ಗಳಿಗೆ ಸಂಬಂಧಪಟ್ಟ ಮಸೂದೆ ಕುರಿತು ನಾನು ಕೆಲವು ಮಾತುಗಳನ್ನು ಹೇಳುವುದಕ್ಕೆ ತಮ್ಮ ಅಪ್ಪಣೆ ಬೇಡುತ್ತೇನೆ. ಈ ಮಸೂದೆಯನ್ನು ಪರಿಶೀಲನೆ ಮಾಡುವುದಕ್ಕೆ ಏರ್ಪಾಡು ಮಾಡಿದ್ದ ಜಂಟಿ ಸಲಹಾ ಸಮಿತಿಯ ಸಭೆಯಲ್ಲಿ ನಾನೂ ಒಬ್ಬ ಸದಸ್ಯನಾಗಿದ್ದುದರಿಂದ ಈ ಮಸೂದೆ ಕುರಿತು ನಾನು ಹೆಚ್ಚು ಮಾತನಾಡಬೇಕಾದ ಅವಶ್ಯಕತೆ ಇರಲಿಲ್ಲ. ಆದರೂ ಕೂಡ, ನಾನು ಕೆಲವು ಡಿಸೆಂಟ್ ಹಾಕಿದ್ದೇನೆ ; ಮತ್ತೆ ಕೆಲವಾರು ಮಾನ್ಯ ಸದಸ್ಯರು ಅನೇಕ ವಿಚಾರಗಳನ್ನು ಈ ಸಭೆಯ ಗಮನಕ್ಕೆ ತಂದಿದ್ದಾರೆ. ಆದುದರಿಂದ, ನಾನು ಆ ಸಭೆಯ ಸದಸ್ಯನಾಗಿದ್ದುದರಿಂದ ಕೆಲವು ವಿವರಗಳನ್ನು ಈ ಸಂದರ್ಭದಲ್ಲಿ ಕೊಡುವುದಕ್ಕೆ ಇಚ್ಛೆಪಡುತ್ತೇನೆ.

ಬೆಂಗಳೂರು ನಗರ ಕಾರ್ಪೊರೇಷನ್ ಆ್ಯಕ್ಟ್ ಹಿಂದಿನ ಮದ್ರಾಸ್ ಕಾರ್ಪೊರೇಷನ್ ಆ್ಯಕ್ಟ್‌ಗೆ ಅನುಗುಣವಾಗಿತ್ತು ಮತ್ತು ಹುಬ್ಬಳ್ಳಿ-ಧಾರವಾಡ ಕಾರ್ಪೊರೇಷನ್ ಆ್ಯಕ್ಟ್ ಬೊಂಬಾಯಿ ಪ್ರಾವಿಷನಲ್ ಕಾರ್ಪೊರೇಷನ್ ಆ್ಯಕ್ಟ್‌ಗೆ ಅನುಗುಣವಾಗಿ ಇತ್ತು. ಈ ಎರಡೂ ಕಾನೂನುಗಳನ್ನು ಸಮನ್ವಯ ಮಾಡಿ.........

MR. DEPUTY SPEAKER.—There is no minute of dissent here. I have verified this myself The hon. Member was a member in the Joint Select Committee also.

SRI T. R. SHAMANNA.—It was a very short minute of dissent. I have got a copy of the minute of dissent given to the office.

MR. DEPUTY SPEAKER.—But he has not given the minute of dissent even to the office.

ಶ್ರೀ ಡಿ. ಕೆ. ನಾಯ್ಕರ್.—ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರಾದ ಶ್ರೀಮಾನ್ ಟಿ. ಆರ್. ಶಾಮಣ್ಣನವರು ಜಂಟಿ ಸಲಹಾ ಸಮಿತಿಯ ಸದಸ್ಯರಾಗಿದ್ದರು. ಅವರು ಸದಸ್ಯರಾಗಿದ್ದಾಗ, ಅಲ್ಲಿ ನಡೆದ ಚರ್ಚೆಯಲ್ಲಿ ಇವೆಲ್ಲವನ್ನೂ ಸಂಪೂರ್ಣವಾಗಿ ಮತ್ತು ಸಂತೋಷದಿಂದ ಒಪ್ಪಿಕೊಂಡಿದ್ದಾರೆ. ಆ ಸಭೆಯಲ್ಲಿ ಮಾನ್ಯ ಸದಸ್ಯರು, ಅನೇಕ ಸಲಹೆಗಳನ್ನು ಚರ್ಚೆ ಮಾಡುವ ಸಮಯದಲ್ಲಿ ಎತ್ತಿದ್ದರು. ಅವುಗಳನ್ನೆಲ್ಲಾ ಪರಿಶೀಲನೆ ಮಾಡಿ, ಜಂಟಿ ಸಲಹಾ ಸಮಿತಿಯು ಒಂದು ವರದಿಯನ್ನು ಈ ಸಭೆಯ ಮುಂದೆ ಇಟ್ಟಿದ್ದಾರೆ. ಈಗ ಮತ್ತೆ ಅದರ ಮೇಲೆ ಮಾತನಾಡಬೇಕೆಂದು ಮಾನ್ಯ ಸದಸ್ಯರಾದ ಶ್ರೀ ಟಿ. ಆರ್ ಶಾಮಣ್ಣನವರು ಪ್ರಯತ್ನ ಮಾಡಿದರೆ, ಆ ವರದಿಯಲ್ಲಿ ಏನೇನು ಇದೆ ಅದನ್ನು ಹೊರತು ಮಿಕ್ಕದ್ದನ್ನು ಏನಾದರೂ ಮಾತನಾಡಬೇಕಾಗಿದೆಯೇ ವಿನಹ, ಯಾವುದನ್ನು ಜಂಟಿ ಸಲಹಾ ಸಮಿತಿಯಲ್ಲಿ ಒಪ್ಪಿದ್ದಾರೆ, ಅದನ್ನು ಇಲ್ಲಿ ವಿರೋಧಿಸುವ ಭಾವನೆಯನ್ನು ಮಾನ್ಯ ಸದಸ್ಯರು ತಾಳಬಾರದೆಂದು ನಾನು ಹೇಳಬಯಸುತ್ತೇನೆ.

SRI M. S. KRISHNAN —Supposing I have committed a mistake during the course of the discussion of the Joint Select Committee, have I no right to change it now ?

MR. DEPUTY SPEAKER.—To change one's opinion is a democratic right. The hon member Sri T. R. Shammanna was a member of the Joint Select Committee When there is a unanimous report, he can not participate in the debate on the floor of the House.

Sri T. R. SHAMANNA —I am not speaking anything about the report which has been given.

SRI K. B SHIVIAH.—Sir, there is a precedent in this connection. The members of the Joint Select Committee on the Land Reforms Bill were given a chance to participate in the debate. There was no bar for the members again participating in the debate. In view of this precedent, Sri Shamanna can be given a chance to speak.

MR DEPUTY SPEAKER —Members other than those who are the members of the committee shall be given preference to speak during the discussion of the Bill as reported by the Committee. Members of the committee might be given a chance if a reply is called for on the points raised by other members. By and large the members of the committee should not participate in the debate,

SRI T. R. SHAMANNA.—I wanted to bring to the notice of the House how those decisions were arrived at. I have given my minute of dissent and it is only on those point I hold my ground firm.

ಶ್ರೀ ಟಿ ಆರ್. ಶಾಮಣ್ಣ.—ಈ ವರದಿಯನ್ನು ತಯಾರು ಮಾಡುವುದಕ್ಕೆ ಜಂಟಿ ಸಲಹಾ ಸಮಿತಿಯು ಬಹಳ ಶ್ರಮವಹಿಸಿದೆ ಎಂದು ಹೇಳಿದರೆ, ಅದು ತಪ್ಪಾಗಲಾರದು. ಹಾಗಿದ್ದರೂ ಕೂಡ; ಇದರಲ್ಲಿರತಕ್ಕ ಅನೇಕ ನಿಬಂಧನೆಗಳು ನಮಗೆ ತಿರುಗುಬಾಣವಾಗುತ್ತವೆ ಎಂದು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಅಂಥಾ ಪರಿಸ್ಥಿತಿ ಅನೇಕ ಸಂದರ್ಭಗಳಲ್ಲಿ ಬರಬಹುದು ಎನ್ನುವ ಉದ್ದೇಶದಿಂದ ಕೆಲವು ವಿವರಣೆಗಳನ್ನು ಕೊಡಬೇಕಾದ ಪ್ರಸಂಗ ನನಗೆ ಬಂದಿದೆ.

ಮೊದಲನೆಯದಾಗಿ, ಬೆಂಗಳೂರು ನಗರಕ್ಕೆ ಒಂದು ಬೇರೆ ಕಾರ್ಪೊರೇಷನ್ ಆ್ಯಕ್ಟ್ ಇರಬೇಕಾಗಿತ್ತು ಮತ್ತು ಬೇರೆ ನಗರಗಳಿಗೆ ಒಂದು ಬೇರೆ ಕಾರ್ಪೊರೇಷನ್ ಆ್ಯಕ್ಟ್ ಇದ್ದರೆ ಅನುಕೂಲವಾಗುತ್ತದೆ ಎಂದು ಮಾನ್ಯ ಸದಸ್ಯರಾದ ಶ್ರೀಮಾನ್ ಕೆ. ಪುಟ್ಟಸ್ವಾಮಿಯವರು ಹೇಳಿದರು. ಈ ಪ್ರಶ್ನೆಯನ್ನು ನಾನು ಮೊದಲೇ ಜಂಟಿ ಸಲಹಾ ಸಮಿತಿಯಲ್ಲಿ ಎತ್ತಿದಾಗ, ಸಮಗ್ರವಾದೊಂದು ಮಸೂದೆಯನ್ನು ತರಬೇಕೆನ್ನುವ ಉದ್ದೇಶವಿರುವಾಗ, ಒಂದೊಂದು ನಗರಕ್ಕೂ ಒಂದೊಂದು ಮಸೂದೆಯನ್ನು ತಂದರೆ, ನಮ್ಮ ಉದ್ದೇಶ ಸಫಲವಾಗುವುದಿಲ್ಲ ಎಂದು ಹೇಳಿದರು. ಹಾಗೇನಾದರೂ ಇದ್ದರೆ, By a special order the Government can take decision on the matters. ಎನ್ನುವ ಸಮಾಧಾನವನ್ನೂ ಕೊಟ್ಟರು, ಆದುದರಿಂದ, ಅದು ಸಮಂಜಸವಾದುದು ಎಂದು ನನಗೆ ಕಂಡುಬಂದಿತು.

ಶಾಸಕರಾಗಿದ್ದುಕೊಂಡು, ಕಾರ್ಪೊರೇಷನ್ನಿನಲ್ಲಿ ಕಾರ್ಪೊರೇಟರುಗಳಾಗುವುದಕ್ಕೆ ಅವಕಾಶವಿಲ್ಲ ಎನ್ನುವ ನಿಬಂಧನೆಯೊಂದಿದೆ. ಆದರೆ, ಅವರ ಕ್ಷೇತ್ರಕ್ಕೆ ಸಂಬಂಧಪಟ್ಟ ಚರ್ಚೆಗಳಲ್ಲಿ ಎಕ್ಸ್ ಅಫಿಷಿಯೋ ಮೆಂಬರ್ ಆಗಿ ಇರಬಹುದು ಎನ್ನುವ ಒಂದು ಕಲಂ ಇದೆ. ಆದರೆ, ಗ್ರಾಮಾಂತರ ಪ್ರದೇಶದಿಂದ ಬರತಕ್ಕ ಶಾಸಕರಿಗೆ, ಸರ್ಕಾರದವರು ಅನೇಕ ಸೌಕರ್ಯಗಳನ್ನು ಒದಗಿಸಿಕೊಡಬೇಕಾಗಿರುವುದರಿಂದ, ಕಾರ್ಪೊರೇಷನ್ನಿನಲ್ಲೂ ಶಾಸಕರಿಗೆ ಸ್ಥಾನವಿರಬೇಕಾದುದು ಮುಖ್ಯ, ಅದನ್ನು ಬಾರ್ ಮಾಡುವುದು ಸರಿಯಾದುದಲ್ಲ ಎನ್ನುವ ಪ್ರಶ್ನೆ ಕೂಡ ಬಂತು. ಸಾಧಾರಣವಾಗಿ, ಒಬ್ಬ ವ್ಯಕ್ತಿಗೆ ಅಧಿಕಾರಕ್ಕೆ ಸಂಬಂಧಪಟ್ಟಹಾಗೆ ಒಂದೇ ಜಾಗ ಇರಬೇಕು ಎಂದು ನಿಯಮ ಇದೆ. ಆದುದರಿಂದ, ಶಾಸಕರಾಗಿದ್ದುಕೊಂಡು ಕಾರ್ಪೊರೇಟರುಗಳಾಗುವುದು ಅಲ್ಲೂ ಸಂಭಾವನೆ ಪಡೆಯುವುದು ಮತ್ತು ಇಲ್ಲೂ ಸಂಭಾವನೆ ಪಡೆಯುವ ಪ್ರಶ್ನೆ ಬರುತ್ತದೆ ಎನ್ನುವ ವಿಚಾರ ಚರ್ಚೆಯಾಗಿ, ಶಾಸಕರು, ತಮ್ಮ ಕ್ಷೇತ್ರಗಳಿಗೆ ಸಂಬಂಧಿಸಿದ ಕಷ್ಟಸುಖಗಳನ್ನು ಸಂಬಂಧಪಟ್ಟವರ ಗಮನಕ್ಕೆ ತರುವುದಕ್ಕೆ ಮತ್ತು ಸಾಧ್ಯವಿದ್ದರೆ ಸಾರ್ವಜನಿಕ ಹಿತದೃಷ್ಟಿಯಿಂದ ಆಯವ್ಯಯದಲ್ಲಿ ಹಣಕಾಸನ್ನು ಒದಗಿಸಿ, ಅನುಕೂಲ ಮಾಡಿಕೊಡುವುದಕ್ಕೆ ರೆಗ್ಯುಲೇಷನ್ ಮಾಡಬಹುದೆಂದು ಅಸ್ಯೂರೆನ್ಸ್ ಕೊಡಲಾಗಿದೆ.

ಇದರಲ್ಲಿ ಒಂದು ಅಂಶ ಸ್ಪಷ್ಟವಾಗಿದೆ ; ನಮ್ಮ ಬೆಂಗಳೂರು ಕಾರ್ಪೊರೇಷನ್‌ನ ಪರಿಸ್ಥಿತಿ ಹೇಗಿದೆ ಎಂದರೆ ; ಒಂದು ಕಡೆ ಡೆವಲಪ್‌ಮೆಂಟ್ ಅಥಾರಿಟಿ ಸೃಷ್ಟಿ ಮಾಡಿ ನಗರದ ಹೆಚ್ಚು ಭಾಗದ ಅನುಕೂಲವನ್ನು ಡೆವಲಪ್ ಮೆಂಟ್ ಅಥಾರಿಟಿಗೆ ವಹಿಸಿದ್ದಾರೆ ನೀರಿಗೆ ಸಂಬಂಧಪಟ್ಟ ವಿಚಾರವನ್ನು ವಾಟರ್ ಸಪ್ಲೈ ಮತ್ತು ಸೀವರೇಜ್ ಬೋರ್ಡಿಗೆ ವಹಿಸಿದ್ದಾರೆ, ಎಲೆಕ್ಟ್ರಿಸಿಟಿಗೆ ಸಂಬಂಧಪಟ್ಟ ವಿಚಾರವನ್ನು ಎಲೆಕ್ಟ್ರಿಸಿಟಿ ಬೋರ್ಡಿಗೆ ಹಾಕಿದ್ದಾರೆ. ನಮಗೆ ದುಡ್ಡು ಕೊಡತಕ್ಕ ಜವಾಬ್ದಾರಿಯೇ ಹೊರತು ಬೇರೆ ಇಲ್ಲ. ಸಾರ್ವಜನಿಕರಿಗೆ ಸಂಬಂಧಪಟ್ಟ ಹೆಚ್ಚಿನ ಅಧಿಕಾರ ಕಾರ್ಪೊರೇಷನ್‌ಗೆ ಇಲ್ಲವೇ ಇಲ್ಲ ಕಾರ್ಪೊರೇಷನ್ನಿಗೆ ರಸ್ತೆ ರಿಪೇರಿ ಮಾಡತಕ್ಕದ್ದು ರಸ್ತೆ ಚೊಕ್ಕಟವಾಗಿಡತಕ್ಕದ್ದು. ಪರೀಕ್ಷೆಗಳಲ್ಲಿ ಫೇಲಾದ ಮಕ್ಕಳಿಗೆ ಪಾಠ ಹೇಳಿಕೊಡತಕ್ಕದ್ದು. ಇನ್ನೂ ಕೆಲವು ವಿಚಾರಗಳನ್ನು ಬಿಟ್ಟರೆ, ಸಾರ್ವಜನಿಕ ದೃಷ್ಟಿಯಿಂದ ಅನೇಕ ವಿಚಾರಗಳು ಇಲ್ಲ. ಅದಕ್ಕಾಗಿ ಬೇರೆ ಬೋರ್ಡುಗಳು ಆಗಿರುವುದರಿಂದ ಹೊಸ ಕಾನೂನಿನಲ್ಲಿ ಇದರ ಅನುಗುಣವಾಗಿ ಮಾಡುವುದಕ್ಕೆ ಸಾಧ್ಯವಿಲ್ಲ.

4-00 F. M.

ಆ ಮೇಲೆ ಇದರಲ್ಲಿ ಬಂದಿರತಕ್ಕದ್ದು ಲೇಬರ್ ಜನಸಂಖ್ಯೆ ಎಲ್ಲಿ ಹೆಚ್ಚಾಗಿರುತ್ತಾರೋ ಅಲ್ಲಿ ಲೇಬರ್ ಪ್ರತಿನಿಧಿಗಳು ಜಾಸ್ತಿ ಇರಬೇಕು ಎನ್ನುವ ವಾದ ಒಪ್ಪಿಕೊಂಡೇ ಹಿಂದೆ ಕಾರ್ಪೊರೇಷನ್ ಆದಾಗ ಬರೀ ಎರಡು ಸದಸ್ಯರಿಗೆ ಮಾತ್ರ ಕೊಡುತ್ತಿದ್ದರು, ಈಗ ಜನಸಂಖ್ಯೆಗೆ ಅನುಗುಣವಾಗಿ 35ಕ್ಕೆ ಎರಡರಂತೆ, ಅಂದರೆ 6ರ ವರೆಗೂ ಮೊದಲಿಗಿಂತ ಮೂರು ಪಟ್ಟು ಜಾಸ್ತಿ ಮಾಡಿದ್ದಾರೆ. ಮಾನ್ಯ ಕೃಷ್ಣನ್‌ರವರು ಎತ್ತಿದ ಸಲಹೆ ಏನು ಇದೆ; ಟೆಕ್ಸ್‌ಟೈಲ್ ಮತ್ತು ನಾನ್ ಟೆಕ್ಸ್‌ಟೈಲ್‌ಗೆ ಸಂಬಳಗಳು 15 ಪರ್ಸೆಂಟೇಜ್ ಕೊಟ್ಟಿದ್ದೀರಿ; ಇಂಜಿನಿಯರಿಂಗ್ ಹಾಗೂ ಬೇರೆ ಕೈಗಾರಿಕೆಗಳಿಗೆ 50 ಪರ್ಸೆಂಟ್ ಕೊಡುವುದು ಸರಿಯಲ್ಲ ಈ ಬಗ್ಗೆ ಹೆಚ್ಚಿನ ರೆಪ್ರೆಸೆಂಟೇಟೀವ್ ಕೊಡುವ ಬಗ್ಗೆ ಮಾನ್ಯ ಮಂತ್ರಿಗಳು ಗಮನಕೊಡಬೇಕು. ಮತ್ತು ಅಕ್ಟ್ರಾಯ್ ಬಗ್ಗೆ ಬೇಕಾದಷ್ಟು ಚರ್ಚೆಯಾಗಿದೆ ಅನೇಕ ಸದಸ್ಯರು ಆಕ್ಟ್ರಾಯ್ ತೆಗೆಯುವ ಬಗ್ಗೆ ಹೆಚ್ಚಿನ ವಾದವನ್ನು ಸಭೆಯ ಮುಂದಿಟ್ಟಿದ್ದಾರೆ. ನಾನಾದರೂ ಕೂಡ ಸಾಕಷ್ಟು ಅರಿತಿದ್ದೇನೆ ; ಆಕ್ಟ್ರಾಯ್ ಟಿಬ್ರಾಯನ ಕಾಲದ ತೆರಿಗೆ ಇದರ ಸುಲಿಗೆಯಿಂದ ನಾಗರೀಕರಿಗೆ ಹೆಚ್ಚಿನ ಹೊರೆ ಬಿದ್ದು ಲಾಭ ಪಡೆಯತಕ್ಕ ಹಿಂದೆ ಮಾಡತಕ್ಕ ಕ್ರಮವಾಗಿದೆ ; ಆಕ್ಟ್ರಾಯ್ ತೆರಿಗೆಯನ್ನು ತೆಗೆಯಬೇಕೆನ್ನುವುದರಲ್ಲಿ ನಾನು ಒಬ್ಬ. ಆದರೆ ಒಂದು ಪ್ರಶ್ನೆ ಉದ್ಭವ ವಾಗುತ್ತದೆ; ಬೆಂಗಳೂರು ನಗರದ ವರಮಾನದಲ್ಲಿ ಅಂದರೆ, 6 ಕೋಟಿರೂಪಾಯಿನಲ್ಲಿ 9 ಕೋಟಿ ರೂಪಾಯಿ ಆಕ್ಟ್ರಾಯ್ ನಿಂದಲೇ ಬರುತ್ತದೆ. ಈ ವರ್ಷ 10 ಕೋಟಿ ರೂಪಾಯಿ ಬರಬಹುದು ; 16 ಕೋಟಿರೂಪಾಯಿನಲ್ಲಿ 9 ಕೋಟಿ ರೂಪಾಯಿ ತೆಗೆದರೆ ; ಇನ್ನೂ 7 ಕೋಟಿ ರೂಪಾಯಿ ಇದರಲ್ಲಿ ಎಸ್ಟಾಬ್ಲಿಷಮೆಂಟ್‌ಗೆ 5 ಕೋಟಿ ರೂಪಾಯಿ ; ಇನ್ನು ಎರಡು ಕೋಟಿ ರೂಪಾಯಿನಲ್ಲಿ ಏನು ಮಾಡಬೇಕು? ಆಕ್ಟ್ರಾಯ್ ತೆಗೆಯಬೇಕಾದರೆ ಅದಕ್ಕೆ ಸರಿದೂಗತಕ್ಕ ವರಮಾನ ಬರುವ ಏರ್ಪಾಡು ಮೊದಲು ಮಾಡಬೇಕು ಅಲ್ಲಿನವರೆಗೂ ಅಕ್ಟ್ರಾಯ್ ಇರಬೇಕಾಗುತ್ತದೆ ಆ ದೃಷ್ಟಿಯಿಂದ ಅಕ್ಟ್ರಾಯಿಗೆ ಒಪ್ಪಿಗೆ ಕೊಡಬೇಕಾಗುತ್ತದೆ ಹತ್ತು ವರ್ಷಗಳ ಹಿಂದೆ ಬೆಂಗಳೂರು ಕಾರ್ಪೊರೇಷನ್ನಿನ ವರ ಮಾನ ವರ್ಷಕ್ಕೆ ಒಂದುಕೋಟಿ ಇತ್ತು. ವ್ಯಾಪಾರ ಬೆಳೆದಂತೆ ಸಾಮಾನು ಸರಂಜಾಮುಗಳ ಬೆಲೆ ಹೆಚ್ಚಾದರೆ ವರ್ಷಕ್ಕೆ 100ಕೋಟಿ ವರೆಗೂ ಹೆಚ್ಚಾಗುವುದರಲ್ಲಿದೆ. ಇದರ ಜೊತೆಗೆ ಶೋಚನೀಯ ವಾದ ವಿಚಾರ ಏನು ಅಂದರೆ 1956ರಲ್ಲಿ ರೋಡ್ ಟ್ಯಾಕ್ಸ್, ಮೋಟಾರ್ ವೆಹಿಕಲ್ಸ್ ಕಾಂಪನ್‌ಸೇಷನ್‌ಗೆ ಸಂಬಂಧಪಟ್ಟವರಿಗೆ ನಾಲ್ಕುವರೆ ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದರು. ಅವತ್ತು ಒಂದು ಕೋಟಿ ರೂಪಾಯಿ ಮೋಟಾರು ವೆಹಿಕಲ್ಸ್ ಟ್ಯಾಕ್ಸ್ ಕಲೆಕ್ಟ್ ಮಾಡುತ್ತಿದ್ದರು. ಇಂದು 9 ಕೋಟಿ ರೂಪಾಯಿ ಕಲೆಕ್ಟ್ ಮಾಡುತ್ತಿದ್ದಾರೆ ಹಿಂದೆ 20 ವರ್ಷದ ಕೆಳಗೆ ಏನು ಗೊತ್ತು ಮಾಡಿದ್ದರೋ ಅದನ್ನು ಮಾತ್ರ ಕೊಡುತ್ತಿದ್ದಾರೆ. ಬೆಂಗಳೂರು ಕಾರ್ಪೊರೇಷನ್ ಹಿಂದೆ ರೋಡಿಗಾಗಿ 10 ಲಕ್ಷ ರೂಪಾಯಿ ಖರ್ಚು ಮಾಡುತ್ತಿತ್ತು, ಇವತ್ತು ಒಂದುಕೋಟಿ 20 ಲಕ್ಷ ರೂಪಾಯಿ ರೋಡಿಗೋಸ್ಕರ ಖರ್ಚು ಮಾಡುತ್ತಿದ್ದಾರೆ. ಕಾರ್ಪೊರೇಷನ್ ರೋಡ್ ಉಪಯೋಗಿಸಿ ವಾಹನಗಳಿಂದ ವಸೂಲು ಮಾಡತಕ್ಕ ದುಡ್ಡನ್ನು ಸರ್ಕಾರ ತೆಗೆದುಕೊಂಡು ಕಾರ್ಪೊರೇಷನ್‌ಗೆ ನ್ಯಾಯವಾದ ಪಾಲನ್ನು ಕೊಡದೇ ಇರತಕ್ಕದ್ದು ಕಾರ್ಪೊರೇಷನ್ನಿಗೆ ದೊಡ್ಡ ದ್ರೋಹ ಮಾಡಿದಂತೆ. ಬೇರೆ ನಗರಗಳಲ್ಲಿ ವಾಹನಗಳ ಟ್ಯಾಕ್ಸ್‌ನಲ್ಲಿ ಅರ್ಧ ಭಾಗದಷ್ಟು ಹಣವನ್ನು ಕಾರ್ಪೊರೇಷನ್ನಿಗೆ ಕೊಡುತ್ತಿದ್ದಾರೆ ಅದೇರೀತಿ ಇಲ್ಲಿಯೂ ಕೊಡಬೇಕು ಎನ್ನುವ ವಾದವನ್ನು ನಾನು ಕೂಡ ಪುಷ್ಟೀಕರಿಸುತ್ತೇನೆ. ಆದರೆ ಆಕ್ಟ್ರಾಯ್ ತೆಗೆಯುವುದಕ್ಕೆ ಮುಂಚೆ ಎಲ್ಲ ವಿಚಾರವನ್ನು ಯೋಚನೆ ಮಾಡಿ ಕಾರ್ಪೊರೇಷನಿನ ಹಣಕಾಸಿಗೆ ಕೊರತೆ ಬರದ ಹಾಗೆ ರೀಪ್ಲೇಸ್ ಮಾಡಬೇಕೆಂದು ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ಸರಿಯಾದ ವರಮಾನ ಒದಗಿಸಿಕೊಡುವವರೆಗೂ ಆಕ್ಟ್ರಾಯ್ ಇರಬೇಕೆಂದು ನನ್ನ ಖಚಿತವಾದ ಅಭಿಪ್ರಾಯ. ಮತ್ತು ಮಲ್ಟಿ ಮೆಂಬರ್ಸ್ ಕಾನ್‌ಸ್ಟಿಟ್ಯೂಷನ್ ಬಗ್ಗೆ ಹೇಳುವುದಾದರೆ ; ಮೊದಲು ಸಿಂಗಲ್ ಮೆಂಬರ್ ಕಾನ್‌ಸ್ಟಿಟ್ಯೂಯನ್ಸಿ ಇತ್ತು. ಈಗ ಒಂದೊಂದು ಡಿವಿಜನ್‌ಗೆ ಎರಡಕ್ಕಿಂತ ಜಾಸ್ತಿ ಮೆಂಬರ್ ಇರಬೇಕು ಎನ್ನುವ ಬಗ್ಗೆ ಸಾಕಾದಷ್ಟು ಚರ್ಚೆಯಾಗಿದೆ. ಮಲ್ಟಿ ಮೆಂಬರ್ ಕಾನ್‌ಸ್ಟಿಟ್ಯೂಯನ್ಸಿ ಆದರೆ ಕಾರ್ಪೊರೇಷನ್ನಿಗೆ ಉತ್ತಮವಾದ ಪ್ರತಿನಿಧಿಗಳನ್ನು ಚುನಾಯಿಸುವುದಕ್ಕೆ ಅನುಕೂಲವಾಗುತ್ತದೆ. ಬಸವನಗುಡಿ ಡಿವಿಜನ್ ಇದೆ : ಅಲ್ಲಿ ಇರತಕ್ಕ ಓಟರ್ಸ್ ಸಂಖ್ಯೆ 13 ಸಾವಿರ ; ಈ ಡಿವಿಜನ್‌ನಲ್ಲಿ ಕನಕನಪಾಳ್ಯ ಇದೆ : ಅಲ್ಲಿ 1800 ಓಟು ಇದೆ ; ಇದರ ಪಕ್ಕದಲ್ಲಿ 300 ಗುಡಿಸಲು ಇರತಕ್ಕ ಸ್ಲಮ್ ಇದೆ: ಅಲ್ಲಿ 2400 ಓಟು ಹಾಕುತ್ತಾರೆ. ಕನಕನಪಾಳ್ಯದಲ್ಲಿರತಕ್ಕವರು

100ಕ್ಕೆ 90 ಭಾಗ ಓಟು ಮಾಡುತ್ತಾರೆ. 13 ಸಾವಿರ ಜನರಲ್ಲಿ 1500 ಓಟುಗಳನ್ನು 4-5 ಜನ ಹಂಚಿಕೊಳ್ಳುತ್ತಾರೆ ; 2400 ಓಟುಗಳನ್ನು ಪಡೆದು ಗೆದ್ದು ಬರುತ್ತಾರೆ ; ಇದು ಅನುಭವವಾಗಿ ಬಂದಿದೆ ಅನೇಕ ಡಿವಿಜನ್‌ಗಳಲ್ಲಿ ಪಟ್ಟಭದ್ರ ವ್ಯಕ್ತಿಗಳು ತಮ್ಮ ಪ್ರಭಾವ ಇಟ್ಟುಕೊಂಡು ಗೆದ್ದು ಬರತಕ್ಕಂಥಾದ್ದು ಇದೆ. ಇದನ್ನು ತಪ್ಪಿಸಬೇಕಾದರೆ ; ಮಲ್ಟಿಮೆಂಬರ್ ಕಾನ್ಸ್ಟಿಟ್ಯೂಯನ್ಸಿ ಮಾಡಿದರೆ ಅನುಕೂಲವಾಗುತ್ತದೆ. ಸದಸ್ಯರಾಗಬೇಕಾದರೆ, ಒಳ್ಳೆಯ ವ್ಯಕ್ತಿತ್ವ ಇರಬೇಕು. ಅರ್ಹತೆ ಇರಬೇಕು ; ನಾನು ಕಾರ್ಪೊರೇಟರ್ ಆಗಿ 18 ವರ್ಷಗಳಿಂದ ಇದ್ದೇನೆ ; ಆರು ಸಾರಿ ನಿಂತಿದ್ದೇನೆ. ನನ್ನ ಅನುಭವದಲ್ಲಿ ಹೇಳುವುದಾದರೆ, ಪ್ರತಿಯೊಂದು ಸಾರಿಯೂ ಕೌನ್ಸಿಲರ್ ಪಟ್ಟಿ ನೋಡಿದರೆ ಆಶ್ಚರ್ಯವಾಗಿದೆ : ದೂರತಕ್ಕ ಸಿಚಾರ ಎಂದು ಹೇಳುವುದಿಲ್ಲ. ಆರಿಸಿ ಬರತಕ್ಕ ವ್ಯಕ್ತಿಗಳು ಜನರ ಹಿತರಕ್ಷಣೆ ಮಾಡುವುದರಲ್ಲಿ ಹೆಚ್ಚಿನ ಅರ್ಹತೆ ಅನುಭವ ಇರಬೇಕು : ಆ ದೃಷ್ಟಿಯಿಂದ ನಾವೆಲ್ಲರೂ ಒಮ್ಮತದಿಂದ ಒಪ್ಪಿಗೆ ಕೊಡಬೇಕಾದ ಪರಿಸ್ಥಿತಿ ಬಂತು.

ಈ ಸೂಪರ್‌ಸೆಷನ್ ಎಂದು ಏನು ಒಂದು ಇದೆ ಅದನ್ನು ಕಿತ್ತು ಹಾಕಬೇಕು ಎಂದು ನಾಗಣ್ಣನವರು ಒತ್ತಾಯಪೂರ್ವಕವಾಗಿ ಹೇಳಿದರು. ತತ್ವಶ : ಈ ಸೂಪರ್ ಸೆಷನ್ ಅನ್ನತಕ್ಕದ್ದು, ಪ್ರೆಸಿಡೆಂಟ್ ರೂಲ್ ಅನ್ನತಕ್ಕದ್ದು ಗೌರವವಾಗಿರತಕ್ಕ ಪ್ರಜಾತತ್ವದಲ್ಲಿ ನಂಬಿರತಕ್ಕ ಜಾಗದಲ್ಲಿ ಇರಬಾರದು ಅದನ್ನು ಒಪ್ಪುತ್ತೇನೆ, ಆದರೆ ಕೆಲವು ಸಂದರ್ಭದಲ್ಲಿ ಸೂಪರ್ ಸೆಷನ್ ಬೇಕಾಗುತ್ತದೆ. ಹಿಂದೆ ಕಾರ್ಪೊರೇಷನ್ ಸೂಪರ್ ಸೀಡ್ ಮಾಡಿದಾಗ ಹೈಕೋರ್ಟಿನವರು ಸೂಪರ್ ಸೀಡ್ ಮಾಡಿದ್ದು ಸರಿಯಲ್ಲ ಎಂದು ತೆಗೆದು ಹಾಕಿದಾಗ ಒಂದು ಟೆಕ್ನಿಕಲ್ ಪಾಯಿಂಟ್‌ನಿಂದ ನಿಲ್ಲಬೇಕಾಯಿತು. ಕಾರ್ಪೊರೇಷನ್ ಟರ್ಮ್‌ಗೆ ಮಾಡಿದ್ದರೆ ಚೆನ್ನಾಗಿ ಇತ್ತು. ಕಾರ್ಪೊರೇಷನ್ ಟರ್ಮ್ ಮುಗಿದ ಮೇಲೆ ಮೂರುವರೆ ವರ್ಷ ತಳ್ಳಿದರು ಈಗ ಒಂದು ವರ್ಷ ಸೂಪರ್ ಸೀಡ್ ಮಾಡಿ ಅವಶ್ಯ ಬಿದ್ದರೆ ಮತ್ತೊಂದು ವರ್ಷ ಮಾಡಬಹುದು ಎಂದು ತಂದಿದ್ದಾರೆ, ಇದು ಮತ್ತೊಂದು ಹೆಜ್ಜೆ ಮುಂದಿಟ್ಟಂತೆ ಕಾಣುತ್ತದೆ. ಅನೇಕ ಸಂದರ್ಭಗಳಲ್ಲಿ ಈ ಕಾರ್ಪೊರೇಷನ್ ನ್ಯೂನತೆಗಳ ಬಗ್ಗೆ ಹೇಳಿದ್ದೇನೆ. ಮಾನ್ಯ ಕೃಷ್ಣನ್‌ರವರು, ಮಾನ್ಯ ಪುಟ್ಟಸ್ವಾಮಿಯವರು ಒಬ್ಬೊಬ್ಬರು ಮೂರು ಗಂಟೆಗಳ ಕಾಲ ಮಾತನಾಡಿ ಅನೇಕ ವಿಚಾರಗಳನ್ನು ಈ ಸಭೆಯ ಮುಂದೆ ಇಟ್ಟಿದ್ದಾರೆ. ಅವರು ಹೇಳಿರತಕ್ಕದ್ದರಲ್ಲಿ ತಳ್ಳಿಹಾಕತಕ್ಕದ್ದು ಯಾವುದು ಕಾಣಲಿಲ್ಲ ಆದರೆ ನಾನು ಇಷ್ಟು ಮಾತ್ರ ಹೇಳಬೇಕಾಗಿದೆ, ಮಾನ್ಯ ಪುಟ್ಟಸ್ವಾಮಿಯವರು ಮಾತನಾಡುವಾಗ ಒಳ್ಳೆಯ ತತ್ವವನ್ನು ತೆಗೆದುಕೊಂಡು ಬಹಳ ಐಡಿಯಲಿಸ್ಟಿಕ್ ಆಗಿ ಮಾತನಾಡಿದರು, ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. ಅದು ಅವರು ಮಂತ್ರಿಗಳಾಗಿದ್ದ ಕಾಲದಲ್ಲಿ, ಅಥವಾ ಅವರು ಮುನಿಸಿಪಲ್ ಪ್ರೆಸಿಡೆಂಟ್‌ರವರಾಗಿದ್ದ ಕಾಲಕ್ಕೆ ಅನ್ವಯವಾಗುತ್ತಿತ್ತು. ನಾನು ಅವರು ಹೇಳಿರತಕ್ಕ ಒಳ್ಳೆಯ ಕಾಲದಲ್ಲೂ ಕೌನ್ಸಿಲರ್ ಆಗಿದ್ದು ನಂತರವೂ ಕೌನ್ಸಿಲರ್ ಆಗಿದ್ದೆ, ಈಗ ಅವರು ಇದ್ದಿದ್ದರೆ ಚೆನ್ನಾಗಿ ಇರುತ್ತಿತ್ತು ಹೇಗೆ ಸಮಸ್ಯೆಗಳನ್ನು ಬಗೆಹರಿಸುತ್ತಿದ್ದರು ಎಂದು ಕೇಳಬಹುದಿತ್ತು, ಸರ್ಕಾರದ ಹಸ್ತಕ್ಷೇಪ ಇರಬಾರದು ಎಂದು ಹೇಳುವುದನ್ನು ಒಪ್ಪಿಕೊಳ್ಳುತ್ತೇನೆ, ಆದರೆ ಇಂತಹ ಸಂದರ್ಭದಲ್ಲಿ ಸರ್ಕಾರ ಏನು ಮಾಡಬೇಕು ಎಂಬ ಒಂದು ವಿಚಾರವನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಮೊದಲು ಸರ್ಕಾರಕ್ಕೂ ಮೇಯರ್‌ಗೂ ತಿಕ್ಕಾಟ ಬಂದಾಗ ಏನು ಮಾಡಬೇಕು, ಮೇಯರ್‌ಗೂ ಕೌನ್ಸಿಲರ್‌ಗೂ ತಿಕ್ಕಾಟ ಬಂದಾಗ ಏನು ಮಾಡಬೇಕು ? ಕಳೆದ ಮೂರು ವರ್ಷದಲ್ಲಿ ದಿನಪೆಳಗಾದರೆ ಪತ್ರಿಕೆಯಲ್ಲಿ ಒಬ್ಬೊಬ್ಬರದು ಒಂದೊಂದು ಸ್ಟೇಟ್‌ಮೆಂಟ್ ಬರುತ್ತಿತ್ತು. ಕಮಿಷನರಿಗೂ, ಮೇಯರ್‌ಗೂ ಹೊಂದಾಣಿಕೆ ಇಲ್ಲದೇ ನಡೆಯುವಾಗ ಮೇಯರ್‌ಗೂ, ಕೌನ್ಸಿಲರ್‌ಗೂ ಹೊಂದಾಣಿಕೆ ಇಲ್ಲದೇ ನಡೆಯುವಂತ ಸಂದರ್ಭದಲ್ಲಿ ಸರ್ಕಾರ ಏನು ಮಾಡಬೇಕು ಎನ್ನುವ ಬಗ್ಗೆ ಸರ್ಕಾರ ಯೋಚನೆ ಮಾಡಬೇಕು. ಹಿಂದೆ ಅನೇಕ ರಸ್ತೆಗಳು ಹಳ್ಳಕೊಳ್ಳಗಳಾಗಿ ಬಿದ್ದರು ಕಾರ್ಪೊರೇಷನ್‌ನಲ್ಲಿ ಆ ಪ್ರಶ್ನೆ ತೆಗೆದುಕೊಳ್ಳದೇ ಬಿಟ್ಟಿದ್ದರಿಂದ ಜನರು ಚಳುವಳಿ ಮಾಡುವುದಕ್ಕೆ ಪ್ರಾರಂಭ ಮಾಡಿದರು. ಆಗ ರಾಜ್ಯಪಾಲರಾದ ಧರ್ಮವೀರ ಅವರು ಅವರ ಕಾಲದಲ್ಲಿ ಒಂದು ಗವರ್ನ್‌ಮೆಂಟ್ ಆರ್ಡರ್ ಹೊರಡಿಸಿ ಇಂತಹ ಕೆಲಸಗಳನ್ನು ಮಾಡಬೇಕು ಎಂದು ಗವರ್ನ್‌ಮೆಂಟ್ ಡೈರೆಕ್ಷನ್ ಕೊಡಬೇಕಾಯಿತು. ಅಂತಹ ಸಂದರ್ಭ ಬಂದಾಗ ಅಧಿಕಾರ ಚಲಾಯಿಸಬೇಕಾಗುತ್ತದೆ ಎಂದು ಹೇಳುತ್ತೇನೆ. ನಗರ ಪಿತೃಗಳು ಸಾರ್ವಜನಿಕರ ಹಿತದೃಷ್ಟಿಯಿಂದ, ಸಾರ್ವಜನಿಕರ ಹಣವನ್ನು ಸರಿಯಾದ ರೀತಿಯಲ್ಲಿ ಖರ್ಚು ಮಾಡಿದರೆ ಆಗ ಆ ಪ್ರಶ್ನೆ ಉದ್ಭವಿಸುವುದಿಲ್ಲ ಎಂದು ಹೇಳುತ್ತೇನೆ. ಸರ್ಕಾರವು ಕೂಡ ಅಗತ್ಯ ಇದ್ದಾಗ ಹಸ್ತಕ್ಷೇಪ ಮಾಡಬೇಕೇ ವಿನಹ ಅನಾವಶ್ಯಕವಾಗಿ ಅಧಿಕಾರ ಇದೆ ಚಲಾಯಿಸಬೇಕು ಎಂದು ಹೇಳುವುದನ್ನು ನಾನು ಖಂಡಿತ ಒಪ್ಪುವುದಿಲ್ಲ ಎಂದು ಈ ಸಂದರ್ಭದಲ್ಲಿ ಸ್ಪಷ್ಟವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಪುಟ್ಟಸ್ವಾಮಿಯವರು ಮಾತನಾಡುತ್ತಾ ಮೈಸೂರು ನಗರದಲ್ಲಿ ಮುನಿಸಿಪಲ್ ಪ್ರೆಸಿಡೆಂಟ್ ಆಗಿದ್ದರು,

ಅಂತಹ ಘನ ಸಂಸ್ಥೆ ಇರತಕ್ಕದ್ದರಲ್ಲಿ ಇಂತಹ ಬಿಲ್ಲು ತಂದರೆ ನಾನಾದರೂ ಈ ಸಂಸ್ಥೆಯಲ್ಲಿ ಇರುತ್ತಾ ಇರಲಿಲ್ಲ ಎಂದು ಹೇಳತಕ್ಕದ್ದು, ಮಾನ್ಯ ಪುಟ್ಟಸ್ವಾಮಿಯವರು ಇದಿದ್ದರೆ ಚೆನ್ನಾಗಿ ಇರುತ್ತಿತ್ತು. ಅವರು ಈ ಸಮಸ್ಯೆಗಳನ್ನು ಹೇಗೆ ಬಗೆಹರಿಸುತ್ತಿದ್ದರು ವಿವರ ಪಡೆಯಬಹುದಿತ್ತು. ಮಾನ್ಯ ಪುಟ್ಟಣ್ಣಶೆಟ್ಟರು, ಬಿ. ಕೆ ಗರುಡಾಚರ್, ಹನುಮಂತಯ್ಯನವರು, ಕೆ. ಟಿ. ಬಾಷ್ಯಂ. ಸುಬ್ಬರಾಮಶೆಟ್ಟರು, ನಾಗಣ್ಣನವರು ಮೊದಲಾದವರು ಗಣ್ಯ ವ್ಯಕ್ತಿಗಳು ಇದ್ದರು ಆದರೆ ಈ ಸಮಸ್ಯೆಗಳನ್ನು ಬಗೆಹರಿಸಬೇಕು ಎಂದರೆ ಏನು ಮಾಡಬೇಕು, ಸ್ಟ್ಯಾಂಡಿಂಗ್ ಕಮಿಟಿಯವರು, ಫುಟ್‌ಪಾತ್ ಮೇಲೆ ಅಂಗಡಿ ಕಟ್ಟುವುದಕ್ಕೆ ಡಿಸೈಡ್ ಮಾಡಿ ಅಂಗಡಿಗಳನ್ನು ಕಟ್ಟಿ ಬಾಡಿಗೆಗೆ ಕೊಟ್ಟರೆ ಏನು ಮಾಡಬೇಕು ? ಇನ್ನು ಸಹ ೯ರವ ಡಿವಿಜನಲ್ ಆಫೀಸರ್ ಗೋಸ್ಕರ ಕಮ್ಯುನಿಟಿ ಹಾಲ್ ಕಟ್ಟಿದ್ದು, ಕೌನ್ಸಿಲರ್ ಆಕ್ಯುಪೈ ಮಾಡಿಕೊಂಡು ವಾಸ ಮಾಡುವುದಕ್ಕೆ ಪ್ರಾರಂಭ ಮಾಡಿದರೆ ಏನು ಮಾಡಬೇಕು ? ಇವನ್ನೆಲ್ಲಾ ಮಂತ್ರಿಗಳಿಗೆ ಬರೆದುಕೊಟ್ಟಿದ್ದೇನೆ. ಮತ್ತೆ ಕಾರ್ಪೊರೇಷನ್ ರೆಸಲ್ಯೂಷನ್ ಮೇಯರ್ ರೂಮಿನಲ್ಲಿ ಪ್ರೊಸೀಡಿಂಗ್ಸ್ ಪುಸ್ತಕದಲ್ಲಿ ಬರೆದು ಆಯಿತು ಎಂದು ಹೇಳಿ ಆ್ಯಕ್ಷನ್ ತೆಗೆದುಕೊಂಡರೆ ಏನು ಮಾಡಬೇಕು ಸಬ್ಜೆಕ್ಟ್ ಟು ಒನ್ ಟು ಹಂಡ್ರೆಡ್ ಪಾಸ್ಟ್ ಎಂದು ಮಾಡಿದರು, ಹೈಕೋರ್ಟಿಗೆ ಹೋಗಿ ಸ್ಟೇ ತಂದೆವು, ಮಂತ್ರಿಗಳಿಗೆ ಅರ್ಜಿ ಕೊಟ್ಟೆವು, ಆಗ ಸ್ಟೇ ಕೊಟ್ಟರು ಆ ಸಂದರ್ಭದಲ್ಲಿ ಏನು ಮಾಡಬೇಕು ? ಮೇಯರ್ ಆದವರಿಗೆ ಅಧಿಕಾರ ಬೇಕು ಎನ್ನುವ ಬಗ್ಗೆ ಒಪ್ಪಿಕೊಳ್ಳುತ್ತೇನೆ. ಮೇಯರ್‌ಗೆ ಅಧಿಕಾರ ಇಲ್ಲದೇ ಆಗಸ್ಟ್ ೧೫ ಎಂದು ಹೇಳಿ ಅಥವಾ ಕಾರ್ಪೊರೇಷನ್ ಡೇ ಎಂದು ಹೇಳಿ ೪೫ ಸಾವಿರ ಚಿಲ್ಲರೆ ರೂಪಾಯಿ ಚಿಲ್ಲರೆ ಪೇಪರ್ ಅಡ್ವರ್‌ಟೈಸ್‌ಮೆಂಟ್‌ಗೆ ಕೊಟ್ಟರೆ ಏನು ಮಾಡಬೇಕು. ಮೇಯರ್ ಸಂಪ್ಚುಯರಿ ಅಲೋಯನ್ಸ್ ೫ ಸಾವಿರ ರೂಪಾಯಿ ಇದ್ದು, ೬೦ ಸಾವಿರ ರೂಪಾಯಿ ಖರ್ಚು ಮಾಡಿದರೆ ಏನು ಮಾಡಬೇಕು ? ಆಗ ಸರ್ಕಾರ ಸುಮ್ಮನೆ ಇರುವುದಕ್ಕೆ ಆಗುತ್ತದೆ ಏನು ? ಮತ್ತೆ ಅನ್ ಆಥರೈಸ್ ಕಂಸ್ಟ್ರಕ್ಷನ್ ಡಿಸ್‌ಮ್ಯಾಂಟಲ್ ಮಾಡ ಮಾಡಬೇಕು ಎನ್ನುವ ಪರಿಸ್ಥಿತಿ ಬಂದಾಗ, ಮೇಯರ್ ಅವರು ಕಷ್ಟವಾದಂತ ಆ ಫೈಲನ್ನು ಅವರು ಚುನಾವಣೆ ಯಾದಾಗ ತೆಗೆದುಕೊಂಡು ಹೋಗಿ ಅವರ ಅವಧಿ ಮುಗಿಯುವವರೆಗೆ ಇಟ್ಟುಕೊಂಡು ಆ ಫೈಲ್ ಇಲ್ಲದಂತೆ ಮಾಡಿದರೆ ಏನು ಮಾಡಬೇಕು ? ಆ ಮೇಲೆ ಕೌನ್ಸಿಲರ್ ಟೇಬಲ್‌ನಿಂದ ಟೇಬಲ್‌ಗೆ ಎಸ್ಟಿಮೇಟ್ ತೆಗೆದುಕೊಂಡು ಹೋಗಿ ಸ್ಯಾಂಕ್ಷನ್ ಮಾಡಿಸಿ, ಒಂದೊಂದು ಎಸ್ಟಿಮೇಟ್‌ಗೆ ಇಷ್ಟು ಬರಬೇಕು ಎಂದು ಹೇಳಿದರೆ ಏನು ಮಾಡಬೇಕು ? ಒಬ್ಬ ಇಂಜಿನಿಯರ್ ಸಸ್ಪೆಂಡ್‌ನಲ್ಲಿ ಇಟ್ಟರು, ಟ್ರಾನ್ಸ್‌ಫರ್ ಆದ ೮ ದಿವಸದ ಮೇಲೆ ಫೈಲ್ ಮನೆಗೆ ತೆಗೆದುಕೊಂಡು ಹೋಗಿ ೬೦೦ ಎಸ್ಟಿಮೇಟ್ ಸ್ಯಾಂಕ್ಷನ್ ಮಾಡಲಿಲ್ಲವೇ ಅಂತಹ ಸಂದರ್ಭದಲ್ಲಿ ಏನು ಮಾಡಬೇಕು ಎಂದು ಕೇಳುತ್ತೇನೆ.

ಆ ಮೇಲೆ ಕಾರ್ಪೊರೇಷನ್ನಿನ ಮೀಟಿಂಗ್‌ನಲ್ಲಿ ನಾನು ಮೊದಲೇ ಹೇಳಿದ ಹಾಗೆ ಗುಂಡಾಟಗಳು ನಡೆದು ಒಬ್ಬ ಕಮೀಷನರನ್ನು ಹೊಡೆಯುವುದಕ್ಕೆ ಹೋಗಿದ್ದರು. ಆ ಸಂದರ್ಭದಲ್ಲಿ ಅಂತಹ ಕಾರ್ಪೊರೇಟರ್ಸ್‌ನ್ನು ಏನು ಮಾಡಬೇಕು ?

ಇನ್ನು ಆಕ್ಟ್ರಾಯಿಗೆ ಸಂಬಂಧ ಪಟ್ಟಂತೆ ಹೇಳುವುದಾದರೆ ಸುಮಾರು ೪೫೦ ಆರ್ಟಿಕಲ್ಸ್‌ಗೆ ಆಕ್ಟ್ರಾಯಿ ಹಾಕುವಾಗ ಏನೂ ಚರ್ಚೆ ಇಲ್ಲದೆ ಆಯಿತು ಎಂದು ಬರೆದುಕೊಂಡು ಬಿಟ್ಟಿದ್ದರು. ಆಗತಿರುಗಿ ನಾವು ಹೈಕೋರ್ಟಿಗೆ ಹೋಗಿ ಸ್ಟೇ ಆರ್ಡರ್ ತರಬೇಕಾಯಿತು. ತಿರುಗಿ ಅದಕ್ಕೆ ನೋಟಿಫೈ ಮಾಡಿಸಬೇಕಾಯಿತು. ಪ್ರಜಾಪ್ರಭುತ್ವದಲ್ಲಿ ಮೆಜಾರಿಟಿ ಇದೆ ಎಂದು ಈ ರೀತಿ ನಡೆದರೆ ಏನು ಮಾಡಬೇಕು ? ಮಾನ್ಯ ಪುಟ್ಟಸ್ವಾಮಿಯವರು ಇದ್ದ ಕಾಲದಲ್ಲಿ ಈ ರೀತಿ ನಡೆಯುತ್ತಿರಲಿಲ್ಲ. ಇಂಥಾ ಸಂದರ್ಭ ಬಂದಾಗ ಏನು ಮಾಡಬೇಕು ಎನ್ನುವುದನ್ನು ಆಲೋಚನೆ ಮಾಡಿ. ಕಮೀಷನರಿಂದ ಒಂದು ರಿಪೋರ್ಟ್, ಕೌನ್ಸಿಲರ್ ಕಡೆಯಿಂದ ಒಂದು ರಿಪೋರ್ಟ್, ಅವರ ಪಾರ್ಟಿಕಡೆಯಿಂದ ಒಂದು ರಿಪೋರ್ಟ್ ಬಂದರೆ ಏನು ಮಾಡಬೇಕು ? ಯೋಚನೆ ಮಾಡಿ. ನಾನು ಈಗ ಏನು ಹೇಳುತ್ತಿದ್ದೇನೋ ಅದರಲ್ಲಿ ಒಂದು ಲೇಸಾಂಶವೂ ಉಪ್ಪೇಕ್ಷೆ ಮಾತಲ್ಲ ಎಂದು ಹೇಳಬಲ್ಲೆ. ಇಷ್ಟೇ ಅಲ್ಲದೆ ಇನ್ನೊಂದು ವಿಚಾರ ಏನು ಎಂದರೆ ಈ ಮೇಯರ್ ಕಾರ್ ಏನಾದರೂ ಬೌಂಡರಿ ಆಚೆಗೆ ತೆಗೆದುಕೊಂಡು ಹೋಗ ಬೇಕಾಗಿದ್ದರೆ ಅದಕ್ಕೆ ಸರ್ಕಾರೀ ಆಜ್ಞೆ ಕಾಯ ಬೇಕಾಗಿತ್ತು. ಈಗ ಮೇಯರ್ ಕಾರ್ ಹುಬ್ಬಳ್ಳಿ, ಮೈಸೂರು ಈ ಕಡೆ ಯಲ್ಲಾ ತೆಗೆದುಕೊಂಡು ಹೋಗಿ ಮೇಯರ್ ಕಾರ್ ಮೇಯರೋ ಕಾರ್ ಆಗಿಬಿಟ್ಟಿದೆ. ಹೀಗಿರುವಾಗ ಏನು ಮಾಡಬೇಕು ಯೋಚನೆ ಮಾಡಿ, ನಾನು ಒಬ್ಬ ಕಾರ್ಪೊರೇಷನ್ನಿನ ಕೌನ್ಸಿಲರ್. ಆಗಿರುವುದರಿಂದ ಅಲ್ಲಿ ಈ ರೀತಿ ನಡೆದರೆ ಏನು ಮಾಡಬೇಕು ಎಂದು ಈ ಪ್ರಶ್ನೆ ಕೇಳಿದರೆ ಇದು ಅರಣ್ಯರೋದನವಾಗಬಹುದು.

ಇದಕ್ಕೆ ಏನಾದರೂ ಅರ್ಜಿ ಬರೆದರೆ ಅಲ್ಲೇ ಕೂತುಕೊಂಡು ಏನಾದರೂ ಉತ್ತರ ಬರೆಯುವುದಾದರೆ ಏನು ಪ್ರಯೋಜನ ? ಆದುದರಿಂದ ನಾನು ಸರ್ಕಾರವನ್ನು ಅಷ್ಟು ಸುಲಭವಾಗಿ ಬಿಡುಗಡೆ ಮಾಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಮಣ್ಣನವರು ಹೇಳುವುದನ್ನು ನೋಡಿದರೆ, ಇಷ್ಟೊಂದು ಅವ್ಯವಹಾರ ಅಲ್ಲಿ ನಡೆದಿರಬೇಕಾದರೆ ಈ ಪ್ರಜಾಪ್ರಭುತ್ವದಲ್ಲಿ ಈಗ ಏನು ಒಂದು ಬಿಲ್ ತಂದಿದ್ದಾರೋ ಇದು ಪ್ರಯೋಜನ ಇಲ್ಲ ಎನ್ನುವ ಅಭಿಪ್ರಾಯಕ್ಕೆ ಬರಬೇಕಾಗುತ್ತದೆ ಮತ್ತು ಈ ಕಾರ್ಪೊರೇಷನ್ ಏತಕ್ಕೆ ಬೇಕು ಅನ್ನುವ ಪ್ರಶ್ನೆಯೂ ಕೂಡ ಬರುತ್ತದೆ.

ಶ್ರೀ ಟಿ. ಆರ್. ಶಾಮಣ್ಣ.—ಮೊದಲು ಕಾರ್ಪೊರೇಷನ್‌ನಲ್ಲಿ ೩೬ ಜನ ಅಪೋಸಿಷನ್‌ನಲ್ಲಿ ಚುನಾಯಿತರಾಗಿದ್ದರು, ಕಾಂಗ್ರೆಸ್ ಪಾರ್ಟಿಯಿಂದ ೨೪ ಜನ ಚುನಾಯಿತರಾಗಿದ್ದರು. ಆಮೇಲೆ ಬರಬರುತ್ತಾ ಅವರ ಪಾರ್ಟಿ ಕಡೆ ಬಲ ಮಾಡಿಕೊಂಡು ಅಧಿಕಾರ ತೆಗೆದುಕೊಳ್ಳುವ ಪ್ರಶ್ನೆ ಬಂತು. ಹೀಗಾದರೆ ಏನು ಪ್ರಯೋಜನ ? ಅವರಿಗೆ ಕಾಫಿ ಕುಡಿಯುವುದಕ್ಕೂ ಕೂಡ ಯಾರಾದರೂ ೪ ಆಣೆ ಕೊಟ್ಟರೆ ಉಂಟು ಇಲ್ಲದಿದ್ದರೆ, ಈ ರೀತಿಯಾಗಿ ಅವರಿಗೆ ೪ ಆಣೆ ಕೊಡುವುದಕ್ಕೂ ಯೋಗ್ಯತೆ ಇಲ್ಲದೇ ಇದ್ದವರು ಬ್ರಿಗೇಡ್ ರೋಡಿಗೆ ಹೋಗಿ ೨೦ ರೂಪಾಯಿ ಕೊಟ್ಟು ಹೇರ್ ಡ್ರೆಸ್ಸಿಂಗ್ ಸೆಲೂನ್‌ಗೆ ಹೇರ್ ಕಟಿಂಗ್ ಮಾಡಿಸಿಕೊಳ್ಳುತ್ತಾರಂತೆ ನಾನು ಇದರ ಬಗ್ಗೆ ಒಂದು ಸಣ್ಣ ಉದಾಹರಣೆ ಹೇಳಿದೆ ಇದರ ಬಗ್ಗೆ ಹೇಳುತ್ತಾ ಹೋದರೆ ಒಂದು ದೊಡ್ಡ ಚರಿತ್ರೆಯನ್ನೇ ಬರೆಯಬಹುದು. ಆದುದರಿಂದ ನಾನು ಹೇಳುವುದು ಮಾನ್ಯ ಕೆ. ಪುಟ್ಟಸ್ವಾಮಿಯವರು ಇದರ ಬಗ್ಗೆ ಅನೇಕ ಸೆಕ್ಷನ್‌ಗಳನ್ನು ಏನು ಎತ್ತಿ ತೋರಿಸಿದ್ದಾರೆ ಅದರಲ್ಲಿ ಕೆಲವು ಮಾತ್ರ ಜಾಯಿಂಟ್ ಸೆಲೆಕ್ಟ್ ಕಮಿಟಿಯವರು ಮಾಡಿದ್ದಾರೆ ಮಿಕ್ಕ ಸೆಕ್ಷನ್‌ಗಳು ಹಿಂದೆ ಇದ್ದುದೇ. ಇದರಲ್ಲಿ ಅಷ್ಟೇನೂ ಬದಲಾವಣೆಯಾಗಿಲ್ಲ.

ಶ್ರೀ ಎಂ. ಬಿ. ರಾಮಸ್ವಾಮಿ.—ಮಾನ್ಯ ಶಾಮಣ್ಣನವರು ಈ ಸೆಕ್ಷನ್ ಎಲ್ಲಾ ಹಿಂದೆ ಇದ್ದುದ್ದೇ, ಏನೂ ಬದಲಾವಣೆಯಾಗಿಲ್ಲ ಎಂದು ಹೇಳಿದರು. ಈಗ ಇರತಕ್ಕಂಥಾ ಮಂತ್ರಿಗಳು ಸಮಾಜವಾದಕ್ಕನುಗುಣವಾಗಿ ಏನೇನು ಮಾಡಬೇಕು ಎನ್ನುವುದನ್ನು ಗುರಿ ಇಟ್ಟುಕೊಂಡು ಗುರುತರವಾಗಿ ಈ ಕೆಲಸ ಮಾಡಿದ್ದಾರೆ ಎಂದು ನನ್ನ ಸ್ಪಷ್ಟ ಅಭಿಪ್ರಾಯ. ಅದಕ್ಕೆ ತಾವು ಏನು ಹೇಳುತ್ತೀರಿ ?

ಶ್ರೀ ಬಿ. ಚಿಕ್ಕಲಾಯ.—ತಾವು ಸರ್ಕಾರಕ್ಕೆ ಹೆಚ್ಚು ಅಧಿಕಾರ ಕೊಡಬೇಕು ಎಂದು ಹೇಳುತ್ತೀರಾ ? ಅಥವಾ ಈ ಅವ್ಯವಹಾರವನ್ನು ತಡೆಗಟ್ಟುವುದಕ್ಕೆ ಕಾರ್ಪೊರೇಷನ್ ಅಧಿಕಾರವನ್ನು ಮೊಟಕು ಮಾಡಿ ಸರ್ಕಾರಕ್ಕೇ ಕೊಡಬೇಕು ಎಂದು ಹೇಳುತ್ತೀರಾ ? ಅಥವಾ ಎಲೆಕ್ಟೆಡ್ ಬಾಡೀಸ್‌ಗೇನೇ ಜಾಸ್ತಿ ಅಧಿಕಾರ ಕೊಡಬೇಕು ಎಂದು ಹೇಳುತ್ತೀರಾ ?

ಶ್ರೀ ಟಿ. ಆರ್. ಶಾಮಣ್ಣ.—ಎಲೆಕ್ಟೆಡ್ ಬಾಡೀಸ್‌ಗೇನೇ ಪೂರ್ಣ ಅಧಿಕಾರ ಕೊಡಬೇಕು ಎಂದು ಹೇಳುತ್ತೇನೆ. ಅದನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಆದರೆ ಎಲ್ಲಿ ಅವ್ಯವಹಾರ ನಡೆಯುತ್ತದೋ ಅಂಥಾ ಕಡೆ ಅದನ್ನು ತಡೆಗಟ್ಟುವುದಕ್ಕೆ ಪ್ರಯತ್ನ ಮಾಡಬೇಕು. ಅಂಥಾವಕ್ಕೆ ಉತ್ತೇಜನ ಕೊಡಕೂಡದು ಈ ರಿಪೋರ್ಟನ್ನು ಬರೆಯುವಾಗ ಮಾನ್ಯ ಮಂತ್ರಿಗಳನ್ನು ಹೊಗಳಬೇಕಾದ್ದೇನೂ ಇಲ್ಲ. ಆದರೆ ಇದ್ದುದ್ದನ್ನು ಇದ್ದ ಹಾಗೆ ಹೇಳಬೇಕು ಎನ್ನತಕ್ಕಂಥಾದನ್ನು ನಾನು. ಮಾನ್ಯ ಮಂತ್ರಿಗಳು ಈ ರಿಪೋರ್ಟಿನಲ್ಲಿ ಏನೇನು ಅಳವಡಿಸಿದ್ದಾರೋ ಆ ಬಗ್ಗೆ ಹೇಳಬೇಕಾದರೆ ಎಲ್ಲಾ ಕಡೆಯೂ ರೆಪ್ರೆಸೆಂಟೇಷನ್ ಕರೆದು, ಎಲ್ಲಾ ಮೆಂಬರ್ಸ್‌ಗೂ ಸಾಕಷ್ಟು ಅವಕಾಶ ಮಾಡಿಕೊಟ್ಟು ಆ ಬಗ್ಗೆ ಒಂದು ತೀರ್ಮಾನಕ್ಕೆ ಬರುವಂತೆ ಮಾಡಿ ಈ ರಿಪೋರ್ಟನ್ನು ಸಮರ್ಪಕವಾದ ರೀತಿಯಲ್ಲಿ ಮಾಡಿದ್ದಾರೆ. ಇದರಲ್ಲಿ ಒಂದೆರಡಕ್ಕೆ ಅಮೆಂಡ್‌ಮೆಂಟ್ ತಂದಿದ್ದೇನೆ. ಇದರಲ್ಲಿ ಟ್ಯಾಕ್ಸ್ ಹಾಕುವುದು ಒಂದು ಬಿಟ್ಟುಬಿಟ್ಟರೆ ಮಿಕ್ಕ ವಿಚಾರದಲ್ಲಿ ಸಾಮಾನ್ಯವಾಗಿ ಬೊಂಬಾಯಿಗೇ ಹೋಗಲಿ, ಮದ್ರಾಸ್‌ಗೇ ಹೋಗಲಿ ಮೆಂಬರ್ಸ್‌ಗಳಿಗೆ ಸಾಕಷ್ಟು ಅವಕಾಶ ಕೊಟ್ಟು ಅಲ್ಲಿ ಕಮೀಷನರ್‌ಗಳನ್ನು ಮಾಜಿ ಕೌನ್ಸಿಲರ್‌ಗಳನ್ನು, ಮತ್ತು ಈಗ ಹಾಲಿ ಇರತಕ್ಕಂಥಾ ಕೌನ್ಸಿಲರ್‌ಗಳನ್ನೂ, ಮತ್ತು ಪಬ್ಲಿಕ್ ರೆಪ್ರೆಸೆಂಟೇಷನ್ಸ್ ಮತ್ತು ಮೇಯರ್ಸ್‌ಗಳನ್ನು ಭೇಟಿ ಮಾಡಿ ಅವರೊಂದಿಗೆ ಚರ್ಚೆ ಮಾಡಿ ಒಂದೊಂದು ವಿಚಾರವನ್ನೂ ಕೇಳಿ ತಿಳಿದುಕೊಂಡು, ಸಾಕಷ್ಟು ವಿಷಯಗಳನ್ನು ಸಂಗ್ರಹ ಮಾಡಿ ಈ ರಿಪೋರ್ಟ್‌ನ್ನು ತಯಾರು ಮಾಡುವುದಕ್ಕೆ ಮಾನ್ಯ ಮಂತ್ರಿಗಳು ಸಾಕಷ್ಟು ತಮ್ಮ ಶಕ್ತಿಯನ್ನು ಉಪಯೋಗಿಸಿದ್ದಾರೆ ಮೆಂಬರ್ಸ್‌ಗಳೂ ಕೂಡ ಒಂದೆರಡು ವಿಚಾರಗಳು ಬಿಟ್ಟರೆ ಮಿಕ್ಕ ವಿಚಾರದಲ್ಲಿ ಬೇರೆ ಯಾವ ಪ್ರಭಾವವನ್ನು ಬೀರಿ ಈ ರಿಪೋರ್ಟನ್ನು ತಯಾರು ಮಾಡಿಲ್ಲ. ಇದ್ದ ವಿಚಾರವನ್ನು

ಇದ್ದ ಹಾಗೆ ನಾನು ಹೇಳದೇ ಹೋದರೆ ಈ ಸಂದರ್ಭದಲ್ಲಿ ತಪ್ಪಾಗುತ್ತದೆ. ನನಗೆ ಇರತಕ್ಕಂಥಾ ಒಂದು ತೊಂದರೆ ಏನು ಎಂದರೆ ಕಡೆ ಕಾರ್ಪೋರೇಷನ್‌ನಲ್ಲಿ ತನ್ನ ಪಾರ್ಟಿಯೇ ಅಧಿಕಾರ ನಡೆಸಿಕೊಂಡು ಬರಬೇಕು ಎಂದರೆ ಹೇಗೆ ? ೭೩ ಜನರಲ್ಲಿ ೬೪ ಜನರು ಈ ಪಾರ್ಟಿಯವರೇ ಇದ್ದು ಅಧಿಕಾರ ನಡೆಸಿದರೆ ಹೇಗೆ ? ಎಲ್ಲ ಅಧಿಕಾರವನ್ನು ಇವರೇ ಮಾಡಿಕೊಂಡು ಬರುತ್ತಿದ್ದಾರೆ. ನಿಮಗೆ ಒಂದು ಸಣ್ಣ ಉದಾಹರಣೆ ಹೇಳುತ್ತೇನೆ. ಒಬ್ಬ ಕಾರ್ಪೋರೇಟರ್ ಸ್ಲಮ್ ಒಳಗಡೆ ಇರುವ ತನ್ನ ಮನೆಯ ತನಕ ಕಾರ್ಪೋರೇಷನ್ನಿನ ಖರ್ಚಿನಲ್ಲಿ ಕಾಂಕ್ರೀಟ್ ಮಾಡಿಸಿಕೊಂಡು ಕೊನೆಗೆ ಆ ಜಾಗ ನನ್ನದು ಕಾಂಪೆನ್ಸೇಷನ್ನಿಗೆ ಬದಲಾಗಿ ಸಿಟಿ ಮಾರ್ಕೆಟ್ ಹತ್ತಿರ ಜಾಗ ಕೊಡಿ ಎಂದು ಕೇಳಿದ. ಬೇಕಾದರೆ ೪ ವರ್ಷದ ಈ ಕಾರ್ಪೋರೇಷನ್ನಿನ ಆಡಳಿತದ ಬಗ್ಗೆ ಹೇಳುತ್ತೇನೆ. ಪರೀಕ್ಷೆ ಮಾಡಲಿ. ನಾನು ಹೇಳಿದ್ದರಲ್ಲಿ ಸ್ವಲ್ಪವಾದರೂ ಉತ್ಪ್ರೇಕ್ಷೆ ಇದ್ದರೆ ಅದರ ಬಗ್ಗೆ ಯಾವ ಶಿಕ್ಷೆಯನ್ನಾದರೂ ಮಾಡಿಸಿಕೊಳ್ಳುತ್ತೇನೆ. ಇನ್ನು ಈ ಬಿಲ್‌ನಲ್ಲಿ ಹೇಳಿರುವ ಪ್ರಕಾರ ಇನ್ನು ಮುಂದೆ ಎಂ. ಎಲ್. ಎ. ಆದವರು ಕಾರ್ಪೊರೇಟರ್ ಆಗಿ ಸಹ ಕೆಲಸ ಮಾಡುವುದಕ್ಕೆ ಸಾಧ್ಯವಿರುವುದಿಲ್ಲ. ನಾನು ಈ ಮೊದಲೇ ಆ ಸ್ಥಾನದಲ್ಲಿರಬಾರದೆಂದು ತೀರ್ಮಾನ ಮಾಡಿದ್ದೆ. ಅದರಂತೆ ಈಗ ಮಸೂದೆಯಿಂದ ಆ ಸ್ಥಾನವನ್ನು ಬಿಟ್ಟು ಕೊಡುವುದಕ್ಕೆ ಒಂದು ಒಳ್ಳೆಯ ಅವಕಾಶ ಸಿಕ್ಕಿರುವುದಕ್ಕೆ ನನಗೆ ಸಂತೋಷವಾಗಿದೆ. ನಾನು ಏತಕ್ಕೆ ಆ ಜಾಗದಲ್ಲಿರಬಾರದೆಂದು ತೀರ್ಮಾನ ಮಾಡಿದ್ದೇನೆಂದರೆ ಸಾಧಾರಣವಾಗಿ ಒಂದು ಗುಣಮಟ್ಟ ಇದ್ದವರು ಕಾರ್ಪೊರೇಟರ್ ಆಗಿ ಆರಿಸಿ ಬಂದರೆ ಅಂತಹವರ ಜೊತೆಯಲ್ಲಿ ಇದ್ದುಕೊಂಡು ಏನಾದರೂ ವ್ಯವಹಾರ ಮಾಡಬಹುದು ಮತ್ತು ಅವರಿಗೆ ಏನಾದರೂ ಹೇಳಿದರೆ ಕೇಳುತ್ತಾರೆ. ಆದರೆ ಅಂತಹವರು ಆರಿಸಿ ಬರದೆ ಬೇರೆಯವರು ಆರಿಸಿ ಬಂದರೆ, ಒಳ್ಳೆಯ ಕಾಲವನ್ನು ನೋಡಿದ ನನ್ನಂತಹವರಿಗೆ, ಅವರ ಜೊತೆಯಲ್ಲಿ ವ್ಯವಹಾರ ಮಾಡುವುದಕ್ಕೆ ಬಹಳ ಬೇಜಾರಾಗುತ್ತದೆ. ಯಾವುದಕ್ಕೂ ಒಂದು ರೀತಿನೀತಿ ಇರುತ್ತದೆ. ಅದೇನಾದರೂ ಬದಲಾವಣೆಯಾದರೆ ನಮಗೂ ಸಹ ಬಹಳ ಬೇಜಾರಾಗುತ್ತದೆ.

4-30 P.M.

SRI M. S. KRISHNAN — We are not making an Act only with a view to see what is happening in Bangalore Corporation. This is an enactment for all Corportion.

SRI T. R. SHAMANNA — The policy enunciated there was that one man should have one post and he should not have more posts than necessary. Being a Corporator he should not become a M.L.A. To enable him to express the grievances of his constituency, he will be allowed to be a member and if necessary arrangements will be made to provide some funds according to the requirements. When that assurance was given, I felt that it was reasonable. Let one Choose either this or that.

SRI B. V. KAKKILAYA —The choice is left ultimately to the people. Why Should you be barred from contesting ?

SRI T. R. SHAMANNA.— It is not a bar for contesting. But if you are elected for both, you must choose one.

SRI B. B. SAVANAK. — Does the Hon. member know that the present Mayor of Bombay is a Member of the Legislative Assembly ?

SRI T. R. SHAMANNA.— It cannot be applicable to all places.

ಇನ್ನು ಕಾರ್ಪೊರೇಟರ್ ಆಗಿ ಆರಿಸಿಬಂದವರು ಅಧಿಕಾರ ಸ್ವೀಕಾರ ಮಾಡಿದ ಮೇಲೆ ತಮ್ಮ ಆಸ್ತಿ ಪಾಸ್ತಿಗಳ ವಿವರಗಳನ್ನು ಕೊಡಬೇಕೆಂಬ ವಿಚಾರದಲ್ಲಿ ಈಗಾಗಲೇ ಸಾಕಷ್ಟು ಚರ್ಚೆಯಾಗಿದೆ. ಮಾನ್ಯ ಕೃಷ್ಣನ್ ಅವರು ಹೇಳಿದಂತೆ ಏನೂ ಇಲ್ಲದವರು, ಕಾರ್ಪೊರೇಟರ್ ಆದ ಮೇಲೆ ಲಕ್ಷಾಧಿಪತಿಗಳಾದವರೂ

ಇದ್ದಾರೆ. ಇದರ ಬಗ್ಗೆ ಏನಾದರೂ ಒಂದು ತೀರ್ಮಾನ ಕೈಕೊಳ್ಳಬೇಕೆಂದು ಅವರೇ ಅನೇಕ ಕಡೆಗಳಲ್ಲಿ ಹೇಳಿದ್ದಾರೆ. ಈ ಆಸ್ತಿ ವಿವರ ಕೊಡುವ ಬಗ್ಗೆ ಲೀಗಲ್ ಬೈಂಡಿಂಗ್ ಇರದಿದ್ದರೂ ಸಹ ಮಾರಲ್ ಬೈಂಡಿಂಗ್ ಇರುತ್ತದೆ. ಮೊದಲು ಕಡಿಮೆ ಆಸ್ತಿ ಇದ್ದು ನಂತರ ಅದು ಜಾಸ್ತಿಯಾದರೆ, ಯಾವ ರೀತಿ ಜಾಸ್ತಿಯಾಯಿತೆಂದು ಕೇಳುವುದಕ್ಕೆ ಒಂದು ಅವಕಾಶವಿರಲಿ ಎಂಬ ಉದ್ದೇಶದಿಂದ ಈ ಅಂಶವನ್ನು ಇದರಲ್ಲಿ ಸೇರಿಸಲಾಗಿದೆ. It is only a moral aspect that is taken in to account more than the legal aspect. ಈಗ ನನ್ನ ಆಸ್ತಿಯೂ ಸಹ ಹೆಚ್ಚಾಗಿದೆ. ಆದರೆ ಅದು ಯಾವ ರೀತಿ ಬಂತು ಎಂಬ ಬಗ್ಗೆ ಲೆಕ್ಕ ಕೊಟ್ಟಿದ್ದೇನೆ. ಮತ್ತು ಈಗ ನಾನು ಇನ್‌ಕಮ್ ಟ್ಯಾಕ್ಸ್ ಏನು ಕೊಡುತ್ತಿದ್ದೇನೆ, ಅದಕ್ಕಿಂತ ಹೆಚ್ಚು ಆಸ್ತಿಯಿದ್ದರೆ, ಅದನ್ನು ತೆಗೆದುಕೊಳ್ಳಲಿ ಎಂದು ನಾನು ಅನೇಕ ಸಲ ಹೇಳಿದ್ದೇನೆ. ಅದರಂತೆ ಇಲ್ಲಿಯೂ ಸಹ ಆಸ್ತಿ ಮಾಡುವುದಕ್ಕೆ ಒಂದು ತಡೆಯಿರಲಿ ಎಂಬ ಸದುದ್ದೇಶದಿಂದ ಮಾಡಲಾಗಿದೆಯೇ ಹೊರತು ಬೇರೆ ಉದ್ದೇಶದಿಂದ ಅಲ್ಲ. ಇದು ಎಷ್ಟರ ಮಟ್ಟಿಗೆ ಎಫೆಕ್ಟೀವ್ ಆಗಿರುತ್ತದೆ ಎಂಬುದನ್ನು ಪ್ರಯೋಗ ಮಾಡಿ ನೋಡುವುದು ಒಳ್ಳೆಯದು. ಈಗ ಎಂ.ಎಲ್.ಎ., ಎಂ.ಎಲ್.ಸಿ. ಮತ್ತು ಮಂತ್ರಿಗಳ ಆಸ್ತಿಪಾಸ್ತಿಯ ವಿವರಗಳನ್ನು ಅವರ ಪಕ್ಷದ ಅಧ್ಯಕ್ಷರು ಕೇಳಿದ್ದಾರೆ. ಅದರಂತೆ ಕೆಲವರು ಕೊಟ್ಟಿದ್ದಾರೆ, ಮತ್ತೆ ಕೆಲವರು ಕೊಡಲಿಲ್ಲವೆಂದು ಹೇಳುತ್ತಿದ್ದಾರೆ. ಆದರೆ ಇಲ್ಲಿ ಮಾತ್ರ ಎಲ್ಲರೂ ಕೊಡಬೇಕಾಗುತ್ತದೆ.

ಇನ್ನು ಕೊನೆಯದಾಗಿ ಈ ಬಿಲ್‌ನಲ್ಲಿ ಸಣ್ಣಪುಟ್ಟ ಕೆಲವು ಲೋಪಗಳಿದ್ದರೂ ಕೂಡ ಒಟ್ಟಿನಲ್ಲಿ ಹೆಚ್ಚು ಬಾಧಕವಾಗುವಂತಹ ಕಲಂಗಳೇನೂ ಇಲ್ಲ. ಈಗಿನ ಒಂದು ಪರಿಸ್ಥಿತಿಗೆ ಅನುಗುಣವಾಗಿ ಕೆಲವೊಂದು ಬದಲಾವಣೆಗಳನ್ನು ಮಾಡಲಾಗಿದೆ. ಮಾನ್ಯ ಪುಟ್ಟಸ್ವಾಮಿಯವರು ಮಾತನಾಡುವಾಗ ಒಂದು ಅಂಶವನ್ನು ಒತ್ತಿ ಹೇಳಿದರು. ಏನೆಂದರೆ, ಮುಂಬೈ ಆಕ್ಟ್ ಇದೆ, ಅದನ್ನೇ ಇಲ್ಲಿಯೂ ಅನುಸರಿಸಿದ್ದರೆ ಚೆನ್ನಾಗಿರುತ್ತಿತ್ತು, ಏಕೆಂದರೆ ಅದರಲ್ಲಿ ಹೆಚ್ಚಿನ ಪವರ್ಸ್ ಇದೆ ಎಂಬುದಾಗಿ ಅವರು ಹೇಳಿದರು. ಆದರೆ ಈಗ ಅಲ್ಲಿ ಮುಂಬೈ ಸಿಟಿಗೆ ಸಂಬಂಧಪಟ್ಟಂತೆ ಒಂದು ಆಕ್ಟ್ ಇದೆ ಮತ್ತು ಮುಂಬೈ ಪ್ರೊವಿನ್ಸಿಯಲ್ ಆಕ್ಟ್ ಎಂಬುದಾಗಿ ಬೇರೆ ಇನ್ನೊಂದು ಇದೆ. ಈಗ ನಮ್ಮಲ್ಲಿ ಈ ಬಿಲ್‌ನ್ನು ಈಗಿನ ಒಂದು ಪರಿಸ್ಥಿತಿಗೆ ಅನುಗುಣವಾಗಿ ತಯಾರಿಸಲಾಗಿದೆ. ಮುಂದೆ ಇದರಲ್ಲಿ ಏನಾದರು ಬದಲಾವಣೆ ಮಾಡಬೇಕೆಂದು ಕಂಡು ಬಂದರೆ ಅದಕ್ಕೆ ಸೂಕ್ತವಾದಂಥ ತಿದ್ದುಪಡಿಗಳನ್ನು ತರುವುದಕ್ಕೆ ಸಹ ಅವಕಾಶವಿದೆ. ಈಗಿನ ಬಿಲ್ ಪ್ರಕಾರ ಕಾರ್ಪೊರೇಟರ್‌ಗಳು ಚೆನ್ನಾಗಿ ಕೆಲಸ ಮಾಡಿದರೆ ಆಡಳಿತ ಚೆನ್ನಾಗಿ ನಡೆಯುತ್ತದೆ. ಮತ್ತು ನ್ಯಾಯವಾದಂಥ ಸರ್ಕಾರವಿದ್ದರೆ ಕಾರ್ಪೊರೇಷನ್‌ಗಳ ಆಡಳಿತದಲ್ಲಿ ಹೆಚ್ಚಿನ ಕೈವಾಡ ಮಾಡುವುದಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ನಾನು ಕೆಲವೊಂದು ತಿದ್ದುಪಡಿಗಳನ್ನು ಇದರ ಬಗ್ಗೆ ಕೊಟ್ಟಿದ್ದೇನೆ, ಅದು ಬಿಟ್ಟು ಮಿಕ್ಕಂತೆ ಯಾವ ಕಲಂಗಳನ್ನು ನಾನು ವಿರೋಧ ಮಾಡುವುದಿಲ್ಲ. ಈ ವರದಿಯನ್ನು ತಯಾರು ಮಾಡಲು ಸಾಕಷ್ಟು ಶ್ರಮ ವಹಿಸಲಾಗಿದೆ ಮತ್ತು ನಾನು ಸಹ ಮೊದಲಿನಿಂದ ಕೊನೆಯವರೆಗೂ ಅದರಲ್ಲಿ ಭಾಗಿಯಾಗಿರುವುದರಿಂದ ಇದರ ಬಗ್ಗೆ ಇನ್ನು ಹೆಚ್ಚು ಮಾತನಾಡುವುದಕ್ಕೆ ಇಷ್ಟಪಡದೆ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್ (ಹೊಸನಗರ) — ಸನ್ಮಾನ್ಯ ಸಭಾಧ್ಯಕ್ಷರೇ, ಈ ಜಾಯಿಂಟ್ ಸೆಲೆಕ್ಟ್ ಕಮಿಟಿಯವರು ಎಲ್ಲ ಸಮಸ್ಯೆಗಳನ್ನು ಸಮಗ್ರವಾಗಿ ಅಧ್ಯಯನ ಮಾಡಿ ಒಂದು ವರದಿಯನ್ನು ಕಷ್ಟಪಟ್ಟು ತಯಾರು ಮಾಡಿ ಈ ಸದನದ ಮುಂದೆ ಇಟ್ಟಿದ್ದಾರೆ. ಈಗಿನ ಒಂದು ಸಮಸ್ಯೆಗಳಿಗೆ ಈ ವರದಿ ಒಂದು ಅಂತಿಮ ತೀರ್ಮಾನದಂತೆ ಇಲ್ಲದಿರಬಹುದು. ಆದರೆ ಯಾವುದೇ ಒಂದು ಶಾಸನವಾದರೂ ಸಹ ಅದು ಯಾವ ಕಾಲಕ್ಕೂ ಖಾಯಂ ಆಗಿರಬೇಕೆಂದು ಹೇಳತಕ್ಕಂಥದ್ದು ಸಾಧ್ಯವಿಲ್ಲದ ಮಾತು. ಏಕೆಂದರೆ ಆಯಾ ಸಂದರ್ಭಕ್ಕನುಗುಣವಾಗಿ ಹೊಂದಿಕೊಂಡು ಆಯಾ ಕಾಲಕ್ಕೆ ಅನುಗುಣವಾಗಿ ಬದಲಾವಣೆಗಳನ್ನು ಮಾಡಬೇಕಾಗಿ ಬರುತ್ತದೆ. ಆದಕಾರಣ ಯಾವ ಒಂದು ಕಾನೂನೇ ಆಗಲೀ, ಅದು ಖಾಯಂ ಆಗಿರಬೇಕು. ಅತ್ಯಂತ ಅನುಜ್ಞಾನವಾಗಿರಬೇಕೆಂದು ಹೇಳತಕ್ಕಂಥ ವಾದ ಏನಿದೆ ಅದು ಬುದ್ಧಿವಂತರು ಮಾಡತಕ್ಕಂಥ ವಾದವಲ್ಲ. ಆದಕಾರಣ ಈಗಿನ ಒಂದು ಸಮಯಕ್ಕೆ ಹೊಂದಿಕೊಳ್ಳತಕ್ಕಂಥ ಶಾಸನವನ್ನು ತಯಾರು ಮಾಡಿ ಇಲ್ಲಿ ಇಡಲಾಗಿದೆ. ಇವೊತ್ತಿಗೆ ಸರಿ ಎಂದು ಹೇಳತಕ್ಕಂಥ ಒಂದು ಶಾಸನ ಮುಂದೆ ಸರಿಯಾಗಿ ಕಾಣದಿರಬಹುದು ; ಆದಕಾರಣ ಯಾವುದೇ ಶಾಸನವಾದರೂ ಕಾಲಕ್ಕೆ ತಕ್ಕಂತೆ ಹೊಂದಿಕೊಳ್ಳುವಂತಹ ಶಾಸನವಾಗಿರಬೇಕು. ಒಂದು ಸಲ ಮಾಡಿದ ಶಾಸನ ಯಾವ ಕಾಲಕ್ಕೂ ಯಾವ ರೀತಿಯಿಂದಲೂ ಬದಲಾವಣೆ ಯಾಗಬಾರದೆಂದು ಹೇಳತಕ್ಕಂಥ ಒಂದು ನಿಲುವು ಏನಿದೆ, ಅದು ಪ್ರಜಾಪ್ರಭುತ್ವ

ಪದ್ಧತಿಗೆ ಹೊಂದಿಕೊಳ್ಳುವುದಿಲ್ಲವೆಂದು ನಾವುಗಳು ಸ್ಪಷ್ಟವಾಗಿ ಒಪ್ಪಿಕೊಳ್ಳಬೇಕಾಗುತ್ತದೆ. ಈ ಬಿಲ್ ಬಗ್ಗೆ ಹಿರಿಯರೂ ಹಾಗೂ ಅನುಭವಶಾಲಿಗಳೂ ಆದಂಥ ಮಾನ್ಯ ಪುಟ್ಟಸ್ವಾಮಿಯವರು ಮಾತನಾಡಿದನ್ನು ನಾನು ಕೇಳಿದ್ದೇನೆ. ಅವರು ಇದರಲ್ಲಿರುವ ಕೆಲವು ಕಲಂಗಳ ಬಗ್ಗೆ ಅಷ್ಟೊಂದು ದೀರ್ಘವಾಗಿ ಏತಕ್ಕೆ ವ್ಯಾಖ್ಯಾನ ಮಾಡಿದರೆಂಬುದು ನನಗೆ ಅರ್ಥವಾಗುವುದಿಲ್ಲ. ಏಕೆಂದರೆ, ಕಾರ್ಪೊರೇಷನ್‌ಗಳಲ್ಲಿ ಯಾವ ರೀತಿ ಕೆಲಸ ಕಾರ್ಯಂಗಳನ್ನು ಮಾಡಿದರೂ ಸಹ ಅದನ್ನು ಸರ್ಕಾರ ಪ್ರಶ್ನೆ ಮಾಡಬಾರದು, ಕಾರ್ಪೊರೇಷನ್‌ಗಳಿಗೆ ನಿರಂಕುಶ ಪ್ರಭುತ್ವವನ್ನು ಕೊಡಬೇಕು ಎಂದು ಅವರು ಹೇಳತಕ್ಕಂಥ ವಾದ ಏನಿದೆ ಅದು ಸರಿಯಾದಂಥ ವಾದವಲ್ಲ. ಮಾನ್ಯ ಪುಟ್ಟಸ್ವಾಮಿಯವರು ಈ ಬಗ್ಗೆ ಮಾತನಾಡುವಾಗ ಒಳ್ಳೆಒಳ್ಳೆಯ ಹೆಸರುಗಳನ್ನು ಉದಹರಿಸಿದರು. ಈ ಹಿಂದೆ ಮೈಸೂರು ನಗರಸಭೆಯ ಅಧ್ಯಕ್ಷರಾಗಿ ಅಂತಹವರಿದ್ದರು, ಇಂತಹವರಿದ್ದರು ಎಂದು ಹೇಳಿದರು. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಮೈಸೂರು ನಗರಸಭೆಯ ಅಧ್ಯಕ್ಷರಾಗಿ ಒಳ್ಳೆ ಒಳ್ಳೆಯ ಗಣ್ಯ ವ್ಯಕ್ತಿಗಳು ಕೆಲಸ ಮಾಡಿರಬಹುದು, ಅಂದಾಕ್ಷಣ ಎಲ್ಲರೂ ಸಂಪನ್ನರಾಗಿರುತ್ತಾರೆ ಸಾರ್ವಜನಿಕ ಕ್ಷೇತ್ರದಲ್ಲಿ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆಂದು ಹೇಳುವುದೇ ಆಗಲೀ ಮತ್ತು ಆ ಬಗ್ಗೆ ಪ್ರಶ್ನೆ ಮಾಡಲು ಸರ್ಕಾರಕ್ಕೆ ಯಾವ ಅಧಿಕಾರವೂ ಇರಬಾರದೆಂದು ಹೇಳತಕ್ಕಂಥ ವಾದ ಏನಿದೆ, ಅದು ಬುದ್ಧಿವಂತರು ಹೇಳತಕ್ಕಂಥ ವಾದವಲ್ಲ.

ಹಾಗಾದರೆ ಕಾರ್ಪೊರೇಷನ್ ಸದಸ್ಯರಾದ ಕೂಡಲೇ ಅವರೇನೋ ಆಕಾಶದಿಂದ ಭೂಮಿಗೆ ಇಳಿದಂತೆ ಟ್ರೀಟ್ ಮಾಡಿದರೆ ಹೇಗೆ? ಅವರು ಏನು ಬೇಕಾದರೂ ತಪ್ಪು ಮಾಡಬಹುದೆಂದರೆ ಹೇಗೆ. ಅವರು ತಪ್ಪು ಮಾಡಿದ್ದನ್ನು ಪ್ರಶ್ನೆ ಮಾಡುವ ಅಧಿಕಾರ ಯಾರಿಗೂ ಬೇಡವೇ? ಹಾಗಿದ್ದರೆ ಗ್ರೀಕ್ ದೇಶದಲ್ಲಿದ್ದ ಹಾಗೆ ಕಾರ್ಪೊರೇಷನ್ನಿಗೆ ಸ್ವತಂತ್ರ ಸರ್ಕಾರ ಎಂಬುದಾಗಿ ಡಿಕ್ಲೇರ್ ಮಾಡುವ ಪರಿಸ್ಥಿತಿ ಬರಬಹುದು. ಆದರೆ ಇಲ್ಲಿ ಹಾಗೆ ಮಾಡುವುದಕ್ಕೆ ಬರುವುದಿಲ್ಲ. ಯಾವ ರಾಜ್ಯ ಪ್ರಜಾಪ್ರಭುತ್ವ ಆಡಳಿತದಲ್ಲಿರುತ್ತದೋ ಅಂತಹ ರಾಜ್ಯದಲ್ಲಿ ಸರ್ಕಾರ ಇಂತಹ ವಿಚಾರಗಳನ್ನು ಹೆಚ್ಚಾಗಿ ಗಮನಿಸಬೇಕಾಗುತ್ತದೆ. ಅಂತಹ ಕಡೆಗಳಲ್ಲಿಯೂ ಸರ್ಕಾರದ ಕೆಲವು ತತ್ವಗಳಿಗೆ ಪ್ರತಿಬಂಧಕ ವಿರುತ್ತದೆ. ಅಂತಹ ತತ್ವಗಳಿಗೆ ಯಾರಾದರೂ ಕೊಡಲಿ ಪೆಟ್ಟು ಹಾಕುವಾಗ ಅಂತಹವರ ಬಗ್ಗೆ ಸರಿಯಾದ ಅಂಕುಶ ಸರ್ಕಾರಕ್ಕೆ ಇರಲೇಬೇಕಾಗುತ್ತದೆ ಉದಾಹರಣೆಗೆ ಹೇಳುವುದಾದರೆ, ಸಾಮಾನ್ಯವಾಗಿ ಕಾರ್ಪೊರೇಷನ್ನಿನ ಸದಸ್ಯರಾಗಿರುವವರು ಆರಿಸಿಬರುವುದು ಕೇವಲ 8-10 ಸಾವಿರ ಮತದಾರರು ಇರತಕ್ಕ ಒಂದು ಸಣ್ಣ ಕ್ಷೇತ್ರದಿಂದ ಮೊದಲೇ ಒಂದೆರಡು ಸಾವಿರ ಓಟುಗಳನ್ನು ಗಟ್ಟಿಮಾಡಿಕೊಂಡರೆ ಎಲೆಕ್ಷನ್ನಿನಲ್ಲಿ ಗೆದ್ದುಬರುವುದು ಏನೂ ಕಷ್ಟವಾಗುವುದಿಲ್ಲ. ಈ ರೀತಿಯಾಗಿ ಪ್ರತಿಯೊಂದು ಚುನಾವಣೆಯಲ್ಲಿಯೂ ಕೂಡ ಕೇವಲ ಕೆಲವೇ ವರ್ಗದ ಜನರು ಅಂತಹ ಜನರಿಂದಲೇ ಆರಿಸಿ ಬರುತ್ತಾ ಇರುತ್ತಾರೆ. ಅಂತಹವರು ಅಲ್ಲಿ ತಮ್ಮ ಅಧಿಕಾರ ನಡೆಯುತ್ತದೆಂದು ಅಂತಹ ಕೆಲವೇ ಜನರ ಬಗ್ಗೆ ಹಿತಚಿಂತನೆ ನೋಡಿದರೆ ಹೇಗೆ? ಅವರನ್ನು ಚುನಾಯಿಸಿರುವ ಕ್ಷೇತ್ರದ ಜನರೆಲ್ಲರ ಬಗ್ಗೆ ಹಿತಚಿಂತನೆಮಾಡಿ ಅಲ್ಲಿನ ಜನರಿಗೆ ಬೇಕಾದ ಎಲ್ಲಾ ಸವಲತ್ತುಗಳನ್ನು ಒದಗಿಸಿಕೊಡಲು ಪ್ರಯತ್ನಪಡಬೇಕು. ನನಗೆ ತಿಳಿದಿರುವ ಹಾಗೆ ಅನೇಕ ಬಡಬಗ್ಗರಿಗೆ ಸರಿಯಾದ ನೀರಿನ ಸೌಕರ್ಯವಿಲ್ಲ, ಸ್ಯಾನಿಟರಿ ಫೆಸಿಲಿಟೀಸ್ ಸಹ ಇಲ್ಲ. ಅವರ ಗೋಳನ್ನು ಕೇಳುವುದಕ್ಕಾಗುವುದಿಲ್ಲ. ಅಂತಹವರ ಗೋಳನ್ನು ಕೇಳದೆಯೇ ಸರ್ಕಾರ ಇನ್ನೆಂತಹ ಕಾನೂನನ್ನು ಮಾಡಿಕೊಂಡರೂ ಅದು ಅಲ್ಲಿನ ಜನರ ಹಿತಚಿಂತನೆ ಮಾಡಿದಂತಾಗುವುದಿಲ್ಲ. ಹಾಗೂ ಅಲ್ಲಿನ ಜನರ ಹಿತಸಾಧನೆಯನ್ನೂ ಸಹ ಮಾಡುವುದಕ್ಕಾಗುವುದಿಲ್ಲ. ಪ್ರಜಾಪ್ರಭುತ್ವ ರೀತಿಯಲ್ಲಿ ರಚಿತವಾಗಿರುವ ಸರ್ಕಾರಕ್ಕೆ ಹೆಚ್ಚಿನ ಒಂದು ಜವಾಬ್ದಾರಿ ಇರುತ್ತದೆ ಯಾರು ಬಹಳವಾಗಿ ನೊಂದಿರುತ್ತಾರೆ, ಯಾರ್ಯಾರು ವೀಕರ್ ಸೆಕ್ಷನ್‌ಗಳಾಗಿ ಇರುತ್ತಾರೆ, ಯಾರು ದುರ್ಬಲ ವರ್ಗದವರೆಂದೆನಿಸಿಕೊಂಡಿರುತ್ತಾರೆ ಅಥವಾ ಇನ್ನು ಯಾವುದಾದರೂ ಅಂತಹ ವರ್ಗಕ್ಕೆ ಏನೇ ಹೆಸರಿಡಿ ಅಂತಹ ಜನರ ಹಿತಚಿಂತನೆಯ ಬಗ್ಗೆ ಕಾರ್ಪೊರೇಷನ್ನಿನವರು ಹೆಚ್ಚಿನ ಗಮನ ಕೊಡದೇ ಇದ್ದರೆ ಆಗ ಸರ್ಕಾರ ಏನು ಮಾಡಬೇಕೆಂಬುದನ್ನು ಯೋಚನೆ ಮಾಡಲೇ ಬೇಕಾಗುತ್ತದೆ. ಎಂತಹ ಸರ್ಕಾರವಿರಲಿ, ಕಾರ್ಪೊರೇಷನ್ನಿನಲ್ಲಿ ಯಾವ ಮೇಯರ್ ಇದ್ದರೂ ವ್ಯಕ್ತಿಗತವಾಗಿ ದ್ವೇಷಾಸೂಯೆ ಮಾಡುವುದಕ್ಕೆ ಅವಕಾಶ ಕೊಡಬಾರದು ಕೆಲವರಿಗೆ ನ್ಯಾಯವಾಗಿ ಕೊಡತಕ್ಕ ಲೈಸೆನ್ಸ್‌ಗಳನ್ನು ಕೊಡದೇ ಹಾಗೆಯೇ ಅನೇಕ ಅಧಿಕಾರಿಗಳು ತಮ್ಮಲ್ಲಿಯೇ ಇಟ್ಟುಕೊಂಡು ಕೂತಿರುತ್ತಾರೆ. ಆದರೆ ಯಾವ ಕಾರ್ಪೊರೇಷನ್ ಆಗಲೀ ಅಥವಾ ಯಾವ ಸಿಟಿ ಮುನಿಸಿಪಾಲಿಟಿಯಾಗಲೀ ಈಗಿನ ಒಂದು ಸನ್ನಿವೇಶದಲ್ಲಿ ನಿರಂಕುಶ ಪ್ರಭುತ್ವವನ್ನು ರಚಿಸಿಕೊಂಡು ಬರುವುದಕ್ಕೆ ಯಾವ ಒಂದು ಪ್ರಜಾಪ್ರಭುತ್ವ

ಸರ್ಕಾರಕ್ಕೆ ಸಾಧ್ಯವಾಗುವುದಿಲ್ಲ. ಕೇವಲ ಕ್ಷುಲ್ಲಕ ಕಾರಣಗಳಿಗಾಗಿ ಕೆಲವು ವ್ಯಕ್ತಿಗಳನ್ನು ಇಲ್ಲದ ಸಲ್ಲದ ಆರೋಪಣೆಗಳಿಗೆ ಗುರಿಪಡಿಸುವುದು, ಲೈಸೆನ್ಸ್‌ಗಳನ್ನು ಅಲ್ಲಗೆಳೆಯುವುದು ಸರಿಯಲ್ಲ. ಇಂತಹ ಸಂದರ್ಭಗಳಲ್ಲಿ ಸರ್ಕಾರದ ಹತೋಟಿ ಇಲ್ಲವೇ ಇದ್ದಾಗ ಕಾರ್ಪೊರೇಷನ್ನಿನಲ್ಲಿದ್ದು ಕೆಲಸ ಮಾಡುವವರು ಬಹಳ ಅಸಮಾಧಾನ ಪಡುತ್ತಾರೆ. ಈ ಒಂದು ದೃಷ್ಟಿಯಿಂದ ಸರ್ಕಾರದ ಅಂಕುಶ ಇರಲೇ ಬೇಕಾಗುತ್ತದೆ ಸರ್ಕಾರವನ್ನು ಬಿಟ್ಟು ಹಾಗೆಯೇ ಕಾರ್ಪೊರೇಷನ್ ಸ್ವತಂತ್ರವಾಗಿ ತನ್ನ ಕೆಲಸಕಾರ್ಯಗಳನ್ನು ನಡೆಸಿಕೊಂಡು ಬರುವುದಕ್ಕೆ ಸಾಧ್ಯವಾಗುವುದಿಲ್ಲ. ಕಾರ್ಪೊರೇಷನ್ ಯಾವಾಗಲೂ ತನಗೆ ಸಂಪೂರ್ಣ ಸ್ವಾತಂತ್ರ್ಯ ಬೇಕೆಂದರೆ, ಅದು ಸಾಧ್ಯವಾಗುವುದಿಲ್ಲ. ಅಂತಹ ವಾದವನ್ನು ಯಾರೂ ಒಪ್ಪುವುದಿಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ನನಗೆ ಒಂದು ಪ್ರಶ್ನೆ ಅರ್ಥವಾಗಲಿಲ್ಲ. ಹಿರಿಯ ಶ್ರೀ ಪುಟ್ಟಸ್ವಾಮಿಯವರು ಬಹಳ ಕಾಲ ಮಂತ್ರಿಯಾಗಿದ್ದರು. ಅವರೂ ಸಹ ಅನೇಕ ಕಾನೂನುಗಳ ತಿದ್ದುಪಡಿಗಳ ಬಗ್ಗೆ ಮಾತನಾಡಿ ಕೆಲವಾರು ಸೂಚನೆಗಳನ್ನು ಕೊಟ್ಟರು. ಆದರೆ ಇಂತಹ ತಿದ್ದುಪಡಿಗಳನ್ನು ಮತ್ತು ಅವರ ಕೆಲವಾರು ಸೂಚನೆಗಳನ್ನು ಅವರ ಕಾಲದಲ್ಲಿಯೇ ಅವರೇ ಮಾಡಬಹುದಾಗಿತ್ತು. ಆಗ ಅವರಿಗೇನೂ ಕಷ್ಟವಾಗುತ್ತಾ ಇರಲಿಲ್ಲ. ಇವರ ಒಂದು ಕಳಕಳಿ ನನಗೆ ಅರ್ಥವಾಗಲಿಲ್ಲ. ಈ ವಿಚಾರದಲ್ಲಿ ನಾನು ಹೆಚ್ಚು ಹೇಳುವುದಿಲ್ಲ. ಇವತ್ತು ಇಂತಹ ಸಮಗ್ರವಾದ ಬಿಲ್ ಬರಬೇಕಾದರೆ ಕಾರಣವಿದೆ ಅನೇಕ ಕಾರ್ಪೊರೇಷನ್‌ಗಳಲ್ಲಿ ಅದರಲ್ಲಿಯೂ ಹುಬ್ಬಳ್ಳಿ ಕಾರ್ಪೊರೇಷನ್ನಿನಲ್ಲಿ ನಡೆದಂಥ ದುರಂತವನ್ನು ಹಿನ್ನೆಲೆಯಾಗಿ ಇಟ್ಟುಕೊಂಡು ಇಂತಹ ಒಂದು ಸಮಗ್ರವಾದಂಥ ಬಿಲ್ಲನ್ನು ಮಾಡುವ ಸಂದರ್ಭ ಸರ್ಕಾರಕ್ಕೆ ಬಂದುದರಿಂದ ಈಗ ಅದನ್ನು ಮಾಡಿದ್ದೂ ಆಯಿತು. 1965ರಲ್ಲಿ ನಾನು ನ್ಯೂಯಾರ್ಕ್‌ಗೆ ಹೋಗಿದ್ದೆ. ಅಲ್ಲಿ ಒಬ್ಬ ಕಾರ್ಪೊರೇಷನ್ ಇಂಜಿನಿಯರ್ ಅವರ ಬಗ್ಗೆ.................

ಶ್ರೀ ಕೋಣಂದೂರು ಲಿಂಗಪ್ಪ.—ಯಾಕೆ ಹೋಗಿದ್ದಿರಿ?

ಶ್ರೀ ಎಸ್.ಎಂ. ಶೀರ್ನಾಳಿ ಚಂದ್ರಶೇಖರ್.—ಒಂದೇ ಒಂದು ಸಣ್ಣ ತಪ್ಪು ಆಗಿದ್ದಕ್ಕೆ ಅಲ್ಲಿ ದೊಡ್ಡ ಶಿಕ್ಷೆಮಾಡಿದ್ದಾರೆ. ವಾಟರ್‌ಗೇಟ'ನಲ್ಲಿ ಒಂದು ಬಿರುಕು ಇತ್ತು ಅದನ್ನು ಸರಿಯಾಗಿ ರಿಪೇರಿ ಮಾಡದೇ ಇದ್ದುದರಿಂದ ಅವರನ್ನು ವಜಾ ಮಾಡಿದರು. ಕ್ರಿಮಿನಲ್ ಪ್ರೊಸೀಜರ್ ಕೋಡ್ ಪ್ರಕಾರ ಆತನಿಗೆ ಶಿಕ್ಷೆ ಕೊಟ್ಟಿದ್ದಾರೆ. ಅಂದಮೇಲೆ ಇವತ್ತು ಕಾರ್ಪೊರೇಷನ್ನಿನಲ್ಲಿ ನಡೆಯುವಂಥ ಯಾವ ಒಂದು ಅನ್ಯಾಯಕ್ಕೂ ಹಾಗೂ ಅನಾಚಾರಕ್ಕೂ ಸರ್ಕಾರ ಕೈಹಾಕುವುದಕ್ಕಾಗುವುದಿಲ್ಲವೆಂದು ಹೇಳುವ ವಾದ ಏನಿದೆಯೋ ಅದು ನಿಜವಾಗಿಯೂ ಸರಿಯಾದುದಲ್ಲವೆಂದು ಹೇಳದೆ ಗತ್ಯಂತರವಿಲ್ಲ. ಈಗ ಸರ್ಕಾರ ಸಮಗ್ರ ಪ್ರಜೆಗಳ ಹಿತವನ್ನು ರಕ್ಷಣೆ ಮಾಡತಕ್ಕ ಹಾಗೂ ಅವರೆಲ್ಲರ ಬಗ್ಗೆ ಹಿತ ಚಿಂತನೆಯನ್ನು ಸದಾ ಕಾಲದಲ್ಲಿಯೂ ಯೋಚನೆ ಮಾಡುತ್ತಿರುವಾಗ ಸರ್ಕಾರಕ್ಕೆ ಅವರ ಜವಾಬ್ದಾರಿ ಇರಲೇ ಬೇಕಾಗುತ್ತದೆ. ಇವತ್ತು ಯಾವುದಾದರೂ ಒಂದು ಕಾರ್ಪೊರೇಷನ್ ತಪ್ಪಿ ನಡೆಯುವ ಸಂದರ್ಭ ಬಂದಾಗ್ಗೆ ಅದಕ್ಕೆ ಅಂಕುಶ ಹಾಕತಕ್ಕ ಸಂಪೂರ್ಣ ಅಧಿಕಾರ ಸರ್ಕಾರಕ್ಕೆ ಇರಲೇಬೇಕಾಗುತ್ತದೆ. ಸರ್ಕಾರಕ್ಕೆ ಅದರ ಬಗ್ಗೆ ಒಂದು ಪ್ರೆಸ್ಟೀಜ್, ಅಧಿಕಾರ ಇರಲೇ ಬೇಕಾಗುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ.—ಅದು ಪಾಯಿಂಟ್.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಸೂಪರ್‌ಸೀಡ್ ಮಾಡತಕ್ಕಂಥ ಅಧಿಕಾರ ಸರ್ಕಾರಕ್ಕೆ ಇಲ್ಲದೆಹೋದರೆ ಯಾವ ಬುದ್ಧಿವಂತರು ಸರ್ಕಾರವನ್ನು ನಡೆಸುತ್ತಾರೋ ಅವರು ಕಾರ್ಪೊರೇಷನ್‌ನಲ್ಲಿ ಏನು ಅನ್ಯಾಯಗಳು ಮತ್ತು ಅಕ್ರಮಗಳು ನಡೆಯುತ್ತಿದ್ದರೂ ಕಣ್ಣು ಮುಚ್ಚಿಕೊಂಡು ಕೊಡುವುದಕ್ಕೆ ಸಾಧ್ಯವೆಂದು ಹೇಳಿದರು ನಮ್ಮ ಮಾನ್ಯ ಶಿವಣ್ಣನವರು ಮೇಯರ್‌ಗಳ ಮನೆಯಲ್ಲಿ ಕೇವಲ ಕೆಲವೇ ಜನರು ಕೂತುಕೊಂಡು ರೆಸಲ್ಯೂಷನ್ ಬರೆಯುತ್ತಾರೆಂದು ಹೇಳಿದರು ಅದನ್ನು ಇಡೀ ಕಾರ್ಪೊರೇಷನ್ ಅಥವಾ ಮುನಿಸಿಪಾಲಟಿ ತೀರ್ಮಾನವೆಂದು ಹೇಳುವುದಾದರೆ ಅಲ್ಲಿಗೆ ಸರ್ಕಾರ ನೇಮಕ ಮಾಡಿದಂತಹ ಅಧಿಕಾರಿ ಇದನ್ನೆಲ್ಲಾ ನೋಡಿಕೊಂಡು ಕಣ್ಣು ಮುಚ್ಚಿಕೊಂಡು ಕೂತುಕೊಳ್ಳುವುದಕ್ಕೆ ಸಾಧ್ಯವೇ? ಇದಕ್ಕೋಸ್ಕರವಾಗಿಯೇ ಸರ್ಕಾರಕ್ಕೆ ಅಧಿಕಾರ ಇಲ್ಲದೆ ಹೋದರೆ ಜನರ ಹಿತರಕ್ಷಣೆಯ ಹೊಣೆಯನ್ನು ಹೊತ್ತ ಸರ್ಕಾರ ಕಣ್ಣು ಮುಚ್ಚಿಕೊಂಡು ಕೂತರೆ ಇವರನ್ನು ರಕ್ಷಣೆ ಮಾಡುವವರಾದರೂ ಯಾರೂ ಎಂದು ಕೇಳಬೇಕಾಗುತ್ತದೆ. ಅಂತಹ ಅನ್ಯಾಯಗಳು ನಡೆಯುವಾಗ ಜನರಿಗೆ ಚುನಾವಣೆ ಸಮಯದಲ್ಲಿ ಅವರಿಗೆ ಭರವಸೆ

ಕೊಟ್ಟು ಬಂದಂತಹ ಸರ್ಕಾರ ಸುಮ್ಮನೆ ಕೂತುಕೊಳ್ಳುವುದಕ್ಕೆ ಸಾಧ್ಯವೇ? ಅದರಿಂದ ಸರ್ಕಾರದ ಹತೋಟಿ ಇದ್ದೇ ಇರಬೇಕಾಗುತ್ತದೆ. ಅದರಿಂದ ಸಾಮಾನ್ಯ ಜನರು ಉಳಿಯಲಿಕ್ಕೆ ಸಾಧ್ಯ. ಅನೇಕ ಮುನಿಸಿಪಾಲಿಟಿಗಳಲ್ಲಿ ಅನೇಕ ಪಟ್ಟಭದ್ರಹಿತಗಳು ಸೇರಿಕೊಂಡು ನಿರಂಕುಶ ಪ್ರಭುತ್ವದಲ್ಲಿ ಆಡಳಿತವನ್ನು ನಡೆಸುತ್ತಿವೆ. ಅಂತಹ ಒಂದು ಸಂದರ್ಭದಲ್ಲಿ ಸಾಮಾನ್ಯ ಜನರ ಗೋಳು ಕೇಳಲಿಕ್ಕೆ ಹೋಗುವುದು ಬೇಡಿ ಎಂದು ಹೇಳಿದರೆ ಹೇಗೆ? ಜನತೆಗೆ ಕೊಟ್ಟ ಆಶೋತ್ತರಗಳನ್ನು ಪೂರೈಸುವುದಕ್ಕೋಸ್ಕರವೇ ರಚಿತವಾಗಿರುವ ಸರ್ಕಾರ ಕಣ್ಣು ಮುಚ್ಚಿಕೊಂಡು ಕೂಡುವುದಕ್ಕೆ ಸಾಧ್ಯವೇ? ನಮ್ಮ ಮಹಾ ಪ್ರಧಾನಿಯವರು ಏನು 20 ಅಂಶಗಳ ಕಾರ್ಯಕ್ರಮವನ್ನು ಹಾಕಿಕೊಟ್ಟಿದ್ದಾರೆ ಅದು ಕಾರ್ಯಗತವಾಗಬೇಕಾದರೆ ಸರ್ಕಾರದ ಹೊಣೆ ಬಹಳವಾಗಿರುತ್ತದೆ. ಉದಾಹರಣೆಗೆ ಇವತ್ತು ಸೈಟ್ ಹಂಚಿಕೆಯಲ್ಲಿ ಎಷ್ಟು ಮುನಿಸಿಪಾಲಿಟಿಯವರು ಅಥವಾ ಕಾರ್ಪೊರೇಷನ್‌ನವರು ಎಷ್ಟು ಸೈಟುಗಳನ್ನು ಜನರಿಗೆ ಹಂಚಿದ್ದಾರೆ ತೋರಿಸಿ? ಉದಾಹರಣೆಗೆ ಹೇಳಬೇಕೆಂದರೆ ನಮ್ಮ ಶಿವಮೊಗ್ಗ ಮುನಿಸಿಪಾಲಿಟಿಯಲ್ಲಿ ಒಬ್ಬರು ಮ. ತಪತಿ ಎನ್ನುವ ಅಧಿಕಾರಿಗಳಿದ್ದರು ಅವರನ್ನು ಮಾನ್ಯ ಮಂತ್ರಿಗಳು ಸಸ್‌ಪೆನ್ಷನ್‌ನಲ್ಲಿಟ್ಟರು. ಅವರು ಅಸಾಧ್ಯವಾದ ಕಾರ್ಯವನ್ನು ಮುನಿಸಿಪಾಲಿಟಿಯಲ್ಲಿ ಮಾಡಿದ್ದಾರೆ. ಆ ಮಹಾ ಪುರುಷರು ಸೈಟುಗಳನ್ನು ವಿತರಣೆ ಮಾಡುವಾಗ 5-10 ಸಾವಿರ ರೂಪಾಯಿಗಳನ್ನು ತೆಗೆದುಕೊಂಡು ಬಹಳಷ್ಟು ಅನುಕೂಲವಾಗಿರುವವರಿಗೆ ಸೈಟುಗಳನ್ನು ಕೊಟ್ಟಿದ್ದಾರೆ. ಈ ರೀತಿ ಅಧಿಕಾರಿಗಳು ಅಥವಾ ಕಾರ್ಪೊರೇಟರ್ಸ್ ಅನ್ಯಾಯ ಮಾಡುವಾಗ ಅವರ ಸರ್ಕಾರ ಯಾವ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಅಧಿಕಾರ ಇಟ್ಟುಕೊಳ್ಳದೆ ಹೋದರೆ ಸರ್ಕಾರ ಏತಕ್ಕೆ ಇರುವುದು ಹೇಳಿ? ಅದ್ದರಿಂದ ಈ ರೀತಿ ಸಂದರ್ಭಗಳಲ್ಲಿ ಅವರ ಮೇಲೆ ಹತೋಟಿ ಇಟ್ಟುಕೊಂಡು ಅಂಕುಶ ಹಾಕದೆ ಹೋದರೆ ಹೇಗೆ? ಇನ್ನು ಹುಬ್ಬಳ್ಳಿ ಕಾರ್ಪೊರೇಷನ್‌ನಲ್ಲಿ ಒಬ್ಬ ಅಧಿಕಾರಿ ಬಗ್ಗೆ ಒಂದು ವರದಿ ಬಂದಿದೆ. ಅವರು ಸಾಕಷ್ಟು ಬಂಗಲೆಗಳನ್ನು ಕಟ್ಟಿದ್ದಾರೆಂದು. ಸರ್ಕಾರ ಯಾರ ಹಿತಕ್ಕೋಸ್ಕರವಾಗಿ ಹಣ ಖರ್ಚು ಮಾಡುತ್ತಾ ಇದೆ ಅದು ಅವರಿಗೆ ಹೋಗದೆ ಕೇವಲ ಕೆಲವರ ಬೊಕ್ಕಸಕ್ಕೆ ಹೋಗುವುದಾದರೆ ಏತಕ್ಕೆ ಸರ್ಕಾರ ಇರುವುದು ಎಂದು ನಾನು ಕೇಳುತ್ತೇನೆ. ಆದ್ದರಿಂದಲೇ ಸರ್ಕಾರಕ್ಕೆ ಇವೆಲ್ಲದರ ಮೇಲೆ ಹತೋಟಿ ಇಟ್ಟುಕೊಂಡು ಸಮಯ ಬಂದಾಗ ಅದಕ್ಕೆ ಅಂಕುಶವಾಗುವುದಕ್ಕೆ ಈ ಸೂಪರ್‌ಸೀಡ್ ಮಾಡುವ ಕ್ಲಾಸ್ ಇರಬೇಕೆಂದು ತಂದಿರುವುದು. ಅದರ ಅಧಿಕಾರ ಸರ್ಕಾರಕ್ಕೆ ಇರಬೇಕೆಂದು ತೆಗೆದುಕೊಂಡಿದೆ. ಅಧ್ಯಕ್ಷರೇ ಇನ್ನು ಆಸ್ತಿ ವಿವರಣೆಯನ್ನು ಕೊಡುವುದರ ಬಗ್ಗೆ ಮಾನ್ಯ ಪುಟ್ಟಸ್ವಾಮಿಯವರು ಹೇಳುವಾಗ ಬಹಳ ನೊಂದ ಮನಸ್ಸಿನಿಂದ ಹೇಳಿದರು. ಆದರೆ ಅವರು ಕೂಡ ಹಿಂದೆ ಸರ್ಕಾರದಲ್ಲಿ ಮಂತ್ರಿಗಳಾಗಿದ್ದವರು ಅವರು ಮಾತನಾಡುವಾಗ ಈ ರೀತಿ ಹೇಳಿದರು "Any worst Municipal Council or Corporation is better than this Government." ಎಂದು ನನಗಂತೂ ಅದನ್ನು ಕೇಳಲಿಕ್ಕೂ ಸಾಧ್ಯವಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಮಾನ್ಯ ಪುಟ್ಟಸ್ವಾಮಿಯವರು ತಾವು ಹೇಳುವ ರೀತಿಯಲ್ಲಿ ಅವರು ಹೇಳಲಿಲ್ಲ. He said "Any worst Council is better than Administrator" ತಾವು ಈ ರೀತಿ ಮಿಸ್ ಇಂಟರ್‌ಪ್ರಿಟ್ ಮಾಡುವುದರಲ್ಲಿ ಬಹಳ ಚತುರರು.

ಶ್ರೀ ಎಸ್. ಎಂ. ಶಿರನಾಳಿ ಚಂದ್ರಶೇಖರ್.—ಯಾವ ಕಾರ್ಪೊರೇಷನ್ ಅಥವಾ ಮುನಿಸಿಪಾಲಿಟಿಯಲ್ಲಿರುವ ಆಡಳಿತಾಧಿಕಾರಿಗಳು ಸರ್ಕಾರದ ಅಣತಿಯಿಲ್ಲದೆ ಒಂದು ಹೆಜ್ಜೆಯನ್ನು ಮುಂದೆ ಇಡಲಿಕ್ಕೆ ಸಾಧ್ಯವಿಲ್ಲ. The Administrator is controlled by Government, you must know that, Mr. Lingappa. Any worst Municipal Council or Corporation is better than this Government ಎಂದು ಹೇಳಿದರೆ ಹೇಗೆ? Is it not a charge on the Government, I am asking. It is a direct charge on the Government.

SRI H. T. KRISHNAPPA.—Even if it is a charge against the Government what does follow from it? That means to say Government should not freely indulge in superseding local bodies.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಯಾವ ಒಂದು ಸ್ಥಳೀಯ ಸಂಸ್ಥೆಯು ನಡವಳಿಕೆಗಳು ಸರಿಯಾದ ರೀತಿಯಲ್ಲಿ ನಡೆಯದೆ ಇದ್ದಾಗ ಅದರ ಮೇಲೆ ಆಡಳಿತಾಧಿಕಾರಿಯನ್ನು ನೇಮಿಸುವುದು ಇದೆ. ಆ ದೃಷ್ಟಿಯಿಂದ ಆಡಳಿತಾಧಿಕಾರಿಗಳು ಸರ್ಕಾರದ ಅಂಕಿತದಲ್ಲೇ ಇರುವಾಗ ಸರ್ಕಾರದ ಅಣತೆಯನ್ನು ಬಿಟ್ಟು ಏನು ಮಾಡುವುದಕ್ಕೂ ಆಗುವುದಿಲ್ಲ. ಆದ್ದರಿಂದ ಇಂತಹ ಒಂದು ಪ್ರಶ್ನೆ ಬಂದಾಗ ಅದನ್ನು ಪ್ರಶ್ನೆ ಮಾಡುವಂತಹ ಅಧಿಕಾರ ಪ್ರತಿಯೊಬ್ಬ ಸದಸ್ಯರಿಗೂ ಇದ್ದೇ ಇರುತ್ತದೆ. ಆದ್ದರಿಂದ ಇವತ್ತು ಅಸೆಟ್ಸ್ ಮತ್ತು ಲಯಬಿಲಿಟೀಸ್ ಡಿಕ್ಲೇರ್ ಮಾಡುವುದು ಎಲ್ಲರಿಗೂ ಒಳ್ಳೆಯದು. ಆದರೆ ಮಾನ್ಯ ಪುಟ್ಟಸ್ವಾಮಿಯವರು ಈ ವಿಷಯದಲ್ಲಿ ಬಹಳ ನೊಂದು ಹೇಳಿದರು. ಅದನ್ನು ನೋಡಿದರೆ ನನಗೆ ಬಹಳ ವ್ಯಥೆಯಾಯಿತು. ಆದ್ದರಿಂದ ಕಾರ್ಪೊರೇಷನ್ ಶಾಸಕನೇ ಆಗಲಿ ಈ ಮನೆಯ ಸದಸ್ಯರೇ ಆಗಲಿ ಲೋಕಸಭಾಸದಸ್ಯರೇ ಆಗಲಿ ಎಲ್ಲರೂ ಒಳ್ಳೆಯವರೇ ಇರುವುದಿಲ್ಲ ಅಥವಾ ಎಲ್ಲರೂ ಕೆಟ್ಟವರೇ ಇರುವುದಿಲ್ಲ ಅದನ್ನು ಇಷ್ಟೇ ಎಂದು ಹೇಳುವುದಕ್ಕೆ ಬರುವುದಿಲ್ಲ ಆದ್ದರಿಂದ ಅಸೆಟ್ಸ್ ಅಂಡ್ ಲಯಬಿಲಿಟೀಸ್ ಡಿಕ್ಲೇರ್ ಮಾಡುವುದರಿಂದ ಅವರಿಗೇ ಬಹಳ ಒಳ್ಳೆಯದು. ಜನರ ದೃಷ್ಟಿಯಲ್ಲಿಯೂ ಕೂಡ ಅವರು ಮೆಚ್ಚಿಗೆಯನ್ನು ಪಡೆಯುವುದಕ್ಕೆ ಸಾಧ್ಯವಾಗುತ್ತದೆ. ಯಾವ ಮನುಷ್ಯ ಸಾರ್ವಜನಿಕ ಕ್ಷೇತ್ರದಲ್ಲಿರುತ್ತಾನೆ ಅವನ ಮೇಲೆ ಜನತೆಯ ಕಣ್ಣು ಬೀಳುತ್ತದೆ ಅವರು ನೋಡುತ್ತಿರುತ್ತಾರೆ. ತಾನೇ ತಾನಾಗಿ ತನ್ನ ಆಸ್ತಿಯನ್ನು ಜನತೆಯ ಗಮನಕ್ಕೆ ಬರುವ ರೀತಿ ತೋರಿಸುವುದರಿಂದ ಅದು ಅವಮಾನಕರವೇನು ಅಲ್ಲವೆಂದು ಹೇಳಬಯಸುತ್ತೇನೆ.

ಇನ್ನೊಂದು ಏನೆಂದರೆ ಈ ತಿದ್ದುಪಡಿಯಲ್ಲಿ ತಂದಿರತಕ್ಕಂಥ ಮಲ್ಟಿ ಮೆಂಬರ್ಸ್ ಕಾನ್ಸ್‌ಸ್ಟಿಟ್ಯೂಯೆನ್ಸಿ ಬಗ್ಗೆ ನನಗೆ ಬಹಳ ಮೆಚ್ಚಿಗೆ ಆಯಿತು. ಇದರ ಬಗ್ಗೆ ಮಾನ್ಯ ಶ್ರೀ ಶಾಮಣ್ಣನವರು ಒಂದು ಮಾತನ್ನು ಹೇಳಿದರು. ನಮ್ಮ ಶಿವಮೊಗ್ಗದಲ್ಲಿ ಇಂಥಾದ್ದೇ ಒಂದು ಏರಿಯಾ ಇತ್ತು. ಆಗ ಏನಾಗಿತ್ತು ಎಂದರೆ ಕೆಲವು ಜನರು ಸೇರಿ ಅವರೇ ಪುನಃಪುನಃ ಆರಿಸಿ ಬರುತ್ತಿದರು ಅವರನ್ನು ಸೋಲಿಸುವುದಕ್ಕೆ ಯಾರ ಕೈಯಿಂದಲೂ ಆಗುತ್ತಾ ಇರಲಿಲ್ಲ. ಒಂದೊಂದು ಕ್ಷೇತ್ರದಲ್ಲಿ 100, 120 ಜನರಿದ್ದರೆ ಅವರನ್ನು ಕರೆದುಕೊಂಡು ಬಂದು ಓಟು ಹಾಕಿಸಿಕೊಂಡು ಬಿಡುತ್ತಿದ್ದರು. ಅವರನ್ನು ಸೋಲಿಸುವುದಕ್ಕೆ, ಉರುಳಿಸುವುದಕ್ಕೇ ಆಗುತ್ತಾ ಇರಲಿಲ್ಲ. ಆದರೆ, ಹಿಂದುಳಿದವರು ಆ ಚುನಾವಣೆಗಳಲ್ಲಿ ಗೆದ್ದು ಬರುವುದಕ್ಕೆ ಆಗುತ್ತಿರಲಿಲ್ಲ. ಇಂಥವರಿಗೆ ಒಂದು ಅವಕಾಶ ಮಾಡಿಕೊಡುವ ದೃಷ್ಟಿಯಿಂದ ನಾನು ಇದಕ್ಕೆ ನನ್ನ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತೇನೆ. ಸಾಮಾನ್ಯವಾಗಿ ಪ್ರತಿ ತಾಲ್ಲೂಕು ಬೋರ್ಡಿನಲ್ಲಿಯೂ ಶಾಸಕರೊಬ್ಬರು ಎಕ್ಸ್ ಅಫಿಷಿಯೋ ಆಗಿ ಇರುವುದರಿಂದ, ಮುನಿಸಿಪಾಲಿಟಿಗಳಲ್ಲೂ ಏತಕ್ಕೆ ಒಬ್ಬ ಶಾಸಕರನ್ನು ಎಕ್ಸ್ ಅಫಿಷಿಯೋ ಆಗಿ ಇರಬಾರದು ಎಂದು ನಾನು ಪ್ರಶ್ನೆ ಮಾಡುತ್ತೇನೆ.

5–00 P.M.

ಶ್ರೀ ಡಿ. ಕೆ. ನಾಯ್ಕರ್.—ಆ ಒಂದು ವಿಷಯ ಈ ಮಸೂದೆಯಲ್ಲಿ ಅಡಕವಾಗಿದೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಹಾಗಿದ್ದರೆ, ಅದು ಸ್ತುತ್ಯಾರ್ಹವಾದ ಕೆಲಸ. ಇಂಥಾ ಒಂದು ಸಮಗ್ರವಾದ ಮಸೂದೆಯನ್ನು ಸರ್ಕಾರದವರು ತಂದಿರುವುದು ಸ್ತುತ್ಯಾರ್ಹವಾದುದೆಂದು ಹೇಳಿ, ಈ ಕಾರ್ಯಕ್ಕಾಗಿ ಮಾನ್ಯ ಶ್ರೀ ಡಿ ಕೆ. ನಾಯ್ಕರ್ ಅವರನ್ನು ಅಭಿನಂದಿಸಿ, ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† SRI B. B. SAYANAK (Belgaum).—Mr. Deputy Speaker, Sir, I rise to support this Bill and I want to offer few remarks for the consideration of the Government. the Lord Rippon who was the Viceroy of India had brought this Municipal Act and he has given powers to the Municipalities and to the Corporations.

MR DEPUTY SPEAKER.—They brought those powers from England.

SRI B. B. SAYANAK.—Now we are talking of decentralisation of powers and for that we have constituted Municipalities and Corporations. Then, after the attainment of Independence, the Central Government had appointed Mr Balwantharao Mehta for organising Village Panthyats, Jilla parishads and Taluka Boards. In almost all the States, the Gram-Panchayats have come into existence and in some States, there are Jilla Parishads, and the powers given to them are the autonomous one. When we were in Bombay State, we were run by the Bombay Municipal Borough Act. All the powers were vested with the Muinoipality. Even the Chief Officer was appointed by the Municipality but now no powers have been given to the Municipalities here. In this Municipal Corporation Bill, the Government has not given the full autonomy to the Corporation. According to the Bombay Corporation Act, only the Municipal Commissioner is appointed by the Government and all other posts such as the Engineers, the Medical Officers, Chief Auditor and Manicipal Secretary were filled in by the Corporation and there was a right vested with the Government to ratify the appointments to those posts. When you have got the power of ratification, why you are going to take away the powers of Corporation ?. The Government is deputing Engineers, Health Officers, Auditors and other Officers to the Belgaum Municipality. They have deputed so many persons to the Belgaum Municipality. There is corruption in the Belgaum Municipality. These deputed persons are most corrupt and they are not interested in the civic administration. If this is the case, why you are going to depute these persons ? The Corporation must have the right to appoint persons to various posts to carry on the day to day administration. The Corporation must select persons who are interested in municipal affairs and the must be held responsible to thy Councillors also. We are talking about democracy. If you are going to depute such type of Engineers, Medical Officers or other Officers, then, there will be bureaucracy and not democracy. I am very sorry to say that most of the Municipal Bodies are superseded. The two Corporations in Karnataka, *i. e.*, Bangalore City Corporation and the Hubli-Dharwar Corporation were superseded.

SRI D. K NAIKAR.—My. Friend has referred to the deputed officials to Belgaum Municipality. Though that question does not pertain to this discussion, I must say that if really some of the Officers are corrupt, nothing prevented the Hon'ble Member here to give an application in writing to enable me to take action against such officials and without resorting to such a recourse, it is not fair on the part of the Hon'ble Member to make reckless allegations against Officers. As regards Bangalore Municipal Corporation, I would like to say that it is not superseded. An Administrator is appointed after the expiry of the term of the Corporation.

SRI B. B. SAYANAK —The period of the Bangalore Municipal Corporation is over in the year 1974. If the Government is interested in giving amenities to the public, why did they not conduct the elections after the expiration of the period ? The contention of the Government is that they want to bring this uniform Bill and that is not an excuse because when the Corporation is due for election, it is the bounden duty of the Government to hold the election and what has happened in the case of Hubli-Dharwar Corporation ?. That is also not superseded ?

When we are going to pass this Bill you will say that because there is emergency we are not going to hold the election. Under this excuse of emergency you are not going to hold the elections to T.D.B., and Municipalities. But, this will the case for the Corporations also When the Government is interested to hold elections to the Legislative Council and Rajya Sabha, why you are not holding elections to the local boards and the Corporation ?

Regarding the Constituencies, I should say that Sec. 7 is a good one because you have givens representation to 4 ladies, to workers and representatives of the SC/ST. And regarding the appointment of the Commissioner, i. e. under Sec 14, in Bombay Act, the Government has power to appoint Municipal Commissioner. But, here, you have given latitude. You are going to consult the Mayor at the time of appointing Municipal Commissioner. This is also a good section.

Regarding the honorarium, in Bombay Municipal Corporators are getting Rs 500 and the bus pass. The Mayor of Bombay is getting Rs. 1,000 and a free house. I think you must also give an honorarium to the Corporators. Regarding the oath of allegience, I think it is not necessary for the Corporators. With regard to the declaration of assets, I have no objection. But, when the Congress Party and the Government of India were asking for the declaration of assets and liabilities of M. Ps. M. L. As and Ministers, I don't know how many Congress M. Ps, M L As and Ministers have declared their assets and liabilities So, I am of the opinion that this should not be the compulsion on the part of the Corporators.

Regarding election matters, there are divisions. But you should not say that we have not constituted a division and so we are going to postpone the election. In Municipality also there is no delimitation of the ward, so we are not going to hold the election That should not be the excuse there. Regarding qualification of the condidates in Bombay Act, they have said that the candidate must be a citizen of India. The same thing should also be inserted here. Then, you have said that Legislators have no chance to contest for the Corporation.

When a man may be good, with experience and reputation, he must be given chance to contest in the election. Why there is such a bar ? I am of the opinion that even in Bombay also the Mayor of Bombay is also an M. L. A. So, I request the Government that there should not be any bar for these M. L. As to contest in the Corporation election also.

Regarding disqualification our Hon'ble Members Mr. K. Puttaswamy has said in detail. A deaf should not be barred. Now the science has developed. And also if he is less than 25 years of age. When a man of 21 years of age is entitled to vote, Then why there is a bar if he is less than 25 years of age ? So, it must be deleted from the section.

With regard to the supersession of the Corporation in Bombay Act, the period is only for six months. Then why it is 18 months here ? If the Government is of the opinion to extend they can do it. Why this period should be extended ? When the Assembly elections are held, immediately why this supersession for 18 months? I think it is better you reduce this period.

Regarding octroi, when Mr. Rama Krishna Hegde was the Minister for Finance, in his budget speech he has mentioned that they were going to bring some other amendment and not going to give powers to the Corporation to collect the octroi. But, the present leaders who were sitting on this side were also demanding that octroi should go.

With regard to the appointment of Health and Engineering staff, as contemplated under clause 83 of the Bill. I feel that the Government should not have the power to appoint them.

Regarding appointment of Special Officer as contemplated under clause 86, there is no need to appoint Special Health Officer for preventing and investigating into the cause of spread of epidemics. When the epidemic breaks out, it is the duty of the Corporation to appoint the Doctors. Similarly they can appoint the Revenue Officers, Architects and Engineers. The idea behind all these measures is to have more powers with the Government and giving less powers to the Corporations. To my mind this Bill is not a model Bill. This Bill needs many amendments I hope the Government will bring in amendments to make this Act as a model one and thus do justice to these Corporations.

† ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಸನ್ಮಾನ್ಯ ಉಪಾಧ್ಯಕ್ಷರೇ, ಕಾನೂನು ಮತ್ತು ಮುನಿಸಿಪಾಲಿಟಿ ಮಂತ್ರಿಗಳು ಮಂಡಿಸಿರತಕ್ಕ ವಿಧೇಯಕದ ಬಗ್ಗೆ ಎರಡು ಮಾತನ್ನು ಆಡುವುದಕ್ಕೆ ಅಪೇಕ್ಷೆ ಪಡುತ್ತೇನೆ, ನಿನ್ನೆ ಮತ್ತು ಇಂದು ನಮ್ಮ ಸದನದ ಹಿರಿಯ ಸದಸ್ಯರಾದ ಮಾನ್ಯ ಪುಟ್ಟಸ್ವಾಮಿಯವರ ಮಾತುಗಳನ್ನು ಕೇಳಿದನಂತರ ಈ ವಿಧೇಯಕ ಪುನರ್ ಪರಿಶೀಲನೆಗೆ

ಒಳಪಡಲು ಯೋಗ್ಯವಾಗಿದೆ ಎಂದು ಮಾನ್ಯ ಸಚಿವರಿಗೆ ಅನಿಸಿರಬಹುದೆಂದು ನಾನು ಭಾವಿಸುತ್ತೇನೆ. ಸರ್ಕಾರ ಜಾಯಿಂಟ್ ಸೆಲೆಕ್ಟ್ ಕಮಿಟಿ ಶಿಫಾರಸ್ಸಿನ ಮೇಲೆ ಈ ಒಂದು ವಿಧೇಯಕವನ್ನು ಮಂಡನೆ ಮಾಡಿದೆ. ಈ ಒಂದು ಕ್ಷೇತ್ರದಲ್ಲಿ ಅಂದರೆ ಮಹಾ ನಗರಪಾಲಿಕೆಗಳ ಕ್ಷೇತ್ರದಲ್ಲಿ ಚೆನ್ನಾಗಿ ಅನುಭವ ಇರತಕ್ಕ ಮಾನ್ಯ ಸದಸ್ಯರಾದ ಶ್ರೀಮಾನ್ ಕೃಷ್ಣನ್‌ರವರು ಮತ್ತು ಮಾನ್ಯ ಹಿರಿಯರಾದ ಶ್ರೀಮಾನ್ ಶಾಮಣ್ಣನವರು ಹಾಗೂ ಪುಟ್ಟಸ್ವಾಮಿಯವರು ಅಮೂಲಾಗ್ರವಾಗಿ ಇದರ ಒಳಹೊಕ್ಕು ವಿಮರ್ಶೆ ಮಾಡಿದ್ದಾರೆ. ನಮ್ಮ ಸರ್ಕಾರಕ್ಕೆ ಒಂದು ವ್ಯಾಧಿ ಏನು ಎಂದರೆ; ಅದು ಹಿರಿಯಕ್ಕನ ಚಾಳಿ ಮನೆಮಂದಿಗೆಲ್ಲಾ ಎನ್ನುವಂತೆ ಇಲ್ಲಿ ಮಾತ್ರವಲ್ಲ ಅಲ್ಲಿಯೂ ಹೌದು. ದೆಹಲಿಯಿಂದ ಬೆಂಗಳೂರಿನವರೆಗೆ ಮತ್ತು ಕೋಣಂದೂರಿನವರೆಗೆ ಇದೆ. ಅದು ಏನು ಎಂದರೆ ಎಲ್ಲವೂ ತನಗೆ ಬೇಕು; ಅಧಿಕಾರ ಪೂರ್ತಿ ನನ್ನ ಕೈಯಲ್ಲಿರಬೇಕು. ಹಣ ಗುಣ, ಹವಾಗುಣ, ಪ್ರಾಣ ಮತ್ತು ಸ್ವಾತಂತ್ರ ಎಲ್ಲವೂ ತನ್ನ ಕೈಯಲ್ಲಿ ಇರಬೇಕು; ನಾನು ಎಲ್ಲರ ಎದೆಗಳ ಮೇಲೆ, ಎಲ್ಲರ ಸ್ವಾತಂತ್ರ್ಯದ ಮೇಲೆ ತಾಂಡವನೃತ್ಯ ಆಡತಕ್ಕ ರಾಕ್ಷಸೀ ಪ್ರವೃತ್ತಿ ಅಡಿಯಿಂದ ಮುಡಿಯವರೆಗೆ ಈ ಸರ್ಕಾರಕ್ಕೆ ಮೂಡಿ ಬಂದಿದೆ. ಈ ಸರ್ಕಾರ ಮಹಾನಗರ ಪಾಲಿಕೆಗಳನ್ನು ನಾಮಕಾವಸ್ತೆಗೆ ನಿರ್ಮಾಣ ಮಾಡಿ ಸೃಷ್ಟಿ ಮಾಡಿ ಅವುಗಳ ಜುಟ್ಟನ್ನು ಕತ್ತನ್ನು ತನ್ನ ಕೈಯಲ್ಲಿಟ್ಟುಕೊಳ್ಳತಕ್ಕ ಸನ್ನಾಹವನ್ನು ಈ ವಿಧೇಯಕದಲ್ಲಿ ಮಾಡಿದೆ. ಇದು ಪ್ರಜಾಪ್ರಭುತ್ವ? ಜನತಂತ್ರ ಇತ್ಯಾದಿ ದೊಡ್ಡ ದೊಡ್ಡ ಮಾತುಗಳನ್ನು ಆಡತಕ್ಕ ಇವರಿಗೆ ಶೋಭಿಸತಕ್ಕದ್ದಲ್ಲ. ನಿಜ, ಇವತ್ತಿನ ಪರಿಸ್ಥಿತಿಯಲ್ಲಿ ಈ ವಿಧೇಯಕ ಯುಕ್ತವಾಗಿದೆ ಕಾರಣ ಏನು ? ಎಲ್ಲವನ್ನೂ ತನ್ನ ಹತೋಟಿಯಲ್ಲಿ; ತನ್ನ ಕೈಯೊಳಗೆ ಇಟ್ಟುಕೊಂಡು ಎಲ್ಲವನ್ನೂ ಸೂತ್ರಧಾರಿಯಂತೆ ನಡೆಸತಕ್ಕ ಪ್ರಭುತ್ವ ಅಧಿಕಾರ ಗದ್ದುಗೆಯಲ್ಲಿ ಹೀಗೆ ಇರುವುದಿಲ್ಲ ಎನ್ನುವುದು ಶೀಘ್ರದಲ್ಲಿಯೇ ಗೊತ್ತಾಗುತ್ತದೆ. ಯಾವ ಕ್ರಮ ಎಂದು ಜನ ಎದ್ದು ನಿಂತು ಕೇಳಿದಾಗ ತಮಗೆ ಉತ್ತರ ದೊರೆಯುತ್ತದೆ, ಇವತ್ತು ಎಲ್ಲಾ ಮಹಾನಗರ ಪಾಲಿಕೆಗಳನ್ನು ಮತ್ತು ನಗರ ಪಾಲಿಕೆಗಳನ್ನು ರದ್ದುಪಡಿಸಿ; ಸೂಪರ್‌ಸೀಡ್ ಮಾಡಿ ಮಾನ್ಯ ಸಚಿವರು ಹೇಳಿದರು ಬೆಂಗಳೂರು ಮಹಾ ನಗರಪಾಲಿಕೆಯನ್ನು ಕಾಲಾವಧಿ ಮುಗಿದನಂತರ ಅಲ್ಲಿಗೆ ಮುಕ್ತಾಯ ಮಾಡಿ ಆಡಳಿತಾಧಿಕಾರಿ ನೇಮಕ ಮಾಡಿದ್ದೇವೆ ಸೂಪರ್‌ಸೀಡ್ ಮಾಡಿಲ್ಲ ಎಂದು ಹೇಳಿದರು. ಬಹಳ ಬುದ್ಧಿವಂತಿಕೆಯ ಮಾತು ; ಎಚ್ಚರಿಕೆಯ ಮಾತು; ಚೆನ್ನಾಗಿದೆ; ಕಾಲಾವಧಿ ಮುಗಿದನಂತರ ಅದನ್ನು ಮುಂದುವರಿಯದಂತೆ ಮರು ಚುನಾವಣೆ ಮಾಡದಂತೆ ಮಾಡಿರುವುದು ಸೂಪರ್‌ಸೀಡ್ ಆಗುವುದರ ಮತ್ತೊಂದು ಮುಖ. ಈ ಎರಡರ ಪರಿಣಾಮ ಒಂದೇ. ಹುಬ್ಬಳ್ಳಿ ಮತ್ತು ಧಾರವಾಡ ಮಹಾನಗರ ಪಾಲಿಕೆಗಳನ್ನು ರದ್ದುಪಡಿಸಿರುವುದು ನಿಜ. ಅದು ಕಾನೂನು ಪ್ರಕಾರ ಆಗತಕ್ಕಂಥಾದ್ದು. ಜನತೆಯಲ್ಲಾ ಡಿ. ಕೆ. ನಾಯ್ಕರ್‌ರವರಹಾಗೆ ಬಿಳಿ ಟೋಪಿ; ಕಚ್ಚೆಪಂಚೆ, ಜುಬ್ಬ ಹಾಕುವುದಕ್ಕಾಗುವುದಿಲ್ಲ. ಕಾಮರಾಜ್ ನಾಡರ್‌ರವರಂತ ಅವಿದ್ಯಾವಂತರೂ, ಶಾಲಾ ಕಾಲೇಜುಗಳಿಗೆ ಹೋಗದೇ ಇದ್ದಂತ ವರೂ ಕೂಡ ರಾಜ್ಯದ ರಾಷ್ಟ್ರದ ಪಕ್ಷದ ಹತೋಟಿಯನ್ನು ಇಟ್ಟುಕೊಂಡು ಆಡಳಿತ ನಡೆಸಿದಂತೆ ದೊಡ್ಡವರೂ ಇದ್ದಾರೆ. ಕಿವುಡುತನ ಇದ್ದವರು ಕಾರ್ಪೋರೇಷನ್ನಿನಲ್ಲಿ ಇರುವುದಕ್ಕೆ ಅವಕಾಶ ಇಲ್ಲ ಎಂದರೆ ಹೇಗೆ ? ಕೆಲವರಿಗೆ ಕಣ್ಣಿಲ್ಲ; ಕೆಲವರಿಗೆ ಕಿವಿಯಿಲ್ಲ; ಕೆಲವರು ಹೇಳಿದ್ದು ಇವರಿಗೆ ಅರ್ಥವಾಗುವುದಿಲ್ಲ ಆದರ ಅಂಗವಿಕಲತೆಯನ್ನು ಆಧಾರವಾಗಿಟ್ಟುಕೊಂಡು ಹೋಗುವುದು ಸರಿಯೇ ? ಕಾಲು ಸ್ವಲ್ಪ ಊನವಾಗಿದ್ದರೆ ನಿಲ್ಲುವ ಹಾಗಿಲ್ಲ ? ಕಿವುಡರು ನಿಲ್ಲುವ ಹಾಗಿಲ್ಲ ? ಈ ರೀತಿ ನಾನಾ ಕ್ವಾಲಿಫಿಕೇಷನ್ ಹಾಕುತ್ತಾ ಹೋದರೆ...

ಶ್ರೀ ಎಂ. ಎಸ್. ಕೃಷ್ಣನ್.—ಪಾರ್ಲಿಮೆಂಟಿನಲ್ಲಿ ಭೂಪೇಶಗುಪ್ತಾ ಎಂದು ಇದ್ದಾರೆ; ಅವರಿಗೆ ಕಿವಿ ಕೇಳಿಸುವುದಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಬುದ್ಧಿ ಇಲ್ಲ ಎಂದರೆ ಅರ್ಥ ಏನು; ಹೇಳಿದ್ದನ್ನು ಅರ್ಥ ಮಾಡಿಕೊಳ್ಳುವ ಬುದ್ಧಿ ಇಲ್ಲ ಎಂದು. ಇವತ್ತು ಸರ್ಕಾರ ಮಹಾನಗರ ಪಾಲಿಕೆಗಳನ್ನು ಹಾಗೂ ನಗರ ಪಾಲಿಕೆಗಳನ್ನು ಸೂಪರ್‌ಸೀಡ್ ಮಾಡತಕ್ಕ ಪ್ರಯತ್ನ ಏನು ಮಾಡುತ್ತಿದೆ ; ಆ ಕ್ರಮ ಸರಿಯಾದುದು ಅಲ್ಲ. ಉದಾಹರಣೆಗೆ ಚಂದ್ರಶೇಖರ್‌ರವರು ಮಾತನಾಡುವಾಗ ಸೂಪರ್‌ಸೀಡ್ ಮಾಡತಕ್ಕದ್ದು ಬಹಳ ಒಳ್ಳೆಯ ಕ್ರಮ; ಸರ್ಕಾರ ಅಧಿಕಾರವನ್ನು ತನ್ನ ಕೈಯಲ್ಲಿಟ್ಟುಕೊಳ್ಳತಕ್ಕದ್ದು ಯುಕ್ತವಾಗಿದೆ ಎಂದು ಹೇಳಿದರು. ಅವರು ಹೇಳುವುದರಲ್ಲಿ ಅರ್ಥವಿದೆ, ಮತ್ತು

ಕಾರಣವೂ ಇದೆ. ಕಾರಣ ಏನು ಎಂದರೆ ಅವರ ಊರಾದ ಹೊಸನಗರದಲ್ಲಿ ಮುನಿಸಿಫಲ್ ಆಡಳಿತ ವಿರೋಧಪಕ್ಷದ ಕೈಯಲ್ಲಿದೆ. ಲೋಕಲ್ ಬಾಡೀಸ್ ಎಲೆಕ್ಷನ್ ಬರುತ್ತಿದೆ. ಅದಕ್ಕೋಸ್ಕರ ಸೂಪರ್‌ಸೀಡ್ ಮಾಡಬೇಕು ಎಂದು. ಆದರೆ ಅದರ ದುಷ್ಪರಿಣಾಮ ಏನಾಗುತ್ತದೆ ಎಂಬುದನ್ನು ಸೂಕ್ಷ್ಮವಾಗಿ ಹೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ. ಇವತ್ತು ಜನರು ಆರಿಸಿದಂತಹ ಸಂಸ್ಥೆಗಳು ಅವು ಎಷ್ಟು ಕೆಟ್ಟ ರೀತಿಯಲ್ಲಿದ್ದರೂ ಅವುಗಳಿಗೆ ಕೊಡಬೇಕಾದ ಸ್ವಾಯತ್ತತೆ, ಸ್ವಾತಂತ್ರ್ಯ ಕೊಡದೇ ಅವುಗಳ ಎಲ್ಲಾ ಅಧಿಕಾರವನ್ನು ಸರ್ಕಾರ ತನ್ನ ಹತೋಟಿಯಲ್ಲಿ ಇಟ್ಟುಕೊಳ್ಳುವುದು ಯಾವ ದೃಷ್ಟಿಯಿಂದಲೂ ಸರಿಯಾದುದು ಅಲ್ಲ. ಬಹುಶಃ ಬ್ರಿಟೀಷರ ಕಾಲದಲ್ಲೂ ಕೂಡ ಇಂಥ ನೀತಿ ಬರಲಿಲ್ಲ. ಈ ಸರ್ವಾಧಿಕಾರ ಮನೋಭಾವವನ್ನು ನಾವು ದಿಕ್ಕರಿಸದೆ ಹೋದರೆ ಅನ್ಯಥಾ ಮಾರ್ಗವಿಲ್ಲ. ಇಡೀ ರಾಜ್ಯಕ್ಕೆ ಬೇಕಾದಂತ ಏಕರೂಪವಿದ ಮಸೂದೆ ತರುವ ಬಗ್ಗೆ ಭಿನ್ನಾಭಿಪ್ರಾಯ ಇಲ್ಲ. ಮಾನ್ಯ ಪುಟ್ಟಸ್ವಾಮಿಯವರು ಮಾತನಾಡುವಾಗ ಇದು ತಮ್ಮ ಕಾಲದಲ್ಲಿಯೇ ಇತ್ತು. ಇದನ್ನು ಏತಕ್ಕೆ ಬದಲಾವಣೆ ಮಾಡಬಾರದಾಗಿತ್ತು ಎಂದು, ಎಲ್ಲಾ ಹೇಳತಕ್ಕಂತ ನೀವು ಏತಕ್ಕೆ ಬದಲಾವಣೆ ಮಾಡಬಾರದು ಎಂದು ಕೇಳುತ್ತೇವೆ.

ಹಿಂದೆ ಅವರು ಹೇಳಿರಬಹುದು. ಈಗಿದ ನೆಲಜಲದ ಕಾಲದಲ್ಲಿ ಗಾಳಿಯಾಕಾಶದವರು ಏನು ಮಾಡಿದ್ದಾರೆ? ಅದನ್ನು ಹೇಳಿ. ಆದ್ದರಿಂದ ಇವರು ಇರತಕ್ಕದ್ದನ್ನು ಸೂಪರ್‌ಸೀಡ್ ಮಾಡತಕ್ಕಂಥ ಪ್ರಾವಿಷನ್ ಏನಿದೆ ಅದನ್ನು ಸಂಪೂರ್ಣವಾಗಿ ತೆಗೆದು ಬಿಡಬೇಕು, ಅದನ್ನು ಸಂಪೂರ್ಣವಾಗಿ ಹೊರಗೆ ಹಾಕಬೇಕು, ಅದನ್ನು ಇಡಬಾರದು ಮತ್ತು ಅದರಬಗ್ಗೆ ತಿದ್ದುಪಡಿಯನ್ನು ತರಬೇಕು. ಯಾವುದೇ ಪ್ರಜಾತಂತ್ರದಲ್ಲಿ, ಯಾವುದೇ ಒಂದು ಸಂಸ್ಥೆಯಾಗಲೀ ಅದು ಜನಗಳಿಂದ ಆಯ್ಕೆಯಾದ ನಂತರ ಅದಕ್ಕೆ ಒಂದು ಜೀವಕಳೆಯನ್ನು ಕೊಟ್ಟು ಅದು ಸ್ವಾಯುತ್ತತೆಯಿಂದ ನಡೆಯುವುದಕ್ಕೆ ಸಂಪೂರ್ಣವಾದ ಸ್ವಾತಂತ್ರ್ಯವನ್ನು ಕೊಡದೇ ಹೋದರೆ ಅಲ್ಲಲ್ಲಿ ಲೋಪದೋಷ ಆಗಬಹುದು. ಈ ಸರ್ಕಾರದಲ್ಲಿ ಎಲ್ಲವೂ ಸರಿಯಾಗಿ ನಡೆಯುತ್ತಿದೆಯೇ? ಇವತ್ತಿನದಿವಸ ನಾನು ಕೇಳುತ್ತೇನೆ ಈ ಸರ್ಕಾರದಲ್ಲಿರತಕ್ಕಂಥ ಎಲ್ಲಾ ಇಲಾಖೆಗಳ ಆಳ್ವಿಕೆ ಕೂಡ ಒಳ್ಳೆಯರೀತಿಯಲ್ಲಿ ಸಮರ್ಪಕವಾಗಿ ನಡೆದುಕೊಂಡು ಹೋಗುತ್ತಿದೆಯೇ? ಸರ್ಕಾರ ಇದನ್ನು ಏತಕ್ಕೆ ರದ್ದುಪಡಿಸಬೇಕು? ಇದನ್ನು ನಾನು ಒಪ್ಪತಕ್ಕವನಲ್ಲ. ಇದರಲ್ಲಿ ತಪ್ಪಿದ್ದರೆ ಹೇಳಿ, ಅದನ್ನು ತಿದ್ದತಕ್ಕಂಥಾದ್ದು ಅಥವಾ ತಿದ್ದಿಕೊಳ್ಳತಕ್ಕಂಥಾದ್ದು ಜವಾಬ್ದಾರಿ ಇರುತ್ತದೆ. ಆಯ್ಕೆಯಾದ ಸರ್ಕಾರವೇ ಆಗಲೀ, ಮುನಿಸಿಪಾಲಿಟಿ ಆಗಲೀ, ಕಾರ್ಪೋರೇಷನ್ ಆಗಲೀ ಯಾವುದೇ ಸಂಸ್ಥೆಯಾಗಲೀ ಅದನ್ನು ರದ್ದುಪಡಿಸುವುದು ಎಂದರೆ ಏನು ಅರ್ಥ? ಚಿಕ್ಕಮಕ್ಕಳು ತಪ್ಪು ಮಾಡಿದರೆ ಬಾವಿಗೆ ಎತ್ತಿ ಹಾಕಿಬಿಡುತ್ತೇನೆ ಎಂದು ಹೇಳುತ್ತಾರೆ. ಇಂತಹ ಒಂದು ಕಠೋರವಾದ ಮನೋಭಾವ ಏನಿದೆ ಅದು ಸರಿಯಲ್ಲ.

5-30 P.M.

ಉಪಾಧ್ಯಕ್ಷರು,—ಗ್ರೀಸ್‌ನಲ್ಲಿ ಹಿಂದೆ ಆ ರೀತಿ ಮಾಡುತ್ತಿದ್ದರು.

ಶ್ರೀ ಕೋಣಂದೂರು ಲಿಂಗಪ್ಪ.—ತಾವು ಶಿಲಾಯುಗದ ಕಾಲಕ್ಕೆ ಹೋಗುತ್ತಿದ್ದೀರಿ, ಯಾವ ಒಬ್ಬ ವ್ಯಕ್ತಿ ಜನರಿಂದ ಆಯ್ಕೆಯಾಗುತ್ತಾನೋ ಅವನು ಜನರ ಹಿತಕ್ಕೆ ಧಕ್ಕೆಬರುವ ರೀತಿಯಲ್ಲಿ, ಅವರ ಹಿತಕ್ಕೆ ವಿರುದ್ಧವಾಗಿ ನಡೆಯುತ್ತಾನೋ ದುಡಿಯುತ್ತಾನೋ ದ್ರೋಹ ವಂಚನೆ ಮಾಡುತ್ತಾನೋ ಅಂತಹವನನ್ನು ಆಯ್ಕೆ ಮಾಡಿದ ಜನರೇ ಹಿಡಿದು ತಕ್ಕ ಬುದ್ಧಿಯನ್ನು ಕಲಿಸತಕ್ಕಂಥಾದ್ದು ಯುಕ್ತವಾದದ್ದು. ಆದರೆ ಅಂತಹವರಿಗೆ ತಲೆ ಬೋಳಿಸುವುದು, ಕತ್ತೆಮೇಲೆ ಕೂರಿಸಿ ಸವಾರಿ ಮಾಡಿಸುವುದು ಇದನ್ನು ನಾನು ಒಪ್ಪುವವನಲ್ಲ. ದಾವಣಗೆರೆಯಲ್ಲಿ ಒಬ್ಬನನ್ನು ಹೊಡೆದು ಕೊಂದರು ಮ್ಯಾನೇಜರ್ ಒಬ್ಬನನ್ನು ಎತ್ತಿ ಹಾಕಿ ಕೊಂದರು. ಇದು ಸರಿಯೇ? ಇದು ತಪ್ಪು, ಇದು ಯಾರು ಒಪ್ಪುವುದಿಲ್ಲ. ಯಾವುದೇ ರೀತಿಯ ಹಿಂಸೆ, ಭ್ರಷ್ಟಾಚಾರಕ್ಕೆ ಪ್ರಚೋದನೆಯನ್ನು ಕೊಡತಕ್ಕಂಥ ಜನ ಅವರು ಖಂಡಿತವಾಗಿಯೂ ಜನ ಅಲ್ಲ. ಆದುದರಿಂದ ಜನತೆಯಿಂದ ಆಯ್ಕೆಯಾಗಿ ಬಂದಂಥವರು ಯಾವುದೇ ಸಂಘಸಂಸ್ಥೆಗಳಿಗೆ ಇಂತಹ ಗತಿಯನ್ನು ಕಾಣಿಸತಕ್ಕಂಥಾದ್ದು ಇದು ಮುಂದೆ ದುರಂತಕ್ಕೆ ನಾಂದಿಯಾಗುತ್ತದೆಂದು ಹೇಳುತ್ತೇನೆ. ಮಹಾ ನಗರ ಪಾಲಿಕೆಯ ಬಗ್ಗೆ ಹೇಳುವುದಾದರೆ 3 ವರ್ಷಗಳಿಂದ ಇದರ ಚುನಾವಣೆಯನ್ನು ನಡೆಸಿಲ್ಲ. ಇದರ

ಚುನಾವಣೆಯನ್ನು ಏತಕ್ಕೆ ನಡೆಸಬಾರದಾಗಿತ್ತು ? ಅಲ್ಲಿ ಕೆಲವು ತಪ್ಪುಗಳಾಗಿರಬಹುದು. ಕೆಲವು ಸಲ ಮನುಷ್ಯನ ಸ್ವಭಾವದಲ್ಲಿ ಆ ರೀತಿ ಆಗುತ್ತದೆ. ಹಾಗೆ ಉದಾಹರಣೆಯನ್ನು ಕೊಡುತ್ತಾ ಹೋದರೆ ಅನೇಕ ಘಟನೆಗಳು ಇವೆ. ಬೆಂಗಳೂರು ಮಹಾನಗರ ಪಾಲಿಕೆಯ ಚುನಾವಣೆಯನ್ನು ಮಾಡದೇ ಕುಳಿತಿರುವುದರ ಉದ್ದೇಶವಾದರೂ ಏನು ! ಈ ಸರ್ಕಾರಕ್ಕೆ ಜನರ ಹತ್ತಿರ ನೇರವಾಗಿ ಹೋಗಿ ಸ್ವತಂತ್ರವಾದ ವಾತಾವರಣದಲ್ಲಿ ಅವರನ್ನು ನೋಡುವುದಕ್ಕೆ, ಅವರ ಹತ್ತಿರ ಹೋಗುವುದಕ್ಕೆ ಧೈರ್ಯ ಇಲ್ಲ. ಅದೇ ಕಾರಣದಿಂದ ಇಡೀ ರಾಜ್ಯದಲ್ಲಿರತಕ್ಕಂಥ ತಾಲ್ಲೂಕು ಅಭಿವೃದ್ಧಿ ಮಂಡಲಗಳನ್ನು ರದ್ದುಪಡಿಸಿದೆ. ನಮ್ಮ ರಾಜ್ಯದಲ್ಲಿ ನಗರ ಪಾಲಿಕೆಯ ಚುನಾವಣೆಯನ್ನು ರದ್ದುಪಡಿಸಿದೆ, ಅಷ್ಟೇ ಏತಕ್ಕೆ ಕಾಲೇಜುಗಳಲ್ಲಿ ವಿದ್ಯಾರ್ಥಿ ಸಂಘದ ಚುನಾವಣೆಯನ್ನು ನಡೆಸುವುದನ್ನು ರದ್ದು ಮಾಡಿದ್ದಾರೆ. ಇಷ್ಟೆಲ್ಲಾ ಇರಬೇಕಾದರೆ ಪ್ರಜಾಪ್ರಭುತ್ವದ ಹೆಸರಿನ ಶಬ್ದವನ್ನು ಉಚ್ಚಾರ ಮಾಡತಕ್ಕಂಥ ಅಧಿಕಾರವನ್ನು ಸಂಪೂರ್ಣವಾಗಿ ಕಳೆದುಕೊಂಡಿರತಕ್ಕ ಜನ ಇವರು ಇವತ್ತು, ಈ ವೇದಿಕೆಯಲ್ಲಿ ಅದಕ್ಕೆ ಶಾಸ್ತ್ರೋಕ್ತವಾದ ಹಕ್ಕನ್ನು ಪೂರ್ತಿಯಾಗಿ ಅವರ ಕೈಗೆ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಈ ಆಯ್ಕೆಯಾದಂತ ಕಾರ್ಪೊರೇಟರ್‌ಗಳಿಗೆ, ಜನರ ಪ್ರತಿನಿಧಿಗಳಿಗೆ ವೇತನ, ಸಂಭಾವನೆ, ಗೌರವಧನವನ್ನು ಕೊಡತಕ್ಕಂಥ ಯೋಚನೆ ಏನಿದೆ ಅದು ಒಳ್ಳೆಯದು. ಮಾನ್ಯ ನಯನರ್ ಅವರು ಹೇಳಿದ ಹಾಗೆ ಮುಂಬಯಿ ನಗರದಲ್ಲಿ ಹೇಗೆ ಎಷ್ಟು ಸವಲತ್ತುಗಳನ್ನು ಇವರಿಗೆ ಕೊಟ್ಟಿದ್ದಾರೆ ಅಷ್ಟು ಸವಲತ್ತುಗಳನ್ನು ಇಲ್ಲಿ ಕೊಡುವುದರಲ್ಲಿ ಯಾವ ತಪ್ಪೂ ಇಲ್ಲವೆಂದೂ ನಾನು ಭಾವಿಸುತ್ತೇನೆ. ಇದು ಇಲ್ಲದೇ ಹೋದರೆ ಶ್ರೀಮಾನ್ ಕೃಷ್ಣನ್ ಅವರು ಹೇಳಿದಹಾಗೆ ಅವರಿಗೆ ಬೇರೆ ಉತ್ಪತ್ತಿ ಇಲ್ಲ ಎಂದರೆ ಅವರು ಹೇಗೆ ಜೀವನವನ್ನು ನಡೆಸಬೇಕು ? ಇದರಿಂದ ಬೇರೆಯವರ ಕಡೆಗೆ ಕೈ ಚಾಚುವುದು, ಬೇರೆಯವರ ಜೇಬಿಗೆ ಕೈ ಹಾಕುವ ಪರಿಸ್ಥಿತಿ ಬರುತ್ತದೆ. ಇವತ್ತು ಶಾಸಕರಿಗೆ ಜೀವನಕ್ಕೆ ಅಗತ್ಯವಾದ ವೇತನವನ್ನು ಏನು ಸಾಕಷ್ಟು ಕೊಡುತ್ತಾ ಇದ್ದಾರೆಯೋ ಹಾಗೆ ಆಯ್ಕೆಯಾದ ಮುನಿಸಿಫಲ್ ಕಾರ್ಪೊರೇಟರ್ಸ್‌ಗೆ ಅವರ ಜೀವನಕ್ಕೆ ಬೇಕಾದಂತ ಭತ್ಯವನ್ನು, ಸಂಭಾವನೆಯನ್ನು ಕೊಡುವುದು ಯುಕ್ತವಾದುದ್ದು. ಅವರು ಅವರ ಆಸ್ತಿ ಮತ್ತು ಅಸೆಸ್ ಮತ್ತು ಲಯಬಲಿಟೀಸ್ ಬಗ್ಗೆ ಡಿಕ್ಲೇರ್ ಮಾಡಬೇಕು ಎನ್ನುವ ಮಾತು ಏನಿದೆ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇದೇ ಸದನದಲ್ಲಿ ಎಲ್ಲಾ ಶಾಸಕರ ಮತ್ತು ಮಂತ್ರಿಗಳ ಆಯವ್ಯಯ ಮತ್ತು ವೆಚ್ಚಗಳ ಬಗ್ಗೆ ಈ ಸದನಕ್ಕೆ ಪಟ್ಟಿಯನ್ನು ಸಲ್ಲಿಸಬೇಕು ಎಂದು ಒಂದು ಖಾಸಗೀ ವಿಧಾಯಕವನ್ನು ಮಂಡಿಸಿದ್ದೇವೆ. ಅದು ಇಲ್ಲಿ ಇದೆ. ಆ ಬಗ್ಗೆ ನಾವು ಸಾರಿಸಾರಿ ಹೇಳಿದ್ದೇವೆ. ಇಲ್ಲಿರುವ ಶಾಸಕರು, ಮಂತ್ರಿಗಳು, ಕಾರ್ಪೊರೇಟರುಗಳು ಅವರೇ ಅಲ್ಲ, ಮಾಜಿ ಕಾರ್ಪೊರೇಟರುಗಳು, ಮಾಜಿ ಶಾಸಕರು, ಮಾಜಿ ಮಂತ್ರಿಗಳು ಎಲ್ಲರೂ ಕೂಡ ಈ ಅಸೆಸ್ ಮತ್ತು ಲಯಬಿಲಿಟೀಸ್ ಬಗ್ಗೆ ಡಿಕ್ಲೇರ್ ಮಾಡಬೇಕು ಎನ್ನುವ ಬಗ್ಗೆ ಅದನ್ನು ಒಪ್ಪತಕ್ಕಂಥ ಜನ ನಾವು. 1947ನೇ ಇಸವಿಯಿಂದ ಇಲ್ಲಿಯವರೆಗೆ ಯಾರು ಯಾರು ಅಧಿಕಾರ ಗದ್ದುಗೆಯಲ್ಲಿ ಇದ್ದು ಹೋಗಿದ್ದಾರೆ ಅವರೆಲ್ಲ ಅಸೆಸ್ ಮತ್ತು ಲಿಯಬಲಟೀಸ್ ಬಗ್ಗೆ ತನಿಖೆಯನ್ನು ನಡೆಸಬೇಕು ಮತ್ತು ಅದರ ಬಗ್ಗೆ ಪರಿಶೀಲನೆ ಆಗಬೇಕು. ಅದಕ್ಕಾಗಿ ಹೊಸದಾಗಿ ಪ್ರತ್ಯೇಕವಾಗಿ ಅಧಿಕಾರವನ್ನು ಉಳ್ಳಂತ ಅಧಿಕಾರಿಯನ್ನು ನೇಮಿಸಿ, ಒಂದು ನ್ಯಾಯ ಮಂಡಳಿಯನ್ನು ನೇಮಕ ಮಾಡಿಯಾದರೂ ಇದನ್ನು ಮಾಡಬೇಕು. ಇದು ಇಲ್ಲದೇ ಹೋದರೆ ಸಾರ್ವಜನಿಕ ಜೀವನ ನಿಜವಾಗಿಯೂ ಚೊಕ್ಕವಾಗುವುದಿಲ್ಲ. ಇದನ್ನು ಮೊದಲಿನಿಂದಲೂ ಸಾರಿಕೊಂಡು ಬಂದಂತಹ ಜನ ನಾವು, ಇದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಇನ್ನು ಕಾರ್ಪೊರೇಷನ್‌ನಲ್ಲಿ ನಡೆಯತಕ್ಕಂಥ ನಡವಳಿಕೆಗಳು ಎಲ್ಲವೂ ಪೂರ್ತಿಯಾಗಿ ಸರ್ಕಾರದ ಗಮನಕ್ಕೆ ಬರಬೇಕು; ಅದನ್ನು ಸರ್ಕಾರಕ್ಕೆ ಕಳಿಸಿಕೊಡಬೇಕು, ಆಮೇಲೆ ಸರ್ಕಾರ ತನಿಖೆ ನಡೆಸಿ ಇಷ್ಟಬಂದರೆ ಅದನ್ನು ಮೆಚ್ಚಬಹುದು ಇಲ್ಲದೇ ಹೋದರೆ ತಳ್ಳಿಹಾಕಬಹುದು; ಯಾವ ಕೆಲಸವನ್ನು ಮಾಡಬೇಕಾದರೂ ಸರ್ಕಾರದ ಅಪ್ಪಣೆಯನ್ನು ಕಾಯಬೇಕು ಎಂದರೆ ನಾನು ಒಂದು ಮಾತನ್ನು ಕೇಳಬೇಕಾಗುತ್ತದೆ, ಎಲ್ಲವನ್ನೂ ವರದಿ ಒಪ್ಪಿಸಿ ಅದಕ್ಕೆ ಅನುಮತಿ ಪಡೆದು ಹೆಜ್ಜೆ ಇಡುವುದಾದರೆ ಇದು ಏತಕ್ಕೆ ಇರಬೇಕು ? ಪೀಪಲ್ಸ್ ಡೆಮಾಕ್ರಸಿ ಇದೆ, ದೇವಸ್ಥಾನಗಳು ಇವೆ, ಮುನಿಸಿಪಾಲಿಟಿಗಳು ಇದೆ ಪ್ರಜಾಪ್ರಭುತ್ವ ಇದೆ, ಅದರೆ ಇರುವುದಾದರೂ ಎಲ್ಲಿ ? ಎಲ್ಲಿ ಇದೆ ಎಂದು ಜನಗಳನ್ನು ಕೇಳಿದರೆ ಗೊತ್ತಾಗುತ್ತದೆ. ಅವರು ಜನಗಳನ್ನು ತಯಾರು ಮಾಡಿ ಇಟ್ಟಿರುತ್ತಾರೆ. ಹೊರಗಡೆಯಿಂದ ಹೋದವರಿಗೆ ಸ್ವತಂತ್ರವಾದ ವಾತಾವರಣದಲ್ಲಿ ಕರೆದುಕೊಂಡು ಹೋಗುತ್ತಿದ್ದೇವೆ ಎಂದು ತೋರಿಸು

ತ್ತಾರೆ. ನಿಜವಾಗಿಯೂ ಇದಕ್ಕೆ ಏನಾದರೂ ಜೀವ ಇದೆಯೇ? ಸ್ವಾತಂತ್ರ್ಯ ಇದೆಯೇ? ಯಾವ ಸ್ವಾತಂತ್ರ್ಯವೂ ಇಲ್ಲ. ಆ ರೀತಿ ಗೈಡೆಡ್ ಡೆಮಾಕ್ರಸಿಪೀಪಲ್ಸ್ ಡೆಮಾಕ್ರಸಿ ದಾರಿಯಲ್ಲಿ ಹೋಗತಕ್ಕಂಥ ಜನ ಇವರು.

ಶ್ರೀ ಎಂ. ಎಸ್. ಕೃಷ್ಣನ್.—ಅಲ್ಲಿಗೆ ಹೋಗಬೇಕೆಂಬ ಉದ್ದೇಶದಿಂದ ಹೇಳುತ್ತಿದ್ದಾರೆಯೋ ಏನೋ ಗೊತ್ತಿಲ್ಲ.

ಉಪಾಧ್ಯಕ್ಷರು.—ಒಂದು ಸಾರಿ ಕಳುಹಿಸಿಕೊಡಿ. ಪೀಪಲ್ಸ್ ಡೆಮಾಕ್ರಸಿ ಹೇಗೆ ಇದೆಯೆಂದು ನೋಡಲಿ.

ಶ್ರೀ ಎಂ. ಎಸ್. ಕೃಷ್ಣನ್.—ಕಲರ್ಡ್ ಗ್ಲಾಸ್ ಇಟ್ಟುಕೊಂಡು ನೋಡಿದರೆ ಗೊತ್ತಾಗುವುದಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ನಾನು ಕಲರ್ಡ್ ಗ್ಲಾಸನ್ನು ತೊಟ್ಟಿಲ್ಲ. ಆದರೆ ಕಾರ್ಲ್ ಮಾರ್ಕ್ಸ್ ದೊಡ್ಡವರು ಎಂದು ಹೇಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್,—ಕಾರ್ಲ್ ಮಾರ್ಕ್ಸ್ ಬಗ್ಗೆ ನೂರು ಸಲ ಹೇಳದೇ ಇದ್ದರೆ ಅವರ ಮನಸ್ಸಿಗೆ ಶಾಂತಿ ಇಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಜಗತ್ತಿನಲ್ಲಿ ಅವರು ಬಹಳ ದೊಡ್ಡ ವ್ಯಕ್ತಿ ಇದ್ದಾರೆ. ಕಾರ್ಲ್ ಮಾರ್ಕ್ಸ್‌ರವರಿಗಿಂತ ದೊಡ್ಡವರು ಮತ್ತೊಬ್ಬರು ಇಲ್ಲ. ಅವರ ಬಗ್ಗೆ ಇವರಿಗಿಂತ ಹೆಚ್ಚು ಗೌರವ ನನಗೆ ಇದೆ. ದೊಡ್ಡವರನ್ನು ದೊಡ್ಡವರೆಂದು ಹೇಳುವ ಬುದ್ಧಿ ನನಗೆ ಇದೆ. ಆದರೆ ಅಧ್ಯಕ್ಷರೇ ಈ ರೀತಿ ಒಂದು ಕೈಯಲ್ಲಿ ಕೊಟ್ಟಿದ್ದನ್ನು ಒಂದು ಕೈಯಲ್ಲಿ ಕಸಿದುಕೊಂಡಂತೆ ಮಾಡುವ ಪದ್ಧತಿ ಎಷ್ಟು ಸರಿ ಎಂದು ನಾನು ಕೇಳುತ್ತೇನೆ,

ಪ್ರತಿಯೊಬ್ಬ ಆಫೀಸರನ್ನು ಸರ್ಕಾರ ನೇಮಕ ಮಾಡುತ್ತದೆ. ಮಾನ್ಯ ಪುಟ್ಟಸ್ವಾಮಿಯವರು ಹೇಳಿದಹಾಗೆ ಆ ಆಫೀಸರುಗಳಿಗೆ ಸಂಪೂರ್ಣವಾದ ಸರ್ಕಾರ ಹತೋಟಿ ಇದೆ. ಅವರು ಆಯ್ಕೆ ಆಗತಕ್ಕ ಸಂಸ್ಥೆಗಳಿಗೆಲ್ಲಿ ಅವರಿಗೆ ದೊರಕಬೇಕಾದ ಸ್ವಾಯತ್ತತೆ ದೊರಕದೆ ಹೋದರೆ ಅವರು ಏತಕ್ಕೆ ಕೆಲಸ ಮಾಡಬೇಕು? ಅವರು ಪ್ರತಿಯೊಂದಕ್ಕೂ ಸರ್ಕಾರದ ವಿಧಾನ ಸೌಧದ ಬಾಗಿಲು ಕಾಯತಕ್ಕ ಪರಿಸ್ಥಿತಿ ಉಂಟಾಗಿದೆ. ಒಬ್ಬ ಪ್ರತಿನಿಧಿಯು ಸಾವಿರಾರು ಜನರಿಂದ ಆಯ್ಕೆಯಾಗಿರಲಿ ಅವನೂ ಗ್ರಾಮ ಪಂಚಾಯಿತಿಗಳಲ್ಲಿ ಆಗುವಂತೆ ೫೦೦ ಸಾವಿರಾರು ಜನರಿಂದ ಆಯ್ಕೆಯಾಗಿರಲಿ ಅವನೂ ಒಬ್ಬ ಪ್ರತಿನಿಧಿಯೆ ಅವನಿಗೆ ಕೊಡಬೇಕಾದ ಮರ್ಯಾದೆ ಮಾನ್ಯತೆಗಳನ್ನು ಕೊಡಬೇಕಾಗುತ್ತದೆ ಇಲ್ಲದೆ ಹೋದರೆ ಅದು ಪ್ರಜಾಪ್ರಭುತ್ವದ ಕತ್ತು ಹಿಸುಕುವ ಕ್ರಮ ಸರಿಯಲ್ಲ ಎನ್ನುವ ಮಾತನ್ನು ಹೇಳುವುದಕ್ಕೆ ಆಪೇಕ್ಷೆ ಪಡುತ್ತೇನೆ. ಇನ್ನು ಕಾರ್ಪೊರೇಟರುಗಳು ಪ್ರಮಾಣ ವಚನ ಸ್ವೀಕಾರ ಮಾಡುವ ಬಗ್ಗೆ ಮಾನ್ಯ ಪುಟ್ಟಸ್ವಾಮಿಯವರು ಪ್ರಸ್ತಾಪ ಮಾಡಿದ್ದಾರೆ ಮತ್ತು ಅಲ್ಲಿ ಸಂವೇದನೆಗೆ ಬದ್ಧವಾಗಿ ನಡೆದುಕೊಳ್ಳುತ್ತಾರೆಂದು ಹೇಳಿದ್ದಾರೆ. ಇದು ಹೊಸ ವಿಷಯ. ಹಾಗೆಯೇ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ನೋಡಿದರೆ ಯಾರದೋ ಹೆಸರು ಹೇಳಿ ಅಂಥವರಿಗೆ ನಿಷ್ಠೆಯಿಂದ ನಡೆದುಕೊಳ್ಳುತ್ತಾರೆಂದು ಕೂಡ ಹೇಳಲಿಕ್ಕೆ ಮುಂದೆ ಸಾಧ್ಯವಾಗುತ್ತದೆ ಈ ಬಗ್ಗೆ ಇಂಥ ಒಂದು ವಿಪರ್ಯಾಸಕ್ಕೆ ಒಳಗೊಂಡಂತಹ ವ್ಯಾಖ್ಯಾನವನ್ನು ತರುವುದಕ್ಕೆ ಪೂರ್ವಭಾವಿಯಾಗಿ ಯೋಚಿಸಿ ಮಾಡಬೇಕಿತ್ತು ಎನ್ನುವ ಮಾತನ್ನು ಹೇಳಲಿಕ್ಕೆ ಆಪೇಕ್ಷೆ ಪಡುತ್ತೇನೆ. ಇನ್ನೂ ಇತರ ಆರ್ಥಿಕ ಆಗು ಹೋಗುಗಳ ಬಗ್ಗೆ ಮುಖ್ಯವಾಗಿ ಆಕ್ಟ್ರಾಯ್ ಬಗ್ಗೆ—ಇದು ಸರಿಯಲ್ಲ ಇದು ಕಂದಾಚಾರದ ಪದ್ಧತಿ ಎನ್ನುವ ಮಾತನ್ನು ಹೇಳಿದ್ದಾರೆ. ಇವತ್ತು ವೆಹಿಕಲ್ಸ್ ಮೇಲೆ ಟ್ಯಾಕ್ಸನ್ನು ಹಾಕಿದ್ದಾರೆ, ಒಟ್ಟಿನಲ್ಲಿ ಎಲ್ಲಗಳ ಮೇಲೆ ಟ್ಯಾಕ್ಸನ್ನು ಹಾಕಿದ್ದಾರೇ. ಇನ್ನು ಉಳಿದಿರುವುದು ಯಾವುದು ಇದೆಯೆಂದು ಪಟ್ಟಿ ಮಾಡಿದರೆ ಒಳ್ಳೆಯದು. ಭಾರವಾದ ಗಾಡಿಯಿಂದ ರಸ್ತೆ ನೋವಾದರೆ ಅದಕ್ಕೂ ಸಹ ಪ್ರತ್ಯೇಕ ಟ್ಯಾಕ್ಸ್ ಹಾಕಬೇಕು. ಸ್ವಲ್ಪ ಭಾರವಾದ ಜನ ಅಂದರೆ ನಮ್ಮ ನಾಯಕರಾದಂತಹ ಕೃಷ್ಣಪ್ಪನಂತಹವರು ವಿ. ಎಲ್. ಪಾಟೀಲ್‌ರಂತಹ ದಪ್ಪದ ಜನ ರಸ್ತೆಯಲ್ಲಿ ಹೋಗುವಾಗ ಅವರ ಹೆಚ್ಚಿನ ತೂಕದಿಂದ ರಸ್ತೆ ಕೊಡುವುದಿಲ್ಲವೇ ?

MR. DEPUTY SPEAKER.—The hon'ble member might have given ome credit,

ಶ್ರೀ ಕೋಣಂದೂರು ಲಿಂಗಪ್ಪ—ಇಂಥ ಹಳೆ ಶಿಲಾಯುಗದ ಮನೋಭಾವವನ್ನಿಟ್ಟುಕೊಂಡು ಪ್ರಜಾಪ್ರಭುತ್ವದ ಕತ್ತು ಹಿಸುಕತಕ್ಕ ರೀತಿಯಲ್ಲಿ ಈ ವಿಧೇಯಕವನ್ನು ತರುವುದರ ಬದಲು ಪುನರಾಲೋಚನೆ ಮಾಡಿ ಪುನಪರಿಶೀಲನೆ ಮಾಡಬೇಕೆಂದು ಹೇಳಬಯಸುತ್ತೇನೆ. ಯಾವುದಕ್ಕೆ ತೆರಿಗೆಯನ್ನು ಹಾಕಬೇಕು ಯಾವುದಕ್ಕೆ ಬಿಡಬೇಕೆಂಬುದನ್ನು ಮೊದಲೇ ಯೋಚನೆ ಮಾಡಬೇಕು. ಉದಾಹರಣೆಗೆ ಮಂತ್ರಿಗಳಿಗೆ ಸರ್ಕಾರಿ ಉದ್ಯೋಗ ಇರುತ್ತದೆ. ಮನೆ ಇರುತ್ತದೆ, ಬಂಗಲೆ ಇರುತ್ತದೆ ಆದುದರಿಂದ ಅವರಿಗೆ ಮೂರು ಕಡೆ ತೆರಿಗೆಯನ್ನು ಹಾಕಬೇಕಾಗುತ್ತದೆ, ಇದೇ ರೀತಿ ಇನ್ನೂ ಅನೇಕ ನಿದರ್ಶನಗಳಿವೆ ಅವುಗಳನ್ನೆಲ್ಲ ಹಾಗೆ ಬಿಡುವುದಕ್ಕಾಗುತ್ತದೆಯೆ?

ಶ್ರೀ ಡಿ. ಕೆ. ನಾಯ್ಕರ್.—ಮುನಿಸಿಪಾಲಿಟಿಯವರಿಗೆ ಕಾರ್ಪೊರೇಶನ್ನಿನ ಅಧಿಕಾರವನ್ನು ಕೊಡಿ ಎಂದು ಕೇಳಿದರೆ ಮುನಿಸಿಪಾಲಿಟಿಯ ಆಕ್ಟ್ ಗಳ ಪ್ರಕಾರ ಮುನಿಸಿಪಾಲಿಟಿಯವರೇ ಟ್ಯಾಕ್ಸ್ ಹಾಕಬೇಕಾಗುತ್ತದೆ. ಅದನ್ನು ಇಂಪೋಸ್ ಮಾಡುವ ಅಧಿಕಾರ ಸರ್ಕಾರಕ್ಕೆ ಇಲ್ಲ. ಈಗ ಏನಾಗಿದೆ. ಎನ್ನುವುದಕ್ಕೆ ಮಂಗಳೂರನ್ನು ಉದಾಹರಣೆಗೆ ತೆಗೆದುಕೊಂಡರೆ, ಆಕ್ಟ್ರಾಯಿ ಹಾಕಿದೆ. ಫೈನಾನ್ಸ್ ಇಲ್ಲ ಫಿಷ್ ಮಾರ್ಕೆಟ್ ಬೇಕು. ಕಂಪ್ಲೆಕ್ಸ್ ಬೇಕು ಎಂದರೆ ಅದು ಹೇಗೆ ಪ್ರೊಗ್ರೆಸ್ ಆಗುತ್ತದೆಂಬುದನ್ನು ನೀವೇ ಹೇಳಿ ?

ಶ್ರೀ ಕೋಣಂದೂರು ಲಿಂಗಪ್ಪ.—ಆದಕ್ಕೆ ಗ್ಯಾರಂಟಿ ಕೊಡುವುದಕ್ಕೆ ಸರ್ಕಾರ ಇದೆ ಗ್ಯಾರಂಟಿ ಕೊಡುವುದಕ್ಕೆ ಸರ್ಕಾರಕ್ಕೆ ಏನು ತೊಂದರೆ ಇದ್ಯೆ ಫೈನಾನ್ಸಿಗೆ ಅವರು ಏರ್ಪಾಡು ಮಾಡಿಕೊಳ್ಳುತ್ತಾರೆ, ಕೇವಲ ಫೈನಾನ್ಸಿಗೋಸ್ಕರ ಇಷ್ಟು ದೊಡ್ಡ ಹತೋಟಿಯನ್ನಿಟ್ಟುಕೊಂಡು ನಡೆಯಬೇಕೆಂದು ಹೇಳುವುದು ಸರಿಯಲ್ಲ. ಅಲ್ಲಿಯ ಜನರಿಗೆ ಹೆಚ್ಚು ಭಾರ ಆಗಬಾರದೆಂಬ ಉದ್ದೇಶದಿಂದ ತೆರಿಗೆಯನ್ನು ತೆಗೆದಿದ್ದರೆ ಅದಕ್ಕೆ ಸರ್ಕಾರ ಸಬ್ಸಿಡೈಸ್ ಮಾಡಿ ಮಂಗಳೂರಿನ ವಿಚಾರವು ಅಷ್ಟೆ ಊಟಿಯ ವಿಚಾರವು ಅಷ್ಟೆ. ಎಲ್ಲ ನನಗೆ ಗೊತ್ತಿದೆ. ಈ ಟ್ಯಾಕ್ಸು ಪದ್ಧತಿ ಏನು ಇದೆ ಈ ಒಗ್ಗೆ ಪುನರಾಲೋಚನೆ ಮಾಡಿ ಅದನ್ನು ರದ್ದುಪಡಿಸುವುದಕ್ಕೆ ಕ್ರಮ ಕೈಗೊಳ್ಳಬೇಕೆಂದು ಮತ್ತು ತಾವು ಅಧಿಕಾರಿಗಳನ್ನು ನೇಮಕ ಮಾಡಿಕೊಳ್ಳತಕ್ಕ ಪದ್ಧತಿಯನ್ನು ಕೈಬಿಡಬೇಕೆಂದು ಹೇಳಬಯಸುತ್ತೇನೆ. ಮಾನ್ಯ ಪುಟ್ಟಸ್ವಾಮಿಯವರು ಹೇಳಿದ ಹಾಗ ಮುಂಬಯಿ ನಗರದ ಕಾಯಿದೆ ಏನು ಇದೆ ಅದನ್ನು ಮತ್ತೊಮ್ಮೆ ಯೋಚನೆ ಮಾಡಿ ನಮಗೆ ಬೇಕಾದ ರೀತಿಯಲ್ಲಿ ಸಣ್ಣಪುಟ್ಟ ತಿದ್ದುಪಡಿಗಳನು ಮಾಡಿ ಆದನ್ನು ಜಾರಿಗೆ ತಂದರೆ ಆದರ್ಶವಾದ ವಿಧೇಯಕ ವಾಗುತ್ತದೆಂದು ಹೇಳುತ್ತೇನೆ. ದೊಡ್ಡ ದೊಡ್ಡ ದೊಡ್ಡ ನಗರದಲ್ಲಿ ಅನೇಕ ಅವ್ಯವಹಾರಗಳು ನಡೆಯುತ್ತಿದ ಹಾಗೆಯೇ ಸರ್ಕಾರದಲ್ಲಿ ಸಹ ನಡೆಯುತ್ತವೆ. ಅದಕಾರಣ ಎಲ್ಲಾ ಸ್ಥಳಗಳಲ್ಲೂ ಕೂಡ ಅವ್ಯವಹಾರಗಳು ನಡೆದಿವೆ ಅಂದ ಮಾತ್ರಕ್ಕೆ ಆ ಒಂದು ಪದ್ಧತಿಯನ್ನು ನಿರ್ನಾಮ ಮಾಡತಕ್ಕ ರೀತಿಯಲ್ಲಿ ಹೆಜ್ಜೆ ಇಡುವುದು ಯೋಗ್ಯವಲ್ಲವೆಂಬ ಮಾತನ್ನು ಹೇಳಿ ಮಾನ್ಯ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

MR. DEPUTY SPEAKER.—Hon. Minister will reply on Monday

## Half-an-hour discussion arising out of replies to Starred Question Number 41 on February 1976

### *re : Marketing yard building at Indi.*

† ಶ್ರೀ ಜಿ. ಎಲ್ ಕಬಾಡ (ಬಳ್ಳೊಳ್ಳಿ)—ಮಾನ್ಯ ಉಪಾಧ್ಯಕ್ಷರೆ. ಇಂಡಿಯಲ್ಲಿರತಕ್ಕ ಮಾರ್ಕೆಟ್ ಕಟ್ಟಡದ ವಿಷಯದಲ್ಲ ಒಂದು ಪ್ರಶ್ನೆಯನ್ನು ಕೇಳಿದಾಗ ಸರ್ಕಾರ ಕೊಟ್ಟ ಉತ್ತರ ಸಮಂಜಸವಾಗಲಿಲ್ಲ ವೆಂದು ಅವತ್ತಿನ ದಿವಸ ಮಾನ್ಯ ಅಧ್ಯಕ್ಷರನ್ನು ಈ ವಿಷಯವನ್ನು ಮುಂದೆ ಅರ್ಧ ಗಂಟೆಯ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ವಿನಂತಿ ಮಾಡಿಕೊಂಡಾಗ ಅವರು ಅರ್ಧಗಂಟೆಯ ಚರ್ಚೆಗೆ ಇವತ್ತಿನ ದಿವಸ ಅವಕಾಶ ಕೊಟ್ಟಿರುವುದಕ್ಕೆ ಅಭಿನಂದಿಸುತ್ತೇನೆ ಇದರಲ್ಲಿ ಕೇಳಿದ ವಿಚಾರ ಇಷ್ಟೆ: ವ್ಯವಸಾಯೋತ್ಪನ್ನ ಮಾರುಕಟ್ಟೆಯ ಸಮಿತಿ ಕಾರ್ಯಾಚರಣೆಯಲ್ಲಿದೆಯೇ ಎಂದು ಕೇಳಿದ್ದಕ್ಕೆ ಇದೆಯೆಂದು ಹೇಳಿದರು ಆದರೆ ಅಲ್ಲಿ ನೇಮಿಸಿರತಕ್ಕ ಅಧಿಕಾರಿಗಳು ಯಾರು ? ಮತ್ತು ಅಲ್ಲಿ ಸಬ್ ಕಮಿಟಿ ಮಾಡಿದ್ದರೆ ಅದರ ಸದಸ್ಯರು ಯಾರು ಎನ್ನುವುದು ಮೂಲಭೂತವಾದ ಪ್ರಶ್ನೆ. ಆದರೆ ಇಲ್ಲಿಯವರೆಗೆ ಬಿಜಾಪುರ ಮಾರ್ಕೆಟ್ ಕಮಿಟಿಯವರು ಇದರ ಬಗ್ಗೆ ಯಾವುದೇ ವಿಚಾರ ಮಾಡದೆ ಇದ್ದು ಒಂದು ಉಪ